ಸಂಪುಟ: 06 ಸಂಚಿಕೆ: 221 ಪುಟಗಳು: 08 ಮಂಗಳವಾರ 27 ಅಕ್ಟೋಬರ್ 2026 www.udayavahini.in epaper.udayavahini.in Udayavahini news Udayavahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ RNI No. KARKAN/2021/80833 9448225696 +91 8035621249 ₹5

ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

ಮುಂಜಾನೆ ಮಾತು

ಬೇರೆಯವರ ಮಾತುಗಳನ್ನು ವೈಯಕ್ತಿಕವಾಗಿ ತೆಗೆದುಕೊಳ್ಳಬೇಡಿ. ಅವರ ಮಾತುಗಳು ಅವರ ಮನಸ್ಸಿನ ಪ್ರತಿಬಿಂಬವೇ ಹೊರತು, ನಿಮ್ಮ ಮನಸ್ಸಿನದ್ದಲ್ಲ.

ನ.1ರಿಂದ ದೆಹಲಿಗೆ 10 ಲಕ್ಷಕ್ಕೂ ಹೆಚ್ಚು ಎನ್‌ಸಿಆರ್ ವಾಹನಗಳ ಪ್ರವೇಶಕ್ಕೆ ನಿರ್ಬಂಧ

• ಉದಯವಾಹಿನಿ, ಬೆಂಗಳೂರು

ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಚಳಿಗಾಲದ ವಾಯುಮಾಲಿನ್ಯ ನಿಯಂತ್ರಿಸುವ ಉದ್ದೇಶದಿಂದ ನವೆಂಬರ್ 1ರಿಂದ ಮಹತ್ವದ ವಾಹನ ನಿರ್ಬಂಧ ಜಾರಿಗೆ ಬರಲಿದೆ.

ಭಾರತ್ ಸ್ಟೇಜ್-6 (ಬಿಎಸ್-6) ಮಾಲಿನ್ಯ ನಿಯಂತ್ರಣ ಮಾನದಂಡಗಳನ್ನು ಪೂರೈಸದ, ದೆಹಲಿಯ ಹೊರಗೆ ನೋಂದಣಿಯಾಗಿರುವ ವಾಹನಗಳಿಗೆ ರಾಜಧಾನಿ ಪ್ರವೇಶಿಸಲು ಅವಕಾಶ ಇರುವುದಿಲ್ಲ. ಈ ಕ್ರಮದಿಂದ ನೆರೆಯ ರಾಷ್ಟ್ರೀಯ ರಾಜಧಾನಿ ವಲಯದ 10 ಲಕ್ಷಕ್ಕೂ ಹೆಚ್ಚು ವಾಹನಗಳ ಮೇಲೆ ಪರಿಣಾಮ ಬೀರುವ ಸಾಧ್ಯತೆಯಿದೆ. ಈ ನಿರ್ಬಂಧವು ನವೆಂಬರ್ 1ರಿಂದ ಜನವರಿ 31ರವರೆಗೆ ಜಾರಿಯಲ್ಲಿರಲಿದೆ. ದೆಹಲಿಗೆ ಪ್ರತಿನಿತ್ಯ ಉದ್ಯೋಗ, ವ್ಯಾಪಾರ ಹಾಗೂ ಇತರ ಕೆಲಸಗಳಿಗಾಗಿ ಸಂಚರಿಸುವ ವಾಹನ ಸವಾರರಿಗೆ ಈ ನಿರ್ಧಾರದಿಂದ ತೊಂದರೆಯಾಗುವ ಸಾಧ್ಯತೆಯಿದೆ.

ಗುರುಗ್ರಾಮ ಮತ್ತು ಫರೀದಾಬಾದ್‌ನಲ್ಲಿ ಬಿಎಸ್-6 ಮಾನದಂಡ ಪೂರೈಸದ ಸುಮಾರು ಎರಡು ಲಕ್ಷ ವಾಹನಗಳಿವೆ. ಈ ಪೈಕಿ ಶೇ.70ರಷ್ಟು ವಾಹನಗಳು ಬಿಎಸ್-3 ಮತ್ತು ಬಿಎಸ್-4 ವರ್ಗಕ್ಕೆ ಸೇರಿವೆ. ಈ ಎರಡು ನಗರಗಳಲ್ಲಿ ಸುಮಾರು 50 ಸಾವಿರ ವಾಣಿಜ್ಯ ವಾಹನಗಳು ಕೂಡ ಬಿಎಸ್-6 ಮಾನದಂಡಕ್ಕಿಂತ ಕೆಳಮಟ್ಟದಲ್ಲಿವೆ.

ಇಂದಿನ ಬಹುತೇಕ ಮುಸ್ಲಿಮರು ಹಿಂದಿನ ಎಸ್‌ಸಿ, ಎಸ್‌ಟಿ ಸಮುದಾಯದವರು

• ಉದಯವಾಹಿನಿ, ಬೆಂಗಳೂರು

ಮುಸ್ಲಿಂ ಸಮುದಾಯ ಮತ್ತು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಸಮುದಾಯಗಳು ಬೇರೆ ಬೇರೆಯಲ್ಲ. ಇಂದಿನ ಬಹುತೇಕ ಮುಸ್ಲಿಮರು ಹಿಂದಿನ ಎಸ್‌ಸಿ, ಎಸ್‌ಟಿ ಸಮುದಾಯದವರು ಎಂದು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ಸಚಿವ ರಿಜ್ವಾನ್ ಅರ್ಷದ್ ಹೇಳಿದ್ದಾರೆ. ವಿಧಾನಸೌಧ ಬ್ಯಾಂಕ್ವೆಟ್ ಹಾಲ್‌ನಲ್ಲಿ ನಡೆದ ವಾಲ್ಮೀಕಿ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು ದಲಿತ ಮತ್ತು ಮುಸ್ಲಿಂ ಸಮುದಾಯಗಳ ನಡುವಿನ ಸಾಮಾಜಿಕ ಬಾಂಧವ್ಯದ ಕುರಿತು ಮಾತನಾಡುತ್ತಾ ಈ ಅಭಿಪ್ರಾಯ ವ್ಯಕ್ತಪಡಿಸಿದರು. ದಲಿತ ಕೇರಿಗಳು ಎಲ್ಲೆಲ್ಲಿ ಇರುತ್ತವೆಯೋ, ಮುಸ್ಲಿಮರು ಕೂಡ ಅದೇ ಪರಿಸರದಲ್ಲಿ ವಾಸಿಸುತ್ತಾರೆ. ನಮ್ಮ ಪೂರ್ವಿಕರು ಯಾವ ಕಾರಣಕ್ಕಾಗಿ ಮತಾಂತರಗೊಂಡರು ಎಂಬುದು ಎಲ್ಲರಿಗೂ ಗೊತ್ತಿರುವ ವಿಚಾರವೇ ಆಗಿದೆ. ಧರ್ಮ ಬದಲಾವಣೆಯಾದ ಮಾತ್ರಕ್ಕೆ ಮೈಯಲ್ಲಿ ಹರಿಯುವ ರಕ್ತ ಬದಲಾಗುವುದಿಲ್ಲ. ಹೀಗಾಗಿ ನಾವೆಲ್ಲರೂ ಒಂದೇ ಸಮುದಾಯದವರು, ನಮ್ಮ ನಡುವೆ ಯಾವುದೇ ಭೇದಭಾವವಿಲ್ಲ. ಒಂದು ರೀತಿಯಲ್ಲಿ ಹೇಳಬೇಕೆಂದರೆ ಮುಸ್ಲಿಮರೆಲ್ಲರೂ ಮಾಜಿ ದಲಿತರು ಎಂದು ಪ್ರತಿಪಾದಿಸಿದರು.

ಪಿ.ಎಸ್.ಲೇನ್ ರಸ್ತೆಯಲ್ಲಿ ಏಕಾಏಕಿ ಕುಸಿದ ಕಾಂಪೌಂಡ್; ಹಲವು ಬೈಕ್‌ಗಳು ಜಖಂ



• ಉದಯವಾಹಿನಿ, ಬೆಂಗಳೂರು

ನಗರದಲ್ಲಿ ಬೌರಿಂಗ್ ಆಸ್ಪತ್ರೆ ಗೋಡೆ ಕುಸಿತದ ನಂತರ ಮತ್ತೊಂದು ಗೋಡೆ ಕುಸಿತದ ಘಟನೆ ವರದಿಯಾಗಿದೆ.

ಚಿಕ್ಕಪೇಟೆಯ ಪಿ.ಎಸ್. ಲೇನ್ ರಸ್ತೆಯಲ್ಲಿ ಕಾಂಪೌಂಡ್ ಗೋಡೆಯೊಂದು ಅನಿರೀಕ್ಷಿತವಾಗಿ ಕುಸಿದುಬಿದ್ದಿದ್ದು, ಅದೃಷ್ಟವಶಾತ್ ಯಾವುದೇ ಪ್ರಾಣಹಾನಿ ಸಂಭವಿಸಿಲ್ಲ.

ಕಾಂಪೌಂಡ್ ಗೋಡೆ ಕುಸಿದ ಪರಿಣಾಮ ರಸ್ತೆಯ ಪಕ್ಕದಲ್ಲಿ ಸಾಲಾಗಿ ನಿಲ್ಲಿಸಿದ್ದ ಸುಮಾರು ನಾಲ್ಕೈದು ದ್ವಿಚಕ್ರ ವಾಹನಗಳು ಹಾನಿಗೊಳಗಾಗಿವೆ. ಗೋಡೆ ಕುಸಿತಕ್ಕೆ ನಿಖರ ಕಾರಣ ತಿಳಿದುಬಂದಿಲ್ಲ. ಗೋಡೆಯು ಶಿಥಿಲಗೊಂಡಿತ್ತೇ ಅಥವಾ ಇನ್ಯಾವುದಾದರೂ ಕಾರಣದಿಂದ ಕುಸಿದಿದೆಯೇ ಎಂಬುದರ ಬಗ್ಗೆ ಇನ್ನಷ್ಟೇ ಗೊತ್ತಾಗಬೇಕಿದೆ.

ಅರ್ಹ ಕನ್ನಡಿಗರಿಗೆ ಉದ್ಯೋಗ ನೀಡುವುದು ಉದ್ಯಮಿಗಳ ಜವಾಬ್ದಾರಿ: ಡಿಸಿಎಂ ಜಿ.ಪರಮೇಶ್ವರ್

• ಉದಯವಾಹಿನಿ, ಬೆಂಗಳೂರು

ರಾಜ್ಯದಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸುವ ಉದ್ಯಮಿಗಳು ಅರ್ಹ ಸ್ಥಳೀಯ ಕನ್ನಡಿಗರಿಗೆ ಉದ್ಯೋಗಾವಕಾಶಗಳನ್ನು ಕಲ್ಪಿಸಬೇಕು. ಕೈಗಾರಿಕೆಗಳಿಗೆ ಭೂಮಿ, ವಿದ್ಯುತ್, ನೀರು ಸೇರಿದಂತೆ ಅಗತ್ಯ ಸೌಲಭ್ಯಗಳನ್ನು ಸರ್ಕಾರ ಒದಗಿಸುತ್ತಿದ್ದು, ಅದಕ್ಕೆ ಅನುಗುಣವಾಗಿ ಅರ್ಹ ಕನ್ನಡಿಗರಿಗೆ ಉದ್ಯೋಗ ನೀಡುವ ಬದ್ಧತೆಯನ್ನು ಕೈಗಾರಿಕೆಗಳು ಪಾಲಿಸಬೇಕು ಎಂದು ಉಪ ಮುಖ್ಯಮಂತ್ರಿ ಡಾ. ಜಿ ಪರಮೇಶ್ವರ್ ಹೇಳಿದರು.

ಸದಾಶಿವನಗರದ ತಮ್ಮ ನಿವಾಸದ ಬಳಿ ಸೋಮವಾರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಕೈಗಾರಿಕೆಗಳಲ್ಲಿ ಸ್ಥಳೀಯರಿಗೆ ಉದ್ಯೋಗ ನೀಡಬೇಕೆಂಬುದು ಹೊಸ ವಿಚಾರವಲ್ಲ. ಮೊದಲಿನಿಂದಲೂ ಈ ನೀತಿ ಜಾರಿಯಲ್ಲಿದ್ದು, ಅದನ್ನು ಕೈಗಾರಿಕೆಗಳು ಪಾಲಿಸಬೇಕು ಎಂದು ತಿಳಿಸಿದರು.

ಬೆಂಗಳೂರು ರಸ್ತೆ ಕಾಮಗಾರಿ ವಿಳಂಬ: ಗುತ್ತಿಗೆದಾರರು, ಜಿಬಿಎ ಅಧಿಕಾರಿಗಳಿಗೆ ಸಚಿವ ಕೃಷ್ಣಬೈರೇಗೌಡ ಕ್ಲಾಸ್

• ಉದಯವಾಹಿನಿ, ಬೆಂಗಳೂರು

ಬೆಂಗಳೂರಿನಲ್ಲಿ ರಸ್ತೆ ಕಾಮಗಾರಿಗಳಲ್ಲಿ ವಿಳಂಬ ಹಾಗೂ ಕಳಪೆ ಗುಣಮಟ್ಟದ ಕಾರ್ಯನಿರ್ವಹಣೆ ಗಮನಿಸಿದ ನಗರಾಭಿವೃದ್ಧಿ ಸಚಿವ ಕೃಷ್ಣಬೈರೇಗೌಡ ಗುತ್ತಿಗೆದಾರರು ಮತ್ತು ಗ್ರೇಟರ್ ಬೆಂಗಳೂರು ಅಥಾರಿಟಿ ಅಧಿಕಾರಿಗಳನ್ನು ತೀವ್ರ ತರಾಟೆ ತೆಗೆದುಕೊಂಡಿದ್ದಾರೆ. ಸೋಮವಾರ ನಗರದಾದ್ಯಂತ ಸಂಚರಿಸಿ ಕಾಮಗಾರಿಗಳನ್ನು ಪರಿಶೀಲಿಸಿದ ಸಚಿವರು, ವೈಟ್ ಟಾಪಿಂಗ್ ಕಾಮಗಾರಿಗಳಲ್ಲಿನ ವಿಳಂಬದ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. ನಿಮ್ಮ ತಪ್ಪಿಗೆ ನಾವು ಜನರಿಂದ ಬೈಸಿಕೊಳ್ಳಬೇಕಾಗಿದೆ. ರಸ್ತೆ ಕಾಮಗಾರಿ ಇಷ್ಟು ವಿಳಂಬವಾದರೆ ಜನರ ಮುಂದೆ ನಾವು ತಲೆ ತಗ್ಗಿಸಬೇಕಾಗುತ್ತದೆ' ಎಂದು ಸಚಿವರು ಕಟುವಾಗಿ ಹೇಳಿದರು. ಸಾರ್ವಜನಿಕರಿಂದ ಬರುವ ಟೀಕೆಗಳನ್ನು ಸರ್ಕಾರ ಮತ್ತು ತಮ್ಮ ಮೇಲೆ ಹಾಕುತ್ತಿರುವುದಕ್ಕೆ ಅವರು ಬೇಸರ ವ್ಯಕ್ತಪಡಿಸಿದರು.

50-40 ಕೋಟಿ ರೂ.ಗಳ ರಸ್ತೆ ಯೋಜನೆಗಳಲ್ಲಿನ ಪ್ರಗತಿಯ ಕೊರತೆಯನ್ನು ಎತ್ತಿ ತೋರಿಸಿದರು.

ಕಾಮಗಾರಿಗಳ ತ್ವರಿತ ಪೂರ್ಣಗೊಳಿಸುವಿಕೆಗೆ ಒತ್ತು ನೀಡಿದ ಸಚಿವರು, ವಿಳಂಬಕ್ಕೆ ಕಾರಣಗಳನ್ನು ಸ್ಪಷ್ಟಪಡಿಸುವಂತೆ ಅಧಿಕಾರಿಗಳನ್ನು ಆಗ್ರಹಿಸಿದರು. ಅಲ್ಲದೆ, ನಗರದಲ್ಲಿ ಅನುಮತಿ ಇಲ್ಲದೆ ನಿರ್ಮಿಸಲಾಗುತ್ತಿರುವ ಗಗನಚುಂಬಿ ಕಟ್ಟಡಗಳ ಬಗ್ಗೆಯೂ ಅವರು ಪ್ರಶ್ನಿಸಿ, ಇಂತಹ ಬೆಳವಣಿಗೆಗಳ ಮೇಲೆ ನಿಯಂತ್ರಣ ಸಾಧಿಸುವ ಅಗತ್ಯವನ್ನು ಪ್ರತಿಪಾದಿಸಿದರು.

ಕಬ್ಬಿಗೆ ಬೆಲೆ ನಿಗದಿ ವಿಚಾರಕ್ಕೆ ಸಂಬಂಧಿಸಿ ರೈತ ಮುಖಂಡರ ಸಭೆಯಲ್ಲಿ ಹೊಡೆದಾಟ ನಡೆದಿದ್ದು, ಬೆಳಗಾವಿಯ ಸುವರ್ಣ ವಿಧಾನಸೌಧ ರಣಾಂಗಣವಾಗಿ ಮಾರ್ಪಟ್ಟಿದೆ. ಕೋಡಿಹಳ್ಳಿ ಚಂದ್ರಶೇಖರ್ ಮತ್ತು ಚೂನಪ್ಪ ಪೂಜಾರಿ ಬಣಗಳು ಕೈ ಕೈ ಮಿಲಾಯಿಸಿದ್ದು, ಗಲಾಟೆ ನಿಯಂತ್ರಿಸಲು ಪೊಲೀಸ್ ಸಿಬ್ಬಂದಿ ಹರಸಾಹಸಪಟ್ಟಿದ್ದಾರೆ. ಸಭಾಂಗಣದಲ್ಲಿ ಕುಡಿಯಲು ನೀರಿಲ್ಲ, ಚಹಾ ಇಲ್ಲವೆಂದು ಮೊದಲು ಗಲಾಟೆ ಶುರುವಾಗಿತ್ತು. ನಂತರ ಎಲ್ಲರನ್ನೂ ಚೂನಪ್ಪ ಪೂಜಾರಿ ಸಮಾಧಾನ ಮಾಡಿದ್ದರು. ಆದರೆ ಭಾಷಣ ವೇಳೆ ಚೂನಪ್ಪ ಪೂಜಾರಿ ಹೇಳಿಕೆಗೆ ಕೋಡಿಹಳ್ಳಿ ಚಂದ್ರಶೇಖರ್ ಬಣ ವಿರೋಧಿಸಿದ ಕಾರಣ ಗಲಾಟೆ ತೀವ್ರ ಸ್ವರೂಪ ಪಡೆದಿದೆ. ಭಾಷಣ ವೇಳೆ 4500 ಪಡೆದೇ ತೀರೋಣವೆಂದು ಚೂನಪ್ಪ ಪೂಜಾರಿ ಹೇಳಿದ್ದಕ್ಕೆ ಕೋಡಿಹಳ್ಳಿ ಚಂದ್ರಶೇಖರ್ ಬಣದ ವಿರೋಧ ವ್ಯಕ್ತಪಡಿಸಿದೆ. ಹೊರಗೆ ಪ್ರತಿ ಟನ್ ಕಬ್ಬಿಗೆ 5,500 ರೂ. ನಿಗದಿ ಮಾಡಬೇಕೆಂದು ಹೇಳುತ್ತೀರಿ. ಸುವರ್ಣಸೌಧದ ಒಳಗೆ ಪ್ರತಿ ಟನ್ ಕಬ್ಬಿಗೆ 4,500 ರೂ. ಅಂತಿದ್ದೀರಿ. ನೀವು ಸೂಟ್ ಕೇಸ್ ಗಿರಾಕಿ ಎಂದು ಕೋಡಿಹಳ್ಳಿ ಬಣದ ರೈತರು ಆರೋಪಿಸಿದ್ದಾರೆ. ಇದೇ ವಿಚಾರಕ್ಕೆ ಚೂನಪ್ಪ ಪೂಜಾರಿ ಬಣದ ರೈತರು ಸಿಡಿದಿದ್ದು, ಎರಡೂ ಬಣಗಳು ಪರಸ್ಪರ ಹೊಡೆದಾಡಿವೆ. ಗಲಾಟೆ ಆರಂಭಿಸಿದ್ದ ಇಬ್ಬರು ರೈತರನ್ನು ಪೊಲೀಸರು ಹೊರಗೆ ಕರೆದೊಯ್ದಿದ್ದು, ಪೊಲೀಸರ ಮಧ್ಯಪ್ರವೇಶದಿಂದ ಸಭೆಯಲ್ಲಿ ವಾತಾವರಣ ತಿಳಿಯಾಗಿದೆ.

ಸಿಎಂ ಡಿಕೆಶಿ ಅಸಮಾಧಾನ

ಕಾರ್ಖಾನೆ ಮಾಲೀಕರ ಜೊತೆಗಿನ ಸಭೆ ಮುಕ್ತಾಯ; ರೈತರನ್ನು ವಿಶ್ವಾಸಕ್ಕೆ ಪಡೆಯುವಲ್ಲಿ ಮಾಲೀಕರು ವಿಫಲ

ಸಕ್ಕರೆ ಕಾರ್ಖಾನೆ ಮಾಲೀಕ ಸಂಗಮೇಶ ನಿರಾಣಿ ಹೇಳಿದ್ದಿಷ್ಟು

ಸಭೆ ಬಳಿಕ ಮಾಧ್ಯಮಗಳ ಜೊತೆಗೆ ಮಾತನಾಡಿದ ಸಕ್ಕರೆ ಕಾರ್ಖಾನೆ ಮಾಲೀಕ ಸಂಗಮೇಶ ನಿರಾಣಿ, ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನೇತೃತ್ವದಲ್ಲಿ ನಡೆದ ಮಹತ್ವದ ಸಭೆಯಲ್ಲಿ ಕಬ್ಬು ಬೆಳೆಗಾರರು ಹಾಗೂ ಸಕ್ಕರೆ ಕಾರ್ಖಾನೆಗಳಿಗೆ ಸಂಬಂಧಿಸಿದ ಹಲವು ವಿಚಾರಗಳ ಕುರಿತು ಚರ್ಚೆ ನಡೆಸಲಾಗಿದೆ. ರೈತರು, ಸಕ್ಕರೆ ಕಾರ್ಖಾನೆಗಳು ಹಾಗೂ ಸರ್ಕಾರದ ನಡುವೆ ಸಮನ್ವಯತೆ ಕಾಪಾಡುವ ನಿಟ್ಟಿನಲ್ಲಿ ಸಭೆಯಲ್ಲಿ ಚರ್ಚೆ ನಡೆದಿದೆ ಎಂದರು.

ರೈತರು ಹಾಗೂ ಸಕ್ಕರೆ ಕಾರ್ಖಾನೆಗಳ ಹಿತಾಸಕ್ತಿಯನ್ನು ಕಾಪಾಡುವ ಉದ್ದೇಶದಿಂದ ಹಲವು ಪ್ರಮುಖ ವಿಚಾರಗಳನ್ನು ಸಭೆಯಲ್ಲಿ ಚರ್ಚಿಸಲಾಗಿದೆ. ರೈತರು ಮತ್ತು ಕಾರ್ಖಾನೆಗಳು ಎರಡೂ ಉಳಿಯುವಂತಹ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಮಾತುಕತೆ ನಡೆದಿದೆ. ಇನ್ನೂ ಕೆಲವು ವಿಚಾರಗಳ ಕುರಿತು ಚರ್ಚೆ ನಡೆಸಬೇಕಿರುವುದರಿಂದ ಸಂಜೆ ಮತ್ತೊಮ್ಮೆ ಸಭೆ ನಡೆಯಲಿದೆ. ಸಂಜೆ ನಡೆಯುವ ಸಭೆಯಲ್ಲಿ ಸಮಸ್ಯೆಗಳಿಗೆ ಪರಿಹಾರ ದೊರೆಯುವ ನಿರೀಕ್ಷೆಯಿದೆ ಎಂದು ಸಂಗಮೇಶ ನಿರಾಣಿ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ರಾಜ್ಯದಲ್ಲಿ ಶಾಂತಿ ಕಾಪಾಡುವುದು ನಮ್ಮ ಕರ್ತವ್ಯ

ಇಲ್ಲಿ ಸಕ್ಕರೆ ಕಾರ್ಖಾನೆ ಮಾಲೀಕರಿಗೆ ಅನೇಕ ಸಮಸ್ಯೆಗಳಿವೆ. ಹಣಕಾಸು, ಬ್ಯಾಂಕ್, ಎಥನಾಲ್, ವಿದ್ಯುತ್ ಬೆಲೆ ಸಮಸ್ಯೆ ಸೇರಿ ಅನೇಕ ವಿಚಾರಗಳಿವೆ. ಹೀಗಾಗಿ ನಾನೊಬ್ಬನೇ ತೀರ್ಮಾನ ಮಾಡಲು ಆಗುವುದಿಲ್ಲ. ಹೀಗಾಗಿ ಎಲ್ಲರ ಜತೆ ಚರ್ಚಿಸುತ್ತೇನೆ ಎಂದು ರೈತರ ಬಳಿ ಸಮಯ ಕೇಳಿದ್ದೆ. ಇಂದು ಇಡೀ ಸರ್ಕಾರ ನಿಮ್ಮ ಮುಂದೆ ಬಂದು ಕೂತಿದೆ. ಶಾಸಕರು ಹಾಗೂ ಸಂಸದರಿಗೆ ತಮ್ಮದೇ ಆದ ಒತ್ತಡಗಳು ಇರುತ್ತವೆ. ಈ ಸಮಸ್ಯೆಗೆ ಸೌಹಾರ್ದತೆ ಮೂಲಕ ಪರಿಹಾರ ಕಂಡು ಹಿಡಿಯಬೇಕು. ಇದು ರಾಜಕಾರಣ ಮಾಡುವ ಸಭೆಯಲ್ಲ. ಅದಕ್ಕೆ ಬೇರೆ ವೇದಿಕೆಗಳಿವೆ ಎಂದು ಕಾರ್ಖಾನೆ ಮಾಲೀಕರಿಗೆ ಡಿ.ಕೆ.ಶಿವಕುಮಾರ ಕಿವಿಮಾತು ಹೇಳಿದ್ದಾರೆ.

ನಾವು ರೈತರ ಪಂಪ್ ಸೆಟ್‌ಗಳಿಗೆ ಉಚಿತ ವಿದ್ಯುತ್ ನೀಡಲು ವಾರ್ಷಿಕ 20 ಸಾವಿರ ಕೋಟಿ ರೂ. ವೆಚ್ಚ ಮಾಡುತ್ತಿದ್ದು, ಈ ವರ್ಷ 32 ಸಾವಿರ ಕೋಟಿ ನೀಡಬೇಕಾಗಿದೆ. ಮಳೆ ಕೊರತೆ ಹಿನ್ನೆಲೆಯಲ್ಲಿ ರೈತರು ಹೆಚ್ಚು ವಿದ್ಯುತ್ ಬಳಸುತ್ತಿದ್ದಾರೆ. ಕಬ್ಬು ಇಳುವರಿ ಕಡಿಮೆಯಾಗಿದೆ. ಸಕ್ಕರೆ ಉತ್ಪಾದನೆ ಕುಸಿದಿದೆ. ಇಲ್ಲಿ ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಮಟ್ಟದ ಸಮಸ್ಯೆಗಳಿವೆ. ನಮಗೆ ರೈತರು ಹಾಗೂ ಸಕ್ಕರೆ ಕಾರ್ಖಾನೆ ಮಾಲೀಕರ ಬದುಕು ಮುಖ್ಯ. ನಾನು ಮಹಾರಾಷ್ಟ್ರ ಸಿಎಂ ಜತೆಗೂ ಚರ್ಚೆ ಮಾಡಿದ್ದು, ಈ ವಿಚಾರ ಬಗೆಹರಿಸಬೇಕು ಎಂದು ಅಭಿಪ್ರಾಯಪಟ್ಟಿದ್ದಾರೆ ಎಂದರು.

ರೈತರ ಹಿತ ಮುಖ್ಯ. ಹಾಗಾಗಿ ಇಂದು ರೈತರ ಜೊತೆ ಸಕ್ಕರೆ ಕಾರ್ಖಾನೆ ಜೊತೆ ಹಾಗೂ ಜನಪ್ರತಿನಿಧಿಗಳ ಜೊತೆ ಸಭೆ ನಡೆಸಿ, ಎಲ್ಲರ ಅಭಿಪ್ರಾಯಗಳನ್ನು ಆಲಿಸಿ, ಒಂದು ಸೂಕ್ತ ತೀರ್ವಾನ ಕೈಗೊಳ್ಳುವುದಾಗಿ ಹೇಳಿದರು. ಕಬ್ಬು ಬೆಳೆಗಾರರ ಬೇಡಿಕೆ ಈಡೇರಿಕೆ ನಿಟ್ಟಿನಲ್ಲಿ ಕೇಂದ್ರ ಸರ್ಕಾರವನ್ನು ವಿಶ್ವಾಸ ತೆಗೆದುಕೊಳ್ಳಲೇ ಬೇಕು. ಕೇಂದ್ರದ್ದೇ ಹೆಚ್ಚು ಜವಾಬ್ದಾರಿ ನಮ್ಮದೇನಿದ್ದರೂ ಶೇ. 10 ರಷ್ಟೇ ಜವಾಬ್ದಾರಿ. ಹಾಗಾಗಿ ಎಲ್ಲರನ್ನು ವಿಶ್ವಾಸಕ್ಕೆ ತೆಗೆದುಕೊಂಡೇ ಕಬ್ಬು ಬೆಳೆಗಾರರ ಸಮಸ್ಯೆ ಪರಿಹಾರ ಕಂಡುಕೊಳ್ಳುತ್ತೇವೆ ಎಂದರು. ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್

ಧಕ್ಕೆಯಾದರೆ ಹುಷಾರ್

ಸುವರ್ಣಸೌಧದಲ್ಲಿ ರೈತರ 2 ಬಣಗಳ ಮಧ್ಯೆ ಗಲಾಟೆ ಸಂಬಂಧ ಗುರ್ಲಾಪುರ ಗ್ರಾಮದಲ್ಲಿ ಮಾತನಾಡಿರುವ ರೈತ ಮುಖಂಡ ಶಶಿಕಾಂತ್ ಗುರೂಜಿ, ಚೂನಪ್ಪ ಪೂಜಾರಿಗೆ ಏನಾದರೂ ಧಕ್ಕೆಯಾದರೆ ಹುಷಾರ್ ಎಂದು ಎಚ್ಚರಿಕೆ ನೀಡಿದ್ದಾರೆ. ಉತ್ತರ ಕರ್ನಾಟಕದ ಯಾವೊಬ್ಬ ಶಾಸಕರು ಮನೆಯಿಂದ ಹೊರಗೆ ಬರದಂತೆ ಹೋರಾಟ ಮಾಡುತ್ತೇವೆ. ರೈತರ ಗಲಾಟೆಯನ್ನು ಸಿಎಂ ಗಂಭೀರವಾಗಿ ಪರಿಗಣಿಸಬೇಕು. ನಮ್ಮನ್ನು ಟೀಕೆ ಮಾಡಿದರೂ ಕೂಡ ನಾವು ಸುಮ್ಮನಿದ್ದೇವೆ ಎಂದವರು ಹೇಳಿದ್ದಾರೆ. ಇನ್ನು ರೈತರ ಗಲಾಟೆ ವಿಚಾರವಾ ರೈತ ಮುಖಂಡ ಚೂನಪ್ಪ ಪೂಜಾರಿ ಪ್ರತಿಕ್ರಿಯಿಸಿದ್ದು, ಉದ್ದೇಶಪೂರ್ವಕವಾಗಿ ಬಂದು ಗಲಾಟೆ ಮಾಡಿದ್ದಾರೆ.

• ಉದಯವಾಹಿನಿ, ಬೆಂಗಳೂರು

ರೈತ ಮುಖಂಡರೊಂದಿಗೆ ಚರ್ಚೆ ಮಾಡೋಣ, ಕಬ್ಬು ಬೆಳೆಗಾರರ ಬಗ್ಗೆ ಸಕ್ಕರೆ ಕಾರ್ಖಾನೆಗಳು ಹೃದಯ ಶ್ರೀಮಂತಿಕೆ ತೋರಬೇಕು. ಇಬ್ಬರೂ ಸೇರಿ ಒಂದು ತೀರ್ಮಾನಕ್ಕೆ ಬರೋಣ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಮನವಿ ಮಾಡಿದ್ದಾರೆ. ಬೆಳಗಾವಿ ಸುವರ್ಣ ವಿಧಾನಸೌಧದಲ್ಲಿ ಸಕ್ಕರೆ ಕಾರ್ಖಾನೆ ಮಾಲೀಕರ ಜೊತೆಗೆ ಮಹತ್ವದ ಸಭೆ ಕರೆಯಲಾಗಿತ್ತು. ಇಲ್ಲಿ 2 ಗಂಟೆಗೂ ಅಧಿಕ ಕಾಲ ಸಭೆ ನಡೆಯಿತು. ಸಚಿವರಾದ ಎಂ.ಬಿ.ಪಾಟೀಲ್, ಸತೀಶ ಜಾರಕಿಹೊಳಿ, ಎಸ್.ಎಸ್.ಮಲ್ಲಿಕಾರ್ಜುನ, ಲಕ್ಷ್ಮಣ ಸವದಿ, ಚೆಲುವರಾಯಸ್ವಾಮಿ, ಸಂತೋಷ ಲಾಡ್, ರುದ್ರಪ್ಪ ಲಮಾಣಿ ಮತ್ತಿತರರು ಪಾಲ್ಗೊಂಡಿದ್ದರು. ಸಕ್ಕರೆ ಕಾರ್ಖಾನೆ ಮಾಲೀಕರಾದ ಡಾ.ಪ್ರಭಾಕರ ಕೋರೆ, ಸಂಗಮೇಶ ನಿರಾಣಿ, ಶ್ರೀಮಂತ ಪಾಟೀಲ್, ಅಜಯ್ ಕುಮಾರ ಸರನಾಯಕ್ ಸೇರಿ 81 ಕಾರ್ಖಾನೆಗಳ ಮಾಲೀಕರು, ಅಧಿಕಾರಿಗಳು ಪಾಲ್ಗೊಂಡಿದ್ದರು. ಸಭೆಯಲ್ಲಿ ಮಾತನಾಡಿರುವ ಮುಖ್ಯಮಂತ್ರಿ, ರೈತರ ಸಮಸ್ಯೆ, ಕಾರ್ಖಾನೆ ಸಮಸ್ಯೆಗಳನ್ನು ಆಲಿಸಿದ್ದೇವೆ. ಕೇಂದ್ರ ಸರ್ಕಾರ ರಚಿಸಿರುವ ಸಮಿತಿ ಪ್ರಗತಿ ಬಗ್ಗೆ ಸಂಸದರು ಹೇಳಿದ್ದಾರೆ. ಎಥನಾಲ್ ಮೊಲಾಸಿಸ್ ಬಗ್ಗೆ ರಾಷ್ಟ್ರ ಮಟ್ಟದಲ್ಲಿ ಚರ್ಚೆ ಆಗುತ್ತಿದೆ. ನಮ್ಮ ರಾಜ್ಯದವರೇ ಆದ ಪ್ರಲ್ಹಾದ್ ಜೋಶಿಯವರು ಕೇಂದ್ರ ಸಚಿವರಿದ್ದು ಒತ್ತಡ ಹಾಕೋಣ. ಅವರಿಗೂ ಇಲ್ಲಿನ ಪರಿಸ್ಥಿತಿ ಗೊತ್ತಿದೆ. ಇಲ್ಲಿ ಆರೋಪ ಪ್ರತ್ಯಾರೋಪ ಮಾಡುವುದರಲ್ಲಿ ಅರ್ಥವಿಲ್ಲ. ಕಳೆದ ವರ್ಷ ವಾಹನಗಳಿಗೆ ಬೆಂಕಿ ಹಾಕಲಾಗಿತ್ತು, ಅಂತಹ ಘಟನೆ ಸಂಭವಿಸಬಾರದು ಎಂದರು. ಕಾರ್ಖಾನೆ ಇಲ್ಲವಾದರೆ ರೈತರಿಗೆ ತೊಂದರೆ. ರೈತರಿಲ್ಲ ಎಂದರೆ ಕಾರ್ಖಾನೆಗಳಿಗೆ ತೊಂದರೆ. ಹೀಗಾಗಿ ಎಲ್ಲರ ರಕ್ಷಣೆ ಮಾಡಬೇಕು. ನಾನು ಪ್ರಹ್ಲಾದ ಜೋಶಿ ಅವರನ್ನು ಭೇಟಿ ಮಾಡಿದ್ದೆ. ಅವರು ಕೂಡ ನಮ್ಮ ರಾಜ್ಯದ ರೈತರ ವಿಚಾರ ಎಂದು ಈ ಬಗ್ಗೆ ಗಮನ ಹರಿಸಿದ್ದಾರೆ. ಇದು ದೇಶದ ವಿಚಾರವಾಗಿದೆ. ಹೀಗಾಗಿ ಈ ವಿಚಾರದಲ್ಲಿ ರಾಷ್ಟ್ರ ಮಟ್ಟದಲ್ಲಿ ತೀರ್ಮಾನ ಮಾಡಬೇಕಿದೆ ಎಂದು ಡಿ.ಕೆ.ಶಿವಕುಮಾರ ಅಭಿಪ್ರಾಯ ಪಟ್ಟಿದ್ದಾರೆ.

ಕಾರ್ಖಾನೆ ಮಾಲೀಕರು ರೈತರನ್ನು ವಿಶ್ವಾಸಕ್ಕೆ ಪಡೆಯಬೇಕು

ಕೆಲವು ರಾಜ್ಯಗಳ ಚುನಾವಣೆ ಹಿನ್ನೆಲೆಯಲ್ಲಿ ತೀರ್ಮಾನ ಮಾಡುತ್ತಾರೆ. ಅವರ ಆಕ್ರೋಶಕ್ಕೆ ಅವಕಾಶ ನೀಡಬಾರದು. ರೈತರನ್ನು ವಿಶ್ವಾಸಕ್ಕೆ ಪಡೆಯುವಲ್ಲಿ ಸಕ್ಕರೆ ಕಾರ್ಖಾನೆಗಳ ಮಾಲೀಕರು ಸಫಲರಾಗಿಲ್ಲ. ನಿಮಗೆ ಹೊರೆ ಆದರೂ ಒಂದು ಪರಿಹಾರಕ್ಕೆ ಬರುವ ತೀರ್ಮಾನ ಮಾಡಿ ಎಂದು ಸಿಎಂ ಸೂಚಿಸಿದ್ದಾರೆ. ಸಿದ್ದರಾಮಯ್ಯ ಅವರ ನೇತೃತ್ವದ ಸರ್ಕಾರ ರೈತರ ಕೂಗಿಗೆ ಗೌರವ ನೀಡಿ ಕೆಲವು ತೀರ್ಮಾನಗಳನ್ನು ಮಾಡಿತ್ತು. ಸರ್ಕಾರ ಸ್ವಲ್ಪ ಹಣ ನೀಡುವುದು. ಉಳಿದದ್ದನ್ನು ಸಕ್ಕರೆ ಕಾರ್ಖಾನೆ ಮಾಲೀಕರು ನೀಡುವುದು ಎಂದು ಈ ಹಿಂದೆ ತೀರ್ಮಾನ ಆಗಿತ್ತು. ಶೇ.80ರಷ್ಟು ಕಾರ್ಖಾನೆಗಳು ಅದನ್ನು ಪಾಲಿಸಿವೆ. ಕೆಲವರು ಪಾಲಿಸಿಲ್ಲ. ಅವರು ನ್ಯಾಯಾಲಯದ ಮೆಟ್ಟಿಲೇರಿದ್ದಾರೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ರೈತರು, ಮಾಲೀಕರ ರಕ್ಷಣೆ ಮಾಡಬೇಕಾದ ಜವಾಬ್ದಾರಿ ಸರ್ಕಾರಗಳ ಮೇಲಿವೆ. ಕರ್ನಾಟಕ, ಆಂಧ್ರಪ್ರದೇಶ, ಮಹಾರಾಷ್ಟ್ರ, ತೆಲಂಗಾಣ, ಬಿಹಾರ, ಉತ್ತರ ಪ್ರದೇಶ ಸೇರಿದಂತೆ ಬೇರೆ ರಾಜ್ಯಗಳಲ್ಲೂ ಈ ಸಮಸ್ಯೆ ಕಾಡುತ್ತಿದೆ ಎಂದರು. 10 ವರ್ಷಗಳಿಂದ ಸಕ್ಕರೆ ಬೆಲೆ ಏರಿಕೆ ಆಗಿಲ್ಲ. ಕೇಂದ್ರ ಸಚಿವರು ನಮ್ಮ ರಾಜ್ಯದವರೇ ಆಗಿದ್ದು, ಅವರು ತಮ್ಮದೇ ಆದ ಪ್ರಯತ್ನ ಮಾಡುತ್ತಿದ್ದಾರೆ. ಪ್ರತಿಭಟನೆ ಸಮಯದಲ್ಲಿ ನಾನು, ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಶಾಸಕರು ಕಿತ್ತೂರಿನಲ್ಲಿ ರೈತರನ್ನು ಭೇಟಿ ಮಾಡಿ ಅವರ ಅಹವಾಲು ಆಲಿಸಿದ್ದೇವೆ. 10 ವರ್ಷಗಳಿಂದ ಬೆಲೆ ಏರಿಕೆ ಆಗಿಲ್ಲ. ಇದರಿಂದ ರೈತರಿಗೆ ನಷ್ಟ ಹೆಚ್ಚಾಗಿದೆ. ಹೀಗಾಗಿ ಪ್ರತಿ ಟನ್ ಕಬ್ಬಿಗೆ 6 ಸಾವಿರವರೆಗೂ ಬೆಲೆ ನಿಗದಿ ಮಾಡಿ ಪರಿಹಾರ ನೀಡಿ ಎಂದು ರೈತರು ಬೇಡಿಕೆ ಇಟ್ಟಿದ್ದಾರೆ. ಇದಕ್ಕೆ ಪರಿಹಾರ ನೀಡಬೇಕಾಗಿರುವುದು ಸಕ್ಕರೆ ಕಾರ್ಖಾನೆಗಳು, ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರ ಎಂದು ಡಿ.ಕೆ.ಶಿವಕುಮಾರ ವಿವರಿಸಿದ್ದಾರೆ.

ಮಲ್ಲಿಕಾರ್ಜುನ ಖರ್ಗೆ ವಿರುದ್ಧ ಪ್ರತಿಭಟನೆ: ವಿಧಾನಸೌಧ ಮುತ್ತಿಗೆಗೆ ಯತ್ನ, ಬಿಜೆಪಿ ನಾಯಕರು ಪೊಲೀಸರ ವಶಕ್ಕೆ

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ಕಾಂಗ್ರೆಸ್ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ ರಾಜ್ಯ ಬಿಜೆಪಿ ನಾಯಕರು

• ಉದಯವಾಹಿನಿ, ಬೆಂಗಳೂರು

ಪ್ರಧಾನಿ ಮೋದಿ ಅವರ ತಂದೆ ಬಗೆಗಿನ ಮಲ್ಲಿಕಾರ್ಜುನ ಖರ್ಗೆ ಹೇಳಿಕೆ ಖಂಡಿಸಿ ರಾಜ್ಯ ಬಿಜೆಪಿ ನಾಯಕರು ಫ್ರೀಡಂ ಪಾರ್ಕ್‌ನಲ್ಲಿ ಪ್ರತಿಭಟನೆ ನಡೆಸಿದರು. ಇದೇ ವೇಳೆ ಬಿಜೆಪಿ ನಾಯಕರು ವಿಧಾನಸೌಧ ಮುತ್ತಿಗೆಗೆ ಯತ್ನಿಸಿದರು.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ಕಾಂಗ್ರೆಸ್ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ ರಾಜ್ಯ ಬಿಜೆಪಿ ನಾಯಕರು ವಿಧಾನಸೌಧ ಮುತ್ತಿಗೆಗೆ ಯತ್ನಿಸಿದರು. ಪ್ರತಿಭಟನೆಯಲ್ಲಿ ವಿಪಕ್ಷ ನಾಯಕರಾದ ಆರ್.ಅಶೋಕ್, ಛಲವಾದಿ ನಾರಾಯಣಸ್ವಾಮಿ, ಶಾಸಕರಾದ ಅಶ್ವಥ್ ನಾರಾಯಣ, ಸಿ.ಕೆ ರಾಮಮೂರ್ತಿ, ರವಿ ಸುಬ್ರಹ್ಮಣ್ಯ, ಎಮ್‌ಎಲ್‌ಸಿ ಕೇಶವ ಪ್ರಸಾದ್ ಸೇರಿ ಬಿಜೆಪಿ ಕಾರ್ಯಕರ್ತರು, ಮುಖಂಡರು ಪಾಲ್ಗೊಂಡಿದ್ದರು. ಇದೇ ವೇಳೆ ಮಾತನಾಡಿದ ವಿಪಕ್ಷ ನಾಯಕ ಆರ್.ಅಶೋಕ್, ಕಾಂಗ್ರೆಸ್ ಹಾಳು ಮಾಡುವುದಕ್ಕೆ ಇಬ್ಬರು ಖರ್ಗೆ ಸಾಕು. ಒಬ್ಬರು ಮಲ್ಲಿಕಾರ್ಜುನ ಖರ್ಗೆ, ಇನ್ನೊಬ್ಬರು ಪ್ರಿಯಾಂಕ್ ಖರ್ಗೆ. ಮಲ್ಲಿಕಾರ್ಜುನ ಖರ್ಗೆಯವರಿಗೆ ಅರಳು ಮರುಳು ಶುರುವಾಗಿದೆ. ಈ ವಯಸ್ಸಲ್ಲಿ ಅವರು ದೇವರ ಜಪ ಮಾಡ್ಕೊಂಡು ಇರಬೇಕಿತ್ತು ಎಂದು ಕಿಡಿ ಕಾರಿದ್ದಾರೆ. ಅರುಳೋ ಮರುಳೋ ಅಂತ ದಿನಾ ಮೋದಿ ಮೋದಿ ಅಂತಾರೆ. ಇಷ್ಟು ಕೀಳು ಮಟ್ಟದಲ್ಲಿ ಮಾತಾಡ್ತಾರೆ. ಅಲ್ಲಿ ಅಪ್ಪ

ಬಾಯಿ ಬಡ್ಕೊತಾರೆ. ಇಲ್ಲಿ ಮರಿ ಖರ್ಗೆ. ದೇಶದಲ್ಲಿ ಕಾಂಗ್ರೆಸ್ ಇಲ್ಲ, ಖಾಲಿ ಆಗಿದೆ. ನಮಗೆ ಬೈಯ್ಯೋದಕ್ಕೂ ಕಾಂಗ್ರೆಸ್ ಇಲ್ಲ. ಖರ್ಗೆಯವರೇ ನಿಮ್ಮ ಬಾಯಿ ಯಾವಾಗ ಸ್ವಚ್ಛ ಮಾಡಿಕೊಳ್ತೀರಿ?. ಯಾವುದರಲ್ಲಿ ನಾಲಿಗೆ ಬಾಯಿ ತೊಳೆಯುತ್ತೀರಿ?. ನಿಮಗೆ ಗಂಜಲ, ಗೋಮುತ್ರ ಆಗಲ್ಲ. ಹೀಗಾಗಿ ಫಿನಾಯಿಲ್‌ನಲ್ಲೇ ತೊಳೀಬೇಕು ಎಂದು ವಾಗ್ದಾಳಿ ನಡೆಸಿದ್ದಾರೆ. ಪುರಂದರದಾಸರು ಒಂದು ಮಾತು ಹೇಳಿದ್ದಾರೆ. ಆಚಾರ ಇಲ್ಲದ ನಾಲಿಗೆ ನಿನ್ನ ನೀಚ ಗುಣವ ಬಿಡು ನಾಲಿಗೆ. ಆಚಾರ ಇಲ್ಲದ ನಾಲಿಗೆ ಪರರ ದೂಷಣೆಗೆ ಚಾಚಿಕೊಂಡಿರುವ ನಾಲಿಗೆ. ಇದನ್ನು ಖರ್ಗೆಯವರಂಥವರನ್ನು ನೋಡಿಯೇ ಪುರಂದರದಾಸರು ಹೇಳಿದ್ದಾರೆ. ಖರ್ಗೆಯವರು ಮೋದಿಯವರ ತಂದೆ ಬಗ್ಗೆ ಮಾತಾಡಿರೋದು ಕಾಂಗ್ರೆಸ್‌ನ ಹೀನ ಸಂಸ್ಕೃತಿ ತೋರಿಸುತ್ತದೆ. ಇದೇ ಮಾತನ್ನು ಬಿಜೆಪಿಯವರು ನಿಮ್ಮಪ್ಪನ ಬಗ್ಗೆ, ನಿಮ್ಮಮ್ಮನ ಬಗ್ಗೆ ಹೇಳಿದ್ರೆ ಸುಮ್ನಿರ್ತಿದ್ರಾ?. ಕೇಸ್ ಮೇಲೆ ಕೇಸ್ ಹಾಕುತ್ತಿದ್ರಿ, ಎಂದು ಆಕ್ರೋಶ ಹೊರ ಹಾಕಿದ್ದಾರೆ. ಪ್ರತಿಭಟನೆಯಲ್ಲಿ ಮಾತನಾಡಿದ ಛಲವಾದಿ ನಾರಾಯಣಸ್ವಾಮಿ, ರಾಹುಲ್ ಗಾಂಧಿಯವರಂತಹ ದುರಂತ ನಾಯಕನ ಸಹವಾಸ ಮಾಡಿ, ಮೋದಿಜೀ ಅವರನ್ನು ಮಲ್ಲಿಕಾರ್ಜುನ ಖರ್ಗೆಯವರು ಟೀಕಿಸಿರುವುದು ಅಕ್ಷಮ್ಯ. ಕಾಂಗ್ರೆಸ್ಸಿನಲ್ಲಿ ಕಳಪೆ ನಾಯಕತ್ವ ಇದೆ. ಅದಕ್ಕೆ ಅನುಗುಣವಾಗಿ ವ್ಯವಸ್ಥೆಯೂ ಕಳಪೆ. ಕಾಂಗ್ರೆಸ್ ಅಧಿಕಾರ ಕಳೆದುಕೊಂಡ ಮೇಲೆ ಹತಾಶವಾಗಿ ನಾಲಿಗೆಗೂ ಕೂಡ ಇತಿಮಿತಿ ಇಲ್ಲದೇ ಮಾತಾಡುತ್ತಿದ್ದಾರೆ.

ಕಾಂಗ್ರೆಸ್ಸಿನ ಪ್ರತಿಯೊಬ್ಬ ನಾಯಕರೂ ಭಾರತೀಯ ಜನತಾ ಪಕ್ಷದ ಸ್ಟಾರ್ ಕ್ಯಾಂಪೇನರ್‌ಗಳ ಹಾಗೆ ಆದಂಗೆ ಕಾಣುತ್ತಿದೆ. ಈ ರೀತಿ ನಿಂದನೆಯಿಂದ ನಿಮ್ಮ ಮತಬ್ಯಾಂಕ್ ಬೆಳೆಯುವುದೇ ಎಂದು ವಾಗ್ದಾಳಿ ನಡೆಸಿದ್ದಾರೆ. ಬಿಜೆಪಿಯನ್ನು ಸುಭದ್ರಗೊಳಿಸಲಿಕ್ಕೆ ನೀವೇ ಪ್ರಯತ್ನ ಮಾಡಿದಂತೆ ಕಾಣುತ್ತಿದೆ ಎಂದರು.

ಬೇಷರತ್ ಕ್ಷಮೆ ಯಾಚಿಸಬೇಕು

ಮಾಜಿ ಡಿಸಿಎಂ ಡಾ.ಸಿ.ಎನ್.ಅಶ್ವತ್ಥನಾರಾಯಣ ಮಾತನಾಡಿ, ಮಲ್ಲಿಕಾರ್ಜುನ ಖರ್ಗೆಯವರು ಪ್ರಧಾನಿಯವರ ತಂದೆ ಕುರಿತು ಕೆಟ್ಟ ಭಾಷೆ ಬಳಸಿದ್ದು ಖಂಡನೀಯ. ಹತಾಶರಾದ ಖರ್ಗೆಯವರು ಕೀಳುಮಟ್ಟದ ಭಾಷೆ ಬಳಸಿದ್ದು ಆಕ್ಷೇಪಾರ್ಹ. ಖರ್ಗೆ ಅವರು ತಾಳ್ಮೆ, ಬುದ್ಧಿ, ತಮ್ಮ ಮಾತಿನ ಮೇಲೆ ನಿಯಂತ್ರಣ ಕಳೆದುಕೊಂಡು ಹತಾಶರಾಗಿ ಮಾತನಾಡಿದ್ದಾರೆ. ಜನರು ಕಾಂಗ್ರೆಸ್ ಪಕ್ಷವನ್ನು ದೇಶಾದ್ಯಂತ ಸಂಪೂರ್ಣವಾಗಿ ತಿರಸ್ಕರಿಸಿದ್ದಾರೆ. ಕಾಂಗ್ರೆಸ್ಸಿಗರಿಗೆ ಸಂವಿಧಾನ ಮತ್ತು ಪ್ರಜಾಪ್ರಭುತ್ವದ ವಿಚಾರದಲ್ಲಿ ಗೌರವ ಇಲ್ಲ. ಅವರಿಗೆ ಅಧಿಕಾರ ಬೇಕಿದೆ ಎಂದು ಟೀಕಿಸಿದ್ದಾರೆಖರ್ಗೆಯವರು ನಕಲಿ ಗಾಂಧಿ ಕುಟುಂಬಕ್ಕೆ ನಿಷ್ಠೆ ತೋರಿಸುವವರು. ಖರ್ಗೆಯವರು ತಮ್ಮ ಹೇಳಿಕೆ ಹಿಂದಕ್ಕೆ ಪಡೆಯಬೇಕು ಮತ್ತು ಬೇಷರತ್ ಕ್ಷಮೆ ಯಾಚಿಸಬೇಕು ಎಂದು ಆಗ್ರಹಿಸಿದ್ದಾರೆ.

ಈ ದಿನದ ದರ				
ಪೆಟ್ರೋಲ್: 111.68 ₹/L	ಡೀಸೆಲ್ : 99.56 ₹/L	ಬಂಗಾರ: ₹14,275/Gram24ct	₹13,085/Gram22ct	ಬೆಳ್ಳಿ: ₹225.00/Gram

ನಗರ ಸಾರಿಗೆ ಕ್ಷೇತ್ರದ ಪ್ರಶಂಸನಾ ಪ್ರಶಸ್ತಿಗೆ ಬೆಂಗಳೂರು ಸಂಚಾರ ಪೊಲೀಸ್ ಆಯ್ಕೆ

• ಉದಯವಾಹಿನಿ, ಬೆಂಗಳೂರು

ನಗರ ಸಾರಿಗೆ ನಿರ್ವಹಣೆಯಲ್ಲಿ ತಂತ್ರಜ್ಞಾನ ಮತ್ತು ದತ್ತಾಂಶ ವಿಶ್ಲೇಷಣೆಯನ್ನು ಪರಿಣಾಮಕಾರಿಯಾಗಿ ಬಳಸಿಕೊಂಡು, ಸಾಕ್ಷ್ಯಾಧಾರಿತ ಸಾರಿಗೆ ಯೋಜನೆಯಲ್ಲಿ ಅತ್ಯುತ್ತಮ ಸಾಧನೆ ಮಾಡಿರುವ ಬೆಂಗಳೂರು ಸಂಚಾರ ಪೊಲೀಸರಿಗೆ ಕೇಂದ್ರ ಸರ್ಕಾರದ 'ನಗರ ಸಾರಿಗೆ ಕ್ಷೇತ್ರದ ಪ್ರಶಂಸನಾ ಪ್ರಶಸ್ತಿ' ಲಭಿಸಿದೆ. ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯವು ನೀಡುವ ಈ ಪ್ರಶಸ್ತಿಗೆ, ಕಾರ್ಯಾಚರಣೆ ಮತ್ತು ಸಾಕ್ಷ್ಯಾಧಾರಿತ ಸಾರಿಗೆ ಯೋಜನೆಗಾಗಿ ಬೃಹತ್ ದತ್ತಾಂಶ ವಿಶ್ಲೇಷಣೆಯ ಅತ್ಯುತ್ತಮ ಬಳಕೆ''

ಉದಯವಾಹಿನಿ ಚಿತ್ರ

ಎಂಬ ವಿಭಾಗದಲ್ಲಿ ಬೆಂಗಳೂರು ಸಂಚಾರ ಪೊಲೀಸರನ್ನು ಆಯ್ಕೆ ಮಾಡಿರುವುದು ರಾಜ್ಯಕ್ಕೆ ಹೆಮ್ಮೆಯ ವಿಷಯವಾಗಿದೆ ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ಹರ್ಷ ವ್ಯಕ್ತಪಡಿಸಿದ್ದಾರೆ.

ನಗರಗಳಲ್ಲಿ ಹೆಚ್ಚುತ್ತಿರುವ ವಾಹನ ದಟ್ಟಣೆ, ಸಂಚಾರ ನಿರ್ವಹಣೆಯ ಸವಾಲುಗಳು ಮತ್ತು ರಸ್ತೆ ಸುರಕ್ಷತೆಯ ಅಗತ್ಯಗಳನ್ನು ಸಮರ್ಥವಾಗಿ ಎದುರಿಸಲು ಆಧುನಿಕ ತಂತ್ರಜ್ಞಾನ, ದತ್ತಾಂಶ ವಿಶ್ಲೇಷಣೆ ಹಾಗೂ ವಾಸ್ತವಿಕ ಮಾಹಿತಿಯ ಆಧಾರದ ಮೇಲೆ ನಿರ್ಧಾರಗಳನ್ನು ಕೈಗೊಳ್ಳುವುದು ಅತ್ಯಂತ ಮುಖ್ಯವಾಗಿದೆ.

ಈ ನಿಟ್ಟಿನಲ್ಲಿ ಬೆಂಗಳೂರು ಸಂಚಾರ ಪೊಲೀಸರು ಕೈಗೊಂಡಿರುವ ಪ್ರಯತ್ನಗಳಿಗೆ ರಾಷ್ಟ್ರಮಟ್ಟದಲ್ಲಿ ಮನ್ನಣೆ ದೊರೆತಿರುವುದು ಶ್ಲಾಘನೀಯವಾಗಿದೆ ಎಂದು ಸಚಿವರು ಹೇಳಿದ್ದಾರೆ.

ಸ್ಟಿಂಗ್ ಆಪರೇಷನ್' ಕೋಲಾಹಲ: ನ.2ಕ್ಕೆ ದೆಹಲಿಗೆ ಮಾಜಿ ಸಿಎಂ ಸಿದ್ದರಾಮಯ್ಯ, ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರನ್ನು ಭೇಟಿಯಾಗುವ ಸಾಧ್ಯತೆಯಿದೆ

• ಉದಯವಾಹಿನಿ, ಬೆಂಗಳೂರು

ಮಾಜಿ ಮುಖ್ಯಮಂತ್ರಿ ,ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸದಸ್ಯ ಸಿದ್ದರಾಮಯ್ಯ ಅವರು ತಮ್ಮ ವಿರುದ್ಧ ನಡೆದಿದೆಯೆನ್ನಲಾದ ಸ್ಟಿಂಗ್ ಆಪರೇಷನ್ ಕುರಿತು ಚರ್ಚಿಸಲು ನವೆಂಬರ್ 2ರಂದು ನವದೆಹಲಿಯಲ್ಲಿ ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರನ್ನು ಭೇಟಿಯಾಗುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ. ನವೆಂಬರ್ 1ರಂದು ಎಐಸಿಸಿ ಆಯೋಜಿಸಿರುವ ಪ್ರತಿಭಟನೆಯಲ್ಲಿ ಪಾಲ್ಗೊಳ್ಳಲು ಸಿದ್ದರಾಮಯ್ಯ ದೆಹಲಿಗೆ ತೆರಳಲಿದ್ದಾರೆಂದು ತಿಳಿದುಬಂದಿದೆ.

ರಾಹುಲ್ ಗಾಂಧಿ ಅವರ ಭೇಟಿಗೆ ಸಮಯ ಕೋರಿ ಮನವಿ ಮಾಡಿದ್ದು, ನವೆಂಬರ್ 2ರಂದು ಭೇಟಿಯಾಗಲು ರಾಹುಲ್ ಸಮಯ ನೀಡಿದ್ದಾರೆ ಎನ್ನಲಾಗಿದೆ.

ಸಿದ್ದರಾಮಯ್ಯ ಅವರ ವಿರುದ್ಧ ನಡೆದಿದೆಯೆನ್ನಲಾದ ಸ್ಟಿಂಗ್ ಕಾರ್ಯಾಚರಣೆಯು ಕರ್ನಾಟಕದಲ್ಲಿ ರಾಜಕೀಯ ವಿವಾದಕ್ಕೆ ಕಾರಣವಾಗಿದೆ.

ತಮ್ಮ ವರ್ಚಸ್ಸಿಗೆ ಧಕ್ಕೆ ತರುವ ಹಾಗೂ ನಕಲಿ ವಿಡಿಯೊ ಮೂಲಕ ಬ್ಲ್ಯಾಕ್‌ಮೇಲ್ ಮಾಡುವ ಉದ್ದೇಶದಿಂದ ಈ ಷಡ್ಯಂತ್ರ ರೂಪಿಸಲಾಗಿದೆ ಎಂದು ಸಿದ್ದರಾಮಯ್ಯ ಆರೋಪಿಸಿದ್ದಾರೆ.

ಈ ಸಂಬಂಧ ತನಿಖೆ ನಡೆಸುವಂತೆ ಈಗಾಗಲೇ ದೂರು ದಾಖಲಿಸಿದ್ದಾರೆ.

ಇದೇ ವೇಳೆ, ಪ್ರಕರಣದ ತನಿಖೆ ನಡೆಸುತ್ತಿರುವ ಕೇಂದ್ರ ಅಪರಾಧ ವಿಭಾಗದ ಪೊಲೀಸರು ವಿಡಿಯೊ ಪ್ರಸಾರ ಇದರ ಹಿಂದೆ ಕಾರ್ಯನಿರ್ವಹಿಸಿರುವುದಾಗಿ ಆರೋಪಿಸಲಾಗಿರುವ ಜಾಲದ ಕುರಿತು ಪರಿಶೀಲನೆ ನಡೆಸುತ್ತಿದ್ದಾರೆ.

ಗೃಹಜ್ಯೋತಿ ಸಮೀಕ್ಷೆ ಅ. 31ಕ್ಕೆ ಮುಕ್ತಾಯ: ಗಡುವು ವಿಸ್ತರಣೆ ಇಲ್ಲ

• ಉದಯವಾಹಿನಿ, ಬೆಂಗಳೂರು

ಉದಯವಾಹಿನಿ ಚಿತ್ರ

ಬೆಸ್ಕಾಂ ವ್ಯಾಪ್ತಿಯಲ್ಲಿ ನಡೆಯುತ್ತಿರುವ ಗೃಹ ಜ್ಯೋತಿ ಫಲಾನುಭವಿಗಳ ಮನೆ-ಮನೆ ಸಮೀಕ್ಷೆಗೆ ನೀಡಿರುವ ಗಡುವು ಅಕ್ಟೋಬರ್ 31ಕ್ಕೆ ಮುಕ್ತಾಯಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ಸಮೀಕ್ಷೆಯಲ್ಲಿ ಪಾಲ್ಗೊಳ್ಳದ ಗ್ರಾಹಕರು ಅಗತ್ಯ ದಾಖಲಾತಿಗಳನ್ನು ಬೆಸ್ಕಾಂ ಉಪ ವಿಭಾಗ ಕಚೇರಿಗೆ ಖುದ್ದಾಗಿ ತೆರಳಿ ಸಲ್ಲಿಸಲು ಬೆಸ್ಕಾಂ ವಿನಂತಿಸಿದೆ. ಸಮೀಕ್ಷೆಯಲ್ಲಿ ಮನೆಗೆ ಬೀಗ ಹಾಕಿರುವ, ಮನೆ ಖಾಲಿ ಇರುವ ಹಾಗೂ ಸಮೀಕ್ಷೆಯಲ್ಲಿ ಪಾಲ್ಗೊಳ್ಳಲು ಸಾಧ್ಯವಾಗದ ಗ್ರಾಹಕರಿಗೆ ಬೆಸ್ಕಾಂ ಕಚೇರಿಗೆ ತೆರಳಿ ದಾಖಲಾತಿ ಸಲ್ಲಿಸಲು ರಾಜ್ಯ ಸರ್ಕಾರ ಅವಕಾಶ ಕಲ್ಪಿಸಿದ್ದು, ಗಡುವಿನೊಳಗೆ ದಾಖಲಾತಿ ಸಲ್ಲಿಸಲು ಬೆಸ್ಕಾಂ ಮನವಿಮಾಡಿದ್ದು, ದಾಖಲಾತಿ ಸಲ್ಲಿಸಲು ಇದು ಕೊನೆಯ ಅವಕಾಶ ಎಂದು ಸ್ಪಷ್ಟಪಡಿಸಿದೆ. ಬೆಸ್ಕಾಂನ 8 ಜಿಲ್ಲೆಗಳ ವ್ಯಾಪ್ತಿಯಲ್ಲಿ ಭಾಗ್ಯ ಜ್ಯೋತಿ, ಕುಟೀರ ಜ್ಯೋತಿ ಹಾಗೂ ಅಮೃತ ಜ್ಯೋತಿ ಯೋಜನೆಯ ಗ್ರಾಹಕರು ಸೇರಿದಂತೆ ಒಟ್ಟು 7429773 ಲಕ್ಷ ಗ್ರಾಹಕರು ಗೃಹ ಜ್ಯೋತಿ ಫಲಾನುಭವಿಗಳಿದ್ದು, ಈ ಪೈಕಿ 7317687 ಲಕ್ಷ ಗ್ರಾಹಕರ ಸಮೀಕ್ಷೆ (ಶೇ. 98.49) ಅಕ್ಟೋಬರ್ 22ಕ್ಕೆ ಪೂರ್ಣಗೊಂಡಿದೆ. ಖಾಲಿ ಇರುವ ಮನೆಗಳಿಗೆ ಬೆಸ್ಕಾಂ ಸಿಬ್ಬಂದಿ ಮೂರು ಬಾರಿ ಭೇಟಿ ನೀಡಿದ್ದು, ಈ ವರ್ಗಗಳ ಗ್ರಾಹಕರ ಮೊಬೈಲ್ ಗೆ ಸಮೀಕ್ಷೆಯಲ್ಲಿ ಪಾಲ್ಗೊಳ್ಳುವಂತೆ ಸಂದೇಶವನ್ನು ಕೂಡ ಕಳುಹಿಸಲಾಗಿತ್ತು. ಅ. 31 ಕೊನೆಯ ದಿನಾಂಕವಾಗಿದ್ದು, ಗಡುವು ವಿಸ್ತರಣೆ ಇಲ್ಲ ಎಂದು ಬೆಸ್ಕಾಂ ಸ್ಪಷ್ಟಪಡಿಸಿದೆ.

ಸಿದ್ದರಾಮಯ್ಯನವರ ಸ್ಟಿಂಗ್ ಆಪರೇಷನ್ ಬಗ್ಗೆ ತನಿಖೆ ಮಾಡಲು ಸಿಎಂಗೆ ಆಸಕ್ತಿ ಇಲ್ಲ

ಕಾಂಗ್ರೆಸ್ ಜನಪ್ರಿಯತೆ ಕಳೆದುಕೊಳ್ಳುತ್ತಿದೆ. ಕಾಂಗ್ರೆಸ್ ಅವನತಿ ಆಗ್ತಿದ್ದು, ಇದಕ್ಕೆ ಖರ್ಗೆ, ರಾಹುಲ್ ಗಾಂಧಿ ಕಾರಣ ಎಂದು ಬಿಜೆಪಿ ನಾಯಕರು ಟೀಕಿಸಿದ್ದಾರೆ.

• ಉದಯವಾಹಿನಿ, ಬೆಂಗಳೂರು

1 ಸಿಡಿ ಫ್ಯಾಕ್ಟರಿ ಹಿಂದೆ ಕೆಪಿಸಿಸಿ ಕಚೇರಿಯಲ್ಲಿತ್ತು

2 ಕಾಲಹರಣ ಬಿಟ್ಟು, ತಾರ್ಕಿಕ ಅಂತ್ಯ ಹಾಡಬೇಕು

3 ರಾಜ ಮನೆತನ ವಿಶ್ವಾಸಕ್ಕೆ ತೆಗೆದುಕೊಳ್ಳದೇ,ಪ್ರಚಾರ

ಮಾಜಿ ಸಿಎಂ ಸಿದ್ದರಾಮಯ್ಯನವರ ಸ್ಟಿಂಗ್ ಆಪರೇಷನ್ ಬಗ್ಗೆ ತನಿಖೆಗೆ ಸಿಎಂ ಹಾಗೂ ಕಾಂಗ್ರೆಸ್ ಸರ್ಕಾರಕ್ಕೆ ಆಸಕ್ತಿ ಕಾಣಿಸುತ್ತಿಲ್ಲ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಗಂಭೀರ ಆರೋಪ ಮಾಡಿದ್ದಾರೆ.

ಶಿವಮೊಗ್ಗದಲ್ಲಿ ಸೋಮವಾರ ಮಾಧ್ಯಮದವರೊಂದಿಗೆ ಮಾತನಾಡಿದ ವಿಜಯೇಂದ್ರ, ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಇದೆ ಅಂದ್ರೆ, ಅದಕ್ಕೆ ಸಿದ್ದರಾಮಯ್ಯನವರೇ ಕಾರಣ. ಕಾಂಗ್ರೆಸ್ ಅಧಿಕಾರಕ್ಕೆ ಬರಲು ಅವರ ಪಾತ್ರ ಪ್ರತಿಯೊಬ್ಬರಿಗೂ ಗೊತ್ತಿದೆ.

ಆದರೆ ಈಗ ಕಾಂಗ್ರೆಸ್‌ನಲ್ಲಿ ಸಿದ್ದರಾಮಯ್ಯರನ್ನು ಯೂಸ್ ಅಂಡ್ ಥ್ರೋ ಮಾಡಲಾಗುತ್ತಿದೆ ಎಂದು ದೂರಿದ್ದಾರೆ. ಸಿಡಿ, ಪೆನ್ ಡ್ರೈವ್ ಫ್ಯಾಕ್ಟರಿ ಯಾರು ಅಂತಾ ಕಾಂಗ್ರೆಸ್ ನಾಯಕರೇ ಮಾತಾಡುತ್ತಿದ್ದಾರೆ. ಸ್ವತಃ ಯತೀಂದ್ರ ಸಿದ್ದರಾಮಯ್ಯ ಅವರೇ ಹೇಳಿಕೆ ನೀಡಿದ್ದಾರೆ. ಸಿಡಿ ಫ್ಯಾಕ್ಟರಿ ಹಿಂದೆ ಕೆಪಿಸಿಸಿ ಕಚೇರಿಯಲ್ಲಿತ್ತು. ಈಗ ವಿಧಾನಸೌಧಕ್ಕೆ ಶಿಫ್ಟ್ ಆಗಿದೆ. ಕಾಂಗ್ರೆಸ್ ಶಾಸಕರು, ಸಚಿವರು ಎಲ್ಲರೂ ಭಯಭೀತರಾಗಿದ್ದಾರೆ.

ಕಾಲಹರಣ ಮಾಡೋದು ಬಿಟ್ಟು, ಇದಕ್ಕೆ ತಾರ್ಕಿಕ ಅಂತ್ಯ ಹಾಡಬೇಕು ಎಂದು ಆಗ್ರಹಿಸಿದ್ದಾರೆ.

ಮೈಸೂರು ದಸರಾ ಕುರಿತು: ಇತ್ತೀಚೆಗೆ ಮೈಸೂರು ದಸರಾದಲ್ಲಿ ಕಾಂಗ್ರೆಸ್ ಸರ್ಕಾರ ಹಾಗೂ ರಾಜ ಮನೆತನದ ನಡುವೆ ವಿಶ್ವಾಸ ಇಲ್ಲದಿರುವುದು ಕಂಡುಬಂತು. ಯುವ ದಸರಾ ಹಾಗೂ ಮಹಿಳಾ ದಸರಾದಲ್ಲಿ ಗೊಂದಲ ಉಂಟಾಗಿತ್ತು. ಪೂರ್ಣ ಅವ್ಯವಸ್ಥೆಯಿಂದ ಕೂಡಿತ್ತು ಎಂದು ಜನ ಮಾತಾಡುತ್ತಿದ್ದಾರೆ. ರಾಜ ಮನೆತನ ವಿಶ್ವಾಸಕ್ಕೆ ತೆಗೆದುಕೊಳ್ಳದೇ, ತಮ್ಮ ಪ್ರಚಾರ ತೆಗೆದುಕೊಂಡರು. ಶಿವಮೊಗ್ಗದಲ್ಲಿ ಕೂಡ ಅಂಬಾರಿ ಅವಘಡ ಆಯಿತು. ಉಸ್ತುವಾರಿ ಸಚಿವರು ಕಾಟಾಚಾರಕ್ಕೆ ಸಭೆ ಮಾಡಿದರು. ಸಿಎಂ ತಮ್ಮ ಪತ್ನಿಯನ್ನು ಕರೆದೊಯ್ದರು. ಇದರ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ ಸಾಕಷ್ಟು ಚರ್ಚೆಯಾಗುತ್ತಿದೆ. ಸಿಎಂ ಕೇವಲ ಜನಪ್ರಿಯತೆಗೆ ಕಟ್ಟುಬಿದ್ದಿದ್ದಾರೆ. ಮೈಸೂರು ದಸರಾದಲ್ಲಿ ಡಿಸಿಎಂ ಹಾಗೂ ಉಸ್ತುವಾರಿ ಸಚಿವರ ಫೋಟೋ ಇರಲಿಲ್ಲ. ಆ ಮಟ್ಟಿನ ಪ್ರಚಾರಕ್ಕೆ ಸಿಎಂ ಒಬ್ಬರೇ ಬಿದ್ದಿದ್ದಾರೆ ಎಂದು ವಾಗ್ದಾಳಿ ನಡೆಸಿದ್ದಾರೆ.

ರಾಜ್ಯದಲ್ಲಿ ಬರಗಾಲ ಸಂದರ್ಭದಲ್ಲಿ ರೈತರ ನೆರವಿಗೆ ಸರ್ಕಾರ ಬರಲು ಸಾಧ್ಯವಾಗುತ್ತಿಲ್ಲ. ನಿರಂತರವಾಗಿ ರೈತರಿಗೆ ವಿದ್ಯುತ್ ಕೂಡ ಕೊಡುತ್ತಿಲ್ಲ. ಕಬ್ಬು ಬೆಳೆಗಾರರು ನಿರಂತರ ಹೋರಾಟ ಮಾಡುತ್ತಿದ್ದಾರೆ. ಸಿಎಂಗೆ ರಿಯಲ್ ಎಸ್ಟೇಟ್ ಬಗ್ಗೆ ಇರೋ ಆಸಕ್ತಿ ರೈತರ ಬಗ್ಗೆ ಇಲ್ಲ. ಕಬ್ಬು ಬೆಳೆ ಹಾಗೂ ಸಕ್ಕರೆ ಕಾರ್ಖಾನೆಗಳಿಂದ ಸರ್ಕಾರಕ್ಕೆ ಆದಾಯ ಬರುತ್ತಿದೆ. ಹೀಗಾಗಿ ಸರ್ಕಾರ ಕಬ್ಬು ಬೆಳೆಗಾರರಿಗೆ ಪರಿಹಾರ ಘೋಷಣೆ ಮಾಡಬೇಕು ಎಂದು ಆಗ್ರಹಿಸಿದ್ದಾರೆ.

ಬೆಂಗಳೂರಲ್ಲಿ ಮಾತನಾಡಿದ ಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ಕಾಂಗ್ರೆಸ್ ಮೊಹಬ್ಬತ್ ಕಿ ದುಕಾನ್ ಅಲ್ಲ, ಸ್ಟಿಂಗ್ ಆಪರೇಷನ್ ಕಿ ಮಕಾನ್ ಆಗಿದೆ ಎಂದು ವಾಗ್ದಾಳಿ ನಡೆಸಿದ್ದಾರೆ.

ಉದಯವಾಹಿನಿ ಚಿತ್ರ

ಸಚಿವರು ಕಾಟಾಚಾರಕ್ಕೆ ಸಭೆ

> ಕಾಂಗ್ರೆಸ್ ಸರ್ಕಾರ ದಸರಾಗೆ ಅಪಚಾರ ಮಾಡಿದೆ. ಪ್ರೋಟೋಕಾಲ್ ಸರಿಯಾಗಿ ಪಾಲನೆ ಮಾಡಿಲ್ಲ, ಅಧಿಕಾರಿಗಳು ಸರಿಯಾಗಿ ನಡೆದುಕೊಂಡಿಲ್ಲ. ಅದಕ್ಕಾಗಿಯೇ ಪ್ರಮೋದಾ ದೇವಿಯವರು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಸರ್ಕಾರ ಅವರ ಕ್ಷಮೆ ಕೇಳಬೇಕು ಎಂದು ಆಗ್ರಹಿಸಿದ್ದಾರೆ. -ಛಲವಾದಿ

> ಮತ್ತೊಂದು ಕಡೆ ಭ್ರಷ್ಟಾಚಾರ ಹೆಚ್ಚಾಗಿದೆ. ಕಾರ್ಮಿಕ ಇಲಾಖೆಯಲ್ಲಿ ನೂರಾರು ಕೋಟಿ ಹಗರಣ ನಡೆದಿದೆ. ಅಲ್ಲೊಂದು ಇಲ್ಲೊಂದು ಹೆಲ್ತ್ ಕ್ಯಾಂಪ್ ಮಾಡಿ, ನೂರಾರು ಕೋಟಿ ಲೂಟಿ ಮಾಡಿದ್ದಾರೆ. ವೃದ್ಧಾಪ್ಯ ವೇತನ, ವಿಧವಾ ವೇತನ, ವಿಕಲಚೇತನ ಪಿಂಚಣಿ ಸಹ ನೀಡುತ್ತಿಲ್ಲ ಎಂದು ಆರೋಪಿಸಿದ್ದಾರೆ. -ಬಿ.ವೈ. ವಿಜಯೇಂದ್ರ

ರಾಜಮನೆತನ ಉಳಿದುಕೊಳ್ಳಲು ಜಾಗ ಕೊಟ್ಟಿದ್ದೇವೆ ಅಷ್ಟೇ

ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ಅರಮನೆ ಮಂಡಳಿ ಮತ್ತು ಅರಮನೆ ಅದಕ್ಕೆ ಸೇರಿದ ಜಾಗ ಸರ್ಕಾರದ ಒಡೆತನದಲ್ಲಿದ್ದರೂ, ಅವರಿಗೆ ಉಳಿದುಕೊಳ್ಳಲು ಒಂದಿಷ್ಟು ಜಾಗ ಕೊಟ್ಟಿದ್ದೇವೆ. ಹೀಗಿದ್ದರೂ ಅವರಿಗೆ ಸೂಕ್ತ ಗೌರವ ನೀಡಲಾಗುತ್ತಿದೆ ಎಂದು ಸಚಿವ ಯತೀಂದ್ರ ಸಿದ್ದರಾಮಯ್ಯ ಸೋಮವಾರ ತಿಳಿಸಿದ್ದಾರೆ. ಮಾಧ್ಯಮಗಳ ಜೊತೆ ಮಾತನಾಡಿದ ಅವರು, ಪ್ರಮೋದಾದೇವಿ ಒಡೆಯರ್ ಅವರು ಮಾಧ್ಯಮಗಳಿಗೆ ಬರೆದ ಪತ್ರದ ವಿಚಾರಕ್ಕೆ ಸಂಬಂಧಿಸಿದಂತೆ, ನಾವು ಅಂಬಾರಿಯನ್ನು ಉಚಿತವಾಗಿ ಪಡೆಯುತ್ತಿಲ್ಲ. ಅಂಬಾರಿಗೂ ಸರ್ಕಾರ ದುಡ್ಡು ಕೊಡುತ್ತದೆ. ಏನಾದರೂ ಸಮಸ್ಯೆ ಇದ್ದರೆ, ಸರ್ಕಾರಕ್ಕೆ ನೇರವಾಗಿ ಹೇಳಬಹುದಿತ್ತು. ನಾವು ನಿರಂತರವಾಗಿ ಅವರ ಜೊತೆಯಲ್ಲಿ ಸಂಪರ್ಕದಲ್ಲಿದ್ದೆವು. ನಮ್ಮ ಗಮನಕ್ಕೆ ತಾರದೆ ಏಕಾಏಕಿ ಮಾಧ್ಯಮಗಳಿಗೆ ಪತ್ರ ಬರೆದಿದ್ದಾರೆ ಎಂದು ಅಸಮಾಧಾನ ಹೊರಹಾಕಿದ್ದಾರೆ. ಅರಮನೆಯ ಒಂದು ಭಾಗವನ್ನು ರಾಜಮನೆತನದ ವಾಸಕ್ಕಾಗಿ ಮೀಸಲಿಡಲಾಗಿದೆ ಮತ್ತು ಜಂಬೂ ಸವಾರಿಯ ಮೆರವಣಿಗೆಯ ವೇಳೆ ಅಂಬಾರಿಯನ್ನು ಬಳಸಿದ್ದಕ್ಕಾಗಿ ಸರ್ಕಾರವು ಹಣ ಪಾವತಿಸಿದೆ. ಸರ್ಕಾರವು ರಾಜಮನೆತನದೊಂದಿಗೆ ನಿರಂತರ ಸಂಪರ್ಕದಲ್ಲಿದೆ ಮತ್ತು ಅವರ ಕುಂದುಕೊರತೆಗಳನ್ನು ಪರಿಹರಿಸಲು ಸಿದ್ಧವಾಗಿದೆ' ಎಂದು ಅವರು ಹೇಳಿದರು.

ಅವರು ಸರ್ಕಾರಕ್ಕೆ ಪತ್ರ ಬರೆದಿಲ್ಲ. ಅಗತ್ಯವಿದ್ದರೆ ನಾವು ಕೆಲವರನ್ನು ಸರ್ಕಾರದಿಂದ ಅವರ ಬಳಿಗೆ ಕಳಿಹಿಸುತ್ತೇವೆ. ಏನು ಸಮಸ್ಯೆಯಾಗಿದೆ ಎಂಬುದನ್ನು ಚರ್ಚೆ ಮಾಡುತ್ತೇವೆ ಎಂದರು.

ಜನಾಕ್ರೋಶ ಬೆನ್ನಲ್ಲೇ ಯು-ಟರ್ನ್, ನಿರ್ಧಾರ ಕೈಬಿಡಲು ಸರ್ಕಾರ ಚಿಂತನೆ..?

• ಉದಯವಾಹಿನಿ, ಬೆಂಗಳೂರು

ಮನೆಗಳ ಮುಂದೆ ವಾಹನ ನಿಲುಗಡೆ ಮಾಡುವುದಕ್ಕೆ ವಾರ್ಷಿಕ ಶುಲ್ಕ ವಿಧಿಸುವ ಪ್ರಸ್ತಾವಿತ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವಾಹನ ನಿಲುಗಡೆ ನಿಯಮಗಳು-2026ಕ್ಕೆ ಜನಪ್ರತಿನಿಧಿಗಳು ಹಾಗೂ ಸಾರ್ವಜನಿಕರಿಂದ ತೀವ್ರ ವಿರೋಧ ವ್ಯಕ್ತವಾಗಿರುವ ಹಿನ್ನೆಲೆಯಲ್ಲಿ, ಸರ್ಕಾರ ಈ ನಿರ್ಧಾರವನ್ನು ಮರುಪರಿಶೀಲಿಸಿ ಶೀಘ್ರದಲ್ಲೇ ಹಿಂಪಡೆಯುವ ಸಾಧ್ಯತೆಯಿದೆ ಎಂದು ನಗರಾಭಿವೃದ್ಧಿ ಇಲಾಖೆಯ ಮೂಲಗಳು ತಿಳಿಸಿವೆ.

ಪ್ರಸ್ತಾವಿತ ಕರಡು ನೀತಿಯ ಪ್ರಕಾರ, ನಿವೇಶನದ ಅಳತೆಗೆ ಅನುಗುಣವಾಗಿ ಮನೆ ಮಾಲೀಕರು ವಾರ್ಷಿಕ ರೂ.25,000ದಿಂದ ರೂ.40,000ವರೆಗೆ ವಾಹನ ನಿಲುಗಡೆ ಶುಲ್ಕ ಪಾವತಿಸಬೇಕಾಗುತ್ತದೆ. ಈ ನಿಯಮದ ವಿರುದ್ಧ ಸಾರ್ವಜನಿಕರಿಂದ ಹಲವು ಆಕ್ಷೇಪಣೆಗಳು ವ್ಯಕ್ತವಾಗಿರುವ ಹಿನ್ನೆಲೆಯಲ್ಲಿ, ನಿವಾಸಿಗಳಿಂದ ಶುಲ್ಕ ಸಂಗ್ರಹಿಸಲು ಅವಕಾಶ ಕಲ್ಪಿಸುವ ನಿಯಮವನ್ನು ಹಿರಿಯ ಅಧಿಕಾರಿಗಳು ಪರಿಶೀಲಿಸುತ್ತಿದ್ದಾರೆ ಎಂದು ನಗರಾಭಿವೃದ್ಧಿ ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಅಂತಿಮ ನಿಯಮಾವಳಿಗಳಲ್ಲಿ ಈ ನಿರ್ದಿಷ್ಟ ಅಂಶವನ್ನು ಕೈಬಿಡುವ ಸಾಧ್ಯತೆಯಿದೆ ಎಂದಿದ್ದಾರೆ. ಬಿಟಿಎಂ ಲೇಔಟ್ ಶಾಸಕ ಹಾಗೂ ಸಚಿವ ರಾಮಲಿಂಗಾ ರೆಡ್ಡಿ ಅವರು ಈ ನೀತಿಯನ್ನು ಮರುಪರಿಶೀಲಿಸುವಂತೆ ಸರ್ಕಾರವನ್ನು ಮೊದಲಿಗೆ ಒತ್ತಾಯಿಸಿದ್ದರು. ಈ ನೀತಿಯಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತದೆ ಎಂಬ ಕಾರಣಕ್ಕೆ ನಾನು ಆಕ್ಷೇಪ ವ್ಯಕ್ತಪಡಿಸಿದ್ದೇನೆ'' ಎಂದು ಸಚಿವರು ಇದೀಗ ತಿಳಿಸಿದ್ದಾರೆ.ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಮಾಜಿ ಮೇಯರ್ ಸಂಪತ್ ರಾಜ್ ಕೂಡ ಸರ್ಕಾರವು ಬೆಂಗಳೂರಿನ ಜನರಿಗೆ ತೊಂದರೆಯಾಗುವ ಯಾವುದೇ ಕ್ರಮ ಕೈಗೊಳ್ಳುವುದಿಲ್ಲ ಎಂದು ಹೇಳಿದ್ದಾರೆ.

ಉದಯವಾಹಿನಿ ಚಿತ್ರ

ಭಯೋತ್ಪಾದಕ ಕೃತ್ಯವಲ್ಲ, ವೈಯಕ್ತಿಕ ದ್ವೇಷಕ್ಕೆ ಐಇಡಿ ಬಳಕೆ!

• ಉದಯವಾಹಿನಿ, ಬೆಂಗಳೂರು

ರಾಜಧಾನಿಯ ಪುಲಕೇಶಿನಗರದಲ್ಲಿ ನಡೆದ ಐಇಡಿ ಸ್ಫೋಟ ಪ್ರಕರಣವನ್ನು ಭೇದಿಸುವಲ್ಲಿ ಬೆಂಗಳೂರು ನಗರ ಪೊಲೀಸರು ಯಶಸ್ವಿಯಾಗಿದ್ದಾರೆ.

ಅಕ್ಟೋಬರ್ 20ರಂದು ಜೆರೆಮಿಯಾ ರಸ್ತೆಯ ನಿರ್ಮಾಣ ಹಂತದ ಕಟ್ಟಡವೊಂದರಲ್ಲಿ ನಡೆದಿದ್ದ ಈ ಘಟನೆಗೆ ಸಂಬಂಧಿಸಿದಂತೆ ಅಸ್ಸಾಂ ಮೂಲದ ಮೂವರು ಆರೋಪಿಗಳನ್ನು ಬಂಧಿಸಲಾಗಿದೆ ಎಂದು ನಗರ ಪೊಲೀಸ್ ಕಮಿಷನರ್ ಸೀಮಂತ್ ಕುಮಾರ್ ಸಿಂಗ್ ತಿಳಿಸಿದ್ದಾರೆ. ಪ್ರಕರಣದ ಕುರಿತು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಮಿಷನರ್, ಈ ಸ್ಫೋಟದ ಹಿಂದೆ ಯಾವುದೇ ಭಯೋತ್ಪಾದಕ ಸಂಘಟನೆಗಳ ಕೈವಾಡ ಅಥವಾ ಭಯೋತ್ಪಾದನಾ ಆಯಾಮವಿಲ್ಲ. ಇದು ಸಂಪೂರ್ಣವಾಗಿ ಕೌಟುಂಬಿಕ ಮತ್ತು ವೈಯಕ್ತಿಕ ದ್ವೇಷದ ಹಿನ್ನೆಲೆಯಲ್ಲಿ ನಡೆದಿರುವ ಕೊಲೆ ಯತ್ನವಾಗಿದೆ ಎಂದು ಸ್ಪಷ್ಟಪಡಿಸಿದ್ದಾರೆ.

ಗ್ರಾಮದಲ್ಲಿ ಭೂಮಿ, ಹಣಕಾಸು ಹಾಗೂ ವೈಯಕ್ತಿಕ ವಿಚಾರಗಳಿಗೆ ಸಂಬಂಧಿಸಿದ ವಿವಾದದ ಹಿನ್ನೆಲೆಯಲ್ಲಿ ಸೆಕ್ಯುರಿಟಿ ಗಾರ್ಡ್‌ನನ್ನು ಹತ್ಯೆ ಮಾಡುವ ಉದ್ದೇಶದಿಂದ ಸ್ಫೋಟ ನಡೆಸಲಾಗಿದೆ. ಬಂಧಿತರನ್ನು ಅಸ್ಸಾಂನ ಹೈಲಾಕಂಡಿ ಜಿಲ್ಲೆಯ ದೀನನಾಥಪುರ ಗ್ರಾಮದ ಬುರ್ಹಾನ್ ಅಹ್ಮದ್ ಬುರ್ಭುಯ್ಯ (20), ಜಾಹಿದುಲ್ ಹುಸೇನ್ ಬುರ್ಭುಯ್ಯ (27) ಹಾಗೂ ಸಜಿದುಲ್ ಲಷ್ಕರ್ (22) ಎಂದು ಗುರುತಿಸಲಾಗಿದೆ.

ಬುರ್ಹಾನ್ ಕಳೆದ ಒಂದು ವರ್ಷದಿಂದ ರಾಯಚೂರು ಜಿಲ್ಲೆಯ ಮಸ್ಕಿಯಲ್ಲಿ ವೆಲ್ಡಿಂಗ್ ಕೆಲಸ ಮಾಡುತ್ತಿದ್ದ. ಜಾಹಿದುಲ್ ಜಯನಗರದ ಬೇಕರಿಯಲ್ಲಿ ಹಾಗೂ ಸಜಿದುಲ್ ಹೋಟೆಲ್‌ನಲ್ಲಿ ಕೆಲಸ ಮಾಡುತ್ತಿದ್ದರು. ಇವರಿಬ್ಬರು ಕಳೆದ ಆರು ವರ್ಷಗಳಿಂದ ಬೆಂಗಳೂರಿನಲ್ಲಿ ನೆಲೆಸಿದ್ದರು. ಮೂವರೂ ಬಾಲ್ಯದ ಸ್ನೇಹಿತರಾಗಿದ್ದಾರೆ.

ಉದಯವಾಹಿನಿ ಚಿತ್ರ

ಭದ್ರತಾ ಸಿಬ್ಬಂದಿಯಾಗಿ ಕೆಲಸ

ಸ್ಫೋಟದಲ್ಲಿ ಗಾಯಗೊಂಡವರನ್ನು ಉತ್ತರ ಪ್ರದೇಶ ಮೂಲದ ಪೇಂಟರ್ ಸೂರಜ್ ಕುಮಾರ್ (28) ಹಾಗೂ ನಿರ್ಮಾಣ ಹಂತದ ಕಟ್ಟಡದಲ್ಲಿ ಭದ್ರತಾ ಸಿಬ್ಬಂದಿಯಾಗಿ ಕೆಲಸ ಮಾಡುತ್ತಿದ್ದ ಅಲ್ಲಾವುದ್ದೀನ್

ನಿಮ್ಮ ನಗರವನ್ನು ಸುಂದರಗೊಳಿಸುವ ಪ್ಲ್ಯಾನ್ ಇದೆಯೇ? ಇಮೇಲ್ ಮಾಡಿ..!

• ಉದಯವಾಹಿನಿ, ಬೆಂಗಳೂರು

ಡಿಸೆಂಬರ್ 4ರಿಂದ 13ರವರೆಗೆ ನಡೆಯಲಿರುವ ಬೆಂಗಳೂರು ಜಾತ್ರೆಯ ಅಂಗವಾಗಿ ನಗರದ ಸಾರ್ವಜನಿಕ ಸ್ಥಳಗಳನ್ನು ಸುಧಾರಿಸುವ ಉದ್ದೇಶದಿಂದ **ಬೆಂಗಳೂರು ವಿನ್ಯಾಸ:** ಮುಕ್ತ ಆಹ್ವಾನ ಉಪಕ್ರಮ ಆರಂಭಿಸಲಾಗಿದೆ. ಇದರಡಿ ವಿನ್ಯಾಸಕಾರರು, ವಾಸ್ತುಶಿಲ್ಪಿಗಳು, ಕಲಾವಿದರು, ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ನಗರದ ದೈನಂದಿನ ಬಳಕೆಯ ಸ್ಥಳಗಳನ್ನು ಅಭಿವೃದ್ಧಿಪಡಿಸಲು ತಮ್ಮ ವಿನ್ಯಾಸ ಮತ್ತು ಸಲಹೆಗಳನ್ನು ಸಲ್ಲಿಸಬಹುದು. ರಸ್ತೆ ದೀಪಗಳು, ಬಸ್ ನಿಲ್ದಾಣಗಳು, ಸಾರ್ವಜನಿಕ ಆಸನಗಳು, ರಸ್ತೆ ವಿಭಜಕಗಳು, ಕಸದ ತೊಟ್ಟಿಗಳು, ನಾಗರಿಕ ಮಾಹಿತಿ ಫಲಕಗಳು, ಅಂಗಡಿಗಳ ಮುಂಭಾಗ ಹಾಗೂ ನೆರೆಹೊರೆ ಪ್ರದೇಶಗಳ ವಿಶಿಷ್ಟ ಗುರುತನ್ನು ಸುಧಾರಿಸುವಂತಹ ಪ್ರಾಯೋಗಿಕ, ಕಡಿಮೆ ವೆಚ್ಚದ ಮತ್ತು ಎಲ್ಲರಿಗೂ ಅನುಕೂಲವಾಗುವ ವಿನ್ಯಾಸಗಳನ್ನು ಆಹ್ವಾನಿಸಲಾಗಿದೆ.

ಇದಲ್ಲದೆ, ನಗರದ ಯಾವುದಾದರೂ 500 ಮೀಟರ್ ಉದ್ದದ ರಸ್ತೆ ಅಥವಾ ಪ್ರದೇಶವನ್ನು ಆಯ್ಕೆ ಮಾಡಿಕೊಂಡು, ಪಾದಚಾರಿ ಸಂಚಾರ, ರಸ್ತೆ ದಾಟುವ ವ್ಯವಸ್ಥೆ, ಹಸಿರು ಪ್ರದೇಶ, ಬೆಳಕಿನ ವ್ಯವಸ್ಥೆ, ಸಾರ್ವಜನಿಕ ಸಾರಿಗೆ ಹಾಗೂ ಅಂಗವಿಕಲರಿಗೆ ಅನುಕೂಲವಾಗುವ ಸೌಲಭ್ಯಗಳನ್ನು ಒಳಗೊಂಡ ಸಮಗ್ರ ಅಭಿವೃದ್ಧಿ ವಿನ್ಯಾಸವನ್ನೂ ಸಲ್ಲಿಸಬಹುದು.

ನಗರದ ಅಗತ್ಯಗಳಿಗೆ ನಾಗರಿಕರ ಸೃಜನಶೀಲತೆಯನ್ನು ಬೆಸೆಯುವುದು ಈ ಉಪಕ್ರಮದ ಉದ್ದೇಶವಾಗಿದೆ ಎಂದು ಬೆಂಗಳೂರು ಅಭಿವೃದ್ಧಿ ಸಚಿವ ಕೃಷ್ಣ ಬೈರೇಗೌಡ ತಿಳಿಸಿದ್ದಾರೆ. ನಗರವನ್ನು ಅದರ ಬೃಹತ್ ಮೂಲಸೌಕರ್ಯಗಳಿಂದ ಮಾತ್ರ ಅಳೆಯಲು ಸಾಧ್ಯವಿಲ್ಲ. ಜನರು ಪ್ರತಿದಿನ ಬಳಸುವ ಸಣ್ಣಪುಟ್ಟ ಸಾರ್ವಜನಿಕ ಸ್ಥಳಗಳೂ ನಗರದ ಅನುಭವವನ್ನು ರೂಪಿಸುತ್ತವೆ. ಬೆಂಗಳೂರನ್ನು ಹೆಚ್ಚು ಸುಲಭವಾಗಿ ಬಳಸಬಹುದಾದ, ಸ್ವಾಗತಾರ್ಹ ಹಾಗೂ ವಾಸಯೋಗ್ಯ ನಗರವನ್ನಾಗಿ ಮಾಡುವ ಆಲೋಚನೆಗಳನ್ನು ನಾಗರಿಕರು ಮುಂದಿಡಬೇಕೆಂಬುದು ನಮ್ಮ ಆಶಯ ಎಂದು ಹೇಳಿದ್ದಾರೆ.

ಇಬ್ಬರು ಪಿಜ್ಜಾ ಮಳಿಗೆ ಉದ್ಯೋಗಿಗಳ ವಿರುದ್ಧ ಪ್ರಕರಣ ದಾಖಲು

• ಉದಯವಾಹಿನಿ, ಬೆಂಗಳೂರು

ವರ್ತೂರಿನಲ್ಲಿರುವ 'ಮೋಜೋ ಪಿಜ್ಜಾ' ಮಳಿಗೆಯಲ್ಲಿ ಕೆಲಸ ಮಾಡುತ್ತಿದ್ದ ಇಬ್ಬರು ಡೆಲಿವರಿ ಸಿಬ್ಬಂದಿ, ರಾತ್ರಿ ಪಾಳಿಯ ಕೆಲಸದ ವಿಚಾರವಾಗಿ ಮ್ಯಾನೇಜರ್ ಜೊತೆ ಜಗಳವಾಡಿದ್ದಾರೆ.

ಬಳಿಕ ಅವರು ಮಳಿಗೆಯ ಪಿಠೋಪಕರಣಗಳನ್ನು ಜಖಂಗೊಳಿಸಿದ್ದು, ಸಿಬ್ಬಂದಿಯೊಬ್ಬರಿಗೆ ಚಾಕುವಿನಿಂದ ಬೆದರಿಕೆ ಹಾಕಿದ್ದಾರೆ. ಮ್ಯಾನೇಜರ್‌ಗೆ ಸೇರಿದ ಬೈಕ್ ಗೆ ಬೆಂಕಿ ಹಚ್ಚಿದ ಆರೋಪದ ಮೇಲೆ ಇವರ ವಿರುದ್ಧ ಪ್ರಕರಣ ದಾಖಲಾಗಿದೆ. ಗುರುವಾರ ಮುಂಜಾನೆ 4 ಗಂಟೆಗೆ ಈ ಘಟನೆ ನಡೆದಿದ್ದು, ಮಳಿಗೆಯ ಮ್ಯಾನೇಜರ್ ಸತೀಶ್ ಕುಮಾರ್ ದೂರು ನೀಡಿದ್ದಾರೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಆರೋಪಿಗಳಾದ ಸುಮನ್ ಕುಮಾರ್ ನಾಯಕ್ ಮತ್ತು ಜಿಬ್‌ಕಾಂತ್ ಪೋದ್ದಾರ್, ಚರ್ಚ್‌ವೊಂದರ ಸಮೀಪವಿರುವ ಈ ಮಳಿಗೆಯಲ್ಲಿ ಡೆಲಿವರಿ ಸಿಬ್ಬಂದಿಯಾಗಿ ಕೆಲಸ ಮಾಡುತ್ತಿದ್ದರು ಎನ್ನಲಾಗಿದೆ.

ರಾತ್ರಿ ಪಾಳಿಯಲ್ಲಿ ಕೆಲಸ ಮಾಡಲು ಈ ಇಬ್ಬರು ಉದ್ಯೋಗಿಗಳು ನಿರಾಕರಿಸಿದಾಗ, ಅವರಿಗೂ ಮ್ಯಾನೇಜರ್‌ಗೂ ನಡುವೆ ವಾಗ್ವಾದ ನಡೆದಿದೆ.

ಸಿದ್ದರಾಮಯ್ಯರನ್ನ ಭೇಟಿಯೇ ಆಗಿಲ್ಲ- ಮುಸುಕುಧಾರಿ ಮಹಿಳೆ!

• ಉದಯವಾಹಿನಿ, ಬೆಂಗಳೂರು

ಸ್ಟಿಂಗ್ ಆಪರೇಷನ್ ಪ್ರಕರಣ ರಾಜ್ಯದಲ್ಲಿ ಸಂಚಲನ ಮೂಡಿಸಿರುವಂತೆಯೇ ಇದರಲ್ಲಿ ಭಾಗಿದ್ದಾರೆ ಎನ್ನಲಾದ ಕೇರಳ ಮೂಲದ ಮಹಿಳೆಯನ್ನು ಪೊಲೀಸರು ಬಂಧಿಸಿದ್ದಾರೆ. ವಿಚಾರಣೆ ವೇಳೆ ಮುಸುಕುಧಾರಿ ಮಹಿಳೆ, ಸಿದ್ದರಾಮಯ್ಯ ಯಾವುದೇ ತೊಂದರೆ ಕೊಟ್ಟಿಲ್ಲ. ನನಗೆ ಹೇಳಿ ಕೊಟ್ಟ ರೀತಿ ನಾನು ಹೇಳಿದ್ದೇನೆ. ನಾನು ಸಿದ್ದರಾಮಯ್ಯನವರನ್ನ ಭೇಟಿಯೇ ಆಗಿಲ್ಲ ಎಂದು ಹೇಳಿಕೆ ನೀಡಿದ್ದಾರೆ. 2023ರಲ್ಲಿ 'ಸಂಚುಕೋರರ ಒತ್ತಡಕ್ಕೆ ಮಣಿದು ನಾನು ಸುಳ್ಳು ಹೇಳಿದ್ದೆ.

ಉದ್ದೇಶಪೂರ್ವಕವಾಗೇ ನನ್ನಿಂದ ಸುಳ್ಳು ಹೇಳಿಸಿದ್ದರು. ಸಿದ್ದರಾಮಯ್ಯ ವಿರುದ್ಧ ಸ್ಟಿಂಗ್ ಅನ್ನೋದೇ ಷಡ್ಯಂತ್ರ. ಇದು ಕಳಂಕ ತರುವ ಪ್ರಯತ್ನ ಅಂತಾ ಮಹಿಳೆ ಹೇಳಿದ್ದಾಳೆ. ವಾರದ ಹಿಂದೆಯೇ ಸಿಸಿಬಿ ಅಧಿಕಾರಿಗಳ ತಂಡ ಕ್ಯಾಲಿಕಟ್ ಗೆ ತೆರಳಿ ಮಹಿಳೆ ಹೇಳಿಕೆ ದಾಖಲಿಸಿ ವಿಡಿಯೋ ಮಾಡಿಕೊಂಡು ಬಂದಿದೆ. ಸದ್ಯ ಮುಸುಕುಧಾರಿ ಮಹಿಳೆಯ ಹೇಳಿಕೆ ದಾಖಲಿಸಿಕೊಂಡಿರುವ ಮಹಿಳೆ ಒಂದೆರಡು ವಾರದಲ್ಲೇ ಚಾರ್ಜ್‌ಶೀಟ್ ಸಲ್ಲಿಸುವ ಸಾಧ್ಯತೆ ಎಂದು ಪೊಲೀಸ್ ಮೂಲಗಳಿಂದ ತಿಳಿದುಬಂದಿದೆ. ಸ್ಟಿಂಗ್ ವಿವಾದದ ಮಧ್ಯೆ ರಾಹುಲ್ ಭೇಟಿಗೆ ಮಾಜಿ ಸಿಎಂ ಸಿದ್ದರಾಮಯ್ಯ ಮುಂದಾಗಿದ್ದಾರೆ. ನವೆಂಬರ್ 2ರಂದು ಭೇಟಿಗೆ ಸಿದ್ದರಾಮಯ್ಯ ಸಮಯ ಕೇಳಿದ್ದಾರೆ. ಸ್ಟಿಂಗ್ ಆಪರೇಷನ್, ರಾಜ್ಯ ರಾಜಕೀಯ ಬಗ್ಗೆ ಚರ್ಚೆ ನಡೆಯಲಿದೆ. ಇನ್ನೂ ಸ್ಟಿಂಗ್ ಆಪರೇಷನ್ ಸೂತ್ರಧಾರಿಯನ್ನ ಮೊದಲು ಬಂಧಿಸಿ ಎಂದು ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಆಗ್ರಹಿಸಿದ್ದಾರೆ. ಹುಬ್ಬಳ್ಳಿಯಲ್ಲಿ ಪ್ರಹ್ಲಾದ್ ಜೋಶಿ ಮಾತನಾಡಿ, ಸ್ಟಿಂಗ್ ವಿಚಾರದಲ್ಲಿ ಕಾಂಗ್ರೆಸ್ ಇಬ್ಬಗೆಯ ನೀತಿ ಅನುಸರಿಸುತ್ತಿದೆ.

302 ಹಳ್ಳಿಗಳಿಗೆ ಭೇಟಿ ನೀಡಿದ ಶಾಸಕ ಪ್ರದೀಪ್ ಈಶ್ವರ್

• ಉದಯವಾಹಿನಿ, ಬೆಂಗಳೂರು

ಚಿಕ್ಕಬಳ್ಳಾಪುರ ಶಾಸಕ ಪ್ರದೀಪ್ ಈಶ್ವರ್ ಅವರು ಜನರಿಗೆ ಸರ್ಕಾರಿ ಸೇವೆಗಳನ್ನು ಹತ್ತಿರವಾಗಿಸುವ ಉದ್ದೇಶದಿಂದ ಆರಂಭಿಸಿರುವ 'ನಮ್ಮ ಊರಿಗೆ ನಮ್ಮ ಶಾಸಕರು' ಕಾರ್ಯಕ್ರಮದಡಿ 302ನೇ ಗ್ರಾಮಕ್ಕೆ ಭೇಟಿ ನೀಡುವ ಮೂಲಕ ಹೊಸ ಮೈಲಿಗಲ್ಲು ತಲುಪಿದ್ದಾರೆ. ಶಾಸಕರಾಗಿ ಆಯ್ಕೆಯಾದ ತಕ್ಷಣವೇ ಈ ಕಾರ್ಯಕ್ರಮವನ್ನು ಆರಂಭಿಸಿದ್ದಾಗಿ ತಿಳಿಸಿದ ಅವರು, ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಗ್ರಾಮಸ್ಥರು ಸರ್ಕಾರಿ ಕಚೇರಿಗಳಿಗೆ ಅಲೆಯುವ ಬದಲು ಆಡಳಿತವೇ ದೂರದ ಹಳ್ಳಿಗಳಿಗೆ ತಲುಪಬೇಕು ಎಂಬ ಉದ್ದೇಶದಿಂದ ಈ ಉಪಕ್ರಮ ಕೈಗೊಂಡಿದ್ದಾಗಿ ಹೇಳಿದರು. ಗ್ರಾಮಗಳಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಸಾರ್ವಜನಿಕರ ಸಮಸ್ಯೆಗಳನ್ನು ಆಲಿಸಲು ಸಂಬಂಧಪಟ್ಟ ಇಲಾಖೆಗಳ ಅಧಿಕಾರಿಗಳನ್ನು ಸ್ಥಳಕ್ಕೆ ಕರೆಯಿಸಲಾಗುತ್ತದೆ. ಈ ಮೂಲಕ ಹಲವು ಸಮಸ್ಯೆಗಳಿಗೆ ಸ್ಥಳದಲ್ಲೇ ಪರಿಹಾರ ಕಲ್ಪಿಸಲಾಗಿದೆ ಎಂದು ತಿಳಿಸಿದರು. ರಸ್ತೆ, ಕುಡಿಯುವ ನೀರು, ಚರಂಡಿ ವ್ಯವಸ್ಥೆ, ವಿದ್ಯುತ್, ಮೂಲಸೌಕರ್ಯ ಹಾಗೂ ಸಾರ್ವಜನಿಕ ಸೇವೆಗಳಿಗೆ ಸಂಬಂಧಿಸಿದ ಸಮಸ್ಯೆಗಳಿಗೆ ಆದ್ಯತೆ ನೀಡಲಾಗುತ್ತಿದೆ ಎಂದರು. ಜಾತಿ, ಧರ್ಮ ಅಥವಾ ಸಮುದಾಯದ ಭೇದವಿಲ್ಲದೆ ಎಲ್ಲಾ ಗ್ರಾಮಸ್ಥರಿಗೂ ಸೇವೆ ಸಲ್ಲಿಸುವುದು ಈ ಕಾರ್ಯಕ್ರಮದ ಉದ್ದೇಶವಾಗಿದೆ ಎಂದು ಪ್ರದೀಪ್ ಈಶ್ವರ್ ಹೇಳಿದರು. ರಾಜಕೀಯವೆಂದರೆ ಜನರ ಸೇವೆ ಮಾಡುವ ಜವಾಬ್ದಾರಿಯಾಗಿದ್ದು, ಗ್ರಾಮೀಣ ಪ್ರದೇಶಗಳ ಸಮಸ್ಯೆಗಳನ್ನು ಪರಿಹರಿಸಲು ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸುವ ಪ್ರಯತ್ನ ಮುಂದುವರಿಯಲಿದೆ ಎಂದು ತಿಳಿಸಿದರು.

ಕೃಪಾ ಆಳ್ವಾ ವಿಚಾರಣೆ; ನೋಟಿಸ್‌ಗೂ ಮೊದಲೇ ತನಿಖಾಧಿಕಾರಿ ಎದುರು ಹಾಜರು

ನಗರ ಬಿಟ್ಟು ತೆರಳುವಾಗ ಮಾಹಿತಿ ನೀಡಬೇಕು. ವಿಚಾರಣೆಗೆ ಕರೆದಾಗ ಹಾಜರಾಗಬೇಕು. ತನಿಖೆಗೆ ಸಹಕರಿಸಬೇಕು' ಎಂದು ಆರೋಪಿಗೆ ಹೇಳಿ ಕಳುಹಿಸಿದ್ದಾರೆ

• ಉದಯವಾಹಿನಿ, ಬೆಂಗಳೂರು

1 ವಿಡಿಯೊ ಅಪ್‌ಲೋಡ್ ಮಾಡಿದ್ದ ರಿತೇಶ್ ಪಾಂಡೆ

2 ಸಿಸಿಬಿ ನೋಟಿಸ್ ನೀಡುವ ಮೊದಲೇ ವಿಚಾರಣೆ

3 ಯಾವ ಉದ್ದೇಶಕ್ಕಾಗಿ ಈ ರೀತಿ ಮಾಡಲಾಗಿತ್ತು?

ಎಐಸಿಸಿ ಕಾರ್ಯಕಾರಿ ಸಮಿತಿ ಸದಸ್ಯ ಸಿದ್ದರಾಮಯ್ಯ ಅವರ ವಿರುದ್ಧ ನಡೆದಿರುವ 'ಸ್ಟಿಂಗ್'' ಕಾರ್ಯಾಚರಣೆಯ ತನಿಖೆ ನಡೆಸುತ್ತಿರುವ ನಗರದ ಕೇಂದ್ರ ಸೈಬರ್ ಅಪರಾಧ ವಿಭಾಗದ ಪೊಲೀಸರು, ಕಾಂಗ್ರೆಸ್ ನಾಯಕಿ ಕೃಪಾ ಆಳ್ವಾ ಅವರ ವಿಚಾರಣೆ ನಡೆಸಿದ್ದಾರೆ. ಈ ಬೆಳವಣಿಗೆಯ ಮಧ್ಯೆ, ಪೊಲೀಸರು 'ಸ್ಟಿಂಗ್' ವಿಡಿಯೊದಲ್ಲಿ ಮಾತನಾಡಿದ್ದಾರೆನ್ನಲಾದ ಕೇರಳದ ಮಹಿಳೆಯನ್ನು ಪತ್ತೆ ಮಾಡಿ, ಹೇಳಿಕೆ ದಾಖಲಿಸಿಕೊಂಡಿದ್ದಾರೆ.

ಪ್ರಕರಣ ಸಂಬಂಧ ಪೊಲೀಸರು, ಸ್ಟಿಂಗ್ ಕಾರ್ಯಾಚರಣೆ ವಿಡಿಯೋ ಅಪ್‌ಲೋಡ್ ಮಾಡಿದ್ದ ರಿತೇಶ್ ಪಾಂಡೆಯನ್ನು ಬಂಧಿಸಿ ವಿಚಾರಣೆ ನಡೆಸಿದ ಬೆನ್ನಲ್ಲೇ, ಕೃಪಾ ಆಳ್ವಾ ಅವರು ಸಿಸಿಬಿ ನೋಟಿಸ್ ನೀಡುವ ಮೊದಲೇ ವಿಚಾರಣೆಗೆ ಹಾಜರಾಗಿ, ತಮಗೆ ಗೊತ್ತಿರುವ ಮಾಹಿತಿ ನೀಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

''ಸ್ಟಿಂಗ್ ಕಾರ್ಯಾಚರಣೆಯಲ್ಲಿ ನಿಮ್ಮ ಪಾತ್ರವೇನು? ಯಾವ ಉದ್ದೇಶಕ್ಕಾಗಿ ಈ ರೀತಿ ಮಾಡಲಾಗಿತ್ತು? ಬೇರೆಯವರ ಪಾತ್ರವೇನು? ನಿಮ್ಮ ಜತೆ ಯಾರ್ಯಾರು ಸಂಚು ನಡೆಸಿದರು? ಎಲ್ಲಿ ವಿಡಿಯೋ ಮಾಡಲಾಗಿದೆ? ಸಂತ್ರಸ್ತ ಮಹಿಳೆ ಯಾರು?' ಹೀಗೆ ಹಲವಾರು ಪ್ರಶ್ನೆಗಳನ್ನು ತನಿಖಾಧಿಕಾರಿಗಳು ಅವರಿಗೆ ಕೇಳಿ, ಮಾಹಿತಿ ಪಡೆದುಕೊಂಡಿದ್ದಾರೆಮತ್ತೆ ಕರೆದಾಗ ವಿಚಾರಣೆಗೆ ಬರುವಂತೆ ಸೂಚಿಸಿ, ಕೃಪಾ ಆಳ್ವಾ ಅವರಿಗೆ ಪೊಲೀಸರು ನೋಟಿಸ್ ನೀಡಿ ಕಳುಹಿಸಿದ್ದಾರೆ. ಪ್ರಕರಣ ಸಂಬಂಧ ದೆಹಲಿಯಲ್ಲಿ ರಿತೀಶ್ ಪಾಂಡೆ ಅವರನ್ನು ಈಗಾಗಲೇ ಬಂಧಿಸಿ. ಕೆಲವು ಮಾಹಿತಿಗಳನ್ನು ಪೊಲೀಸರು ಪಡೆದುಕೊಂಡಿದ್ದಾರೆ. ಯೂಟ್ಯೂಬ್‌ನಲ್ಲಿ ವಿಡಿಯೊ ಅಪ್‌ಲೋಡ್ ಮಾಡುವಂತೆ ಆರೋಪಿಗೆ ಸೂಚಿಸಿದ್ದವರು ಯಾರು, ಪೆನ್‌ಡ್ರೈವ್ ತಲುಪಿಸಿದ್ದವರು ಯಾರು ಎಂಬುದರ ಪತ್ತೆಗಾಗಿ ಪೊಲೀಸರು ತನಿಖೆ ಮುಂದುವರಿಸಿದ್ದಾರೆ. 'ನಗರ ಬಿಟ್ಟು ತೆರಳುವಾಗ ಮಾಹಿತಿ ನೀಡಬೇಕು. ವಿಚಾರಣೆಗೆ ಕರೆದಾಗ ಹಾಜರಾಗಬೇಕು. ತನಿಖೆಗೆ ಸಹಕರಿಸಬೇಕು' ಎಂದು ಆರೋಪಿಗೆ ಹೇಳಿ ಕಳುಹಿಸಿದ್ದಾರೆ. ಅವಹೇಳನಕಾರಿ ಹಾಗೂ ಮಾನಹಾನಿಕರ ವಿಡಿಯೊವೊಂದನ್ನು ಪ್ರಸಾರ ಮಾಡಲಾಗಿದೆ ಎಂದು ಆರೋಪಿಸಿ ಸಿದ್ದರಾಮಯ್ಯ ಅವರು ಅಕ್ಟೋಬರ್ 6ರಂದು ನಗರದ ಸೈಬರ್ ಅಪರಾಧ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಆ ದೂರು ಆಧರಿಸಿ ತನಿಖೆ ನಡೆಯುತ್ತಿದೆ.

ಆರೋಪಿಗಳಿಗಾಗಿ ವ್ಯಾಪಕ ಶೋಧ: ಪ್ರಕರಣದಲ್ಲಿ ನೋಟಿಸ್ ನೀಡಿದರೂ ವಿಚಾರಣೆಗೆ ಹಾಜರಾಗದೇ ತಲೆಮರೆಸಿಕೊಂಡಿರುವ ಜೆಡಿಎಸ್ ಕಾರ್ಯಕರ್ತರಾದ ಮೋಹನ್ ಗೌಡ ಮತ್ತು ಚಂದನ್ ಅವರ ಪತ್ತೆ ಕಾರ್ಯ ನಡೆಯುತ್ತಿದೆ. ಮೋಹನ್ ಗೌಡ ಅವರ ಬ್ಯಾಡರಹಳ್ಳಿಯ ಮನೆ ಮೇಲೆ ಪೊಲೀಸರು ದಾಳಿ ಮಾಡಿ ಪರಿಶೀಲಿಸಿದ್ದು, ಪೆನ್ ಡ್ರೈವ್‌ಗಳನ್ನು ಜಪ್ತಿ ಮಾಡಿದ್ದಾರೆ ಎಂದು ಗೊತ್ತಾಗಿದೆ. ಈ ಇಬ್ಬರಿಗೂ ತಾವು ಬಳಸುವ ಮೊಬೈಲ್ ಹಾಗೂ ಲ್ಯಾಪ್‌ಟಾಪ್ ಸೇರಿ ಇತರೆ ಎಲೆಕ್ಟ್ರಾನಿಕ್ ವಸ್ತುಗಳ ಸಮೇತ ವಿಚಾರಣೆಗೆ ಹಾಜರಾಗುವಂತೆ ಸಿಸಿಬಿ ಎರಡು ಬಾರಿ ನೋಟಿಸ್ ನೀಡಿದೆ. ಪ್ರಕರಣದಲ್ಲಿ ಎಸ್.ಶಿವಸ್ವಾಮಿ ಎಂಬವರ ಹೆಸರು ಕೇಳಿ ಬಂದಿದ್ದು, ಅವರಿಗೂ ಪೊಲೀಸರು ಹುಡುಕಾಟ ನಡೆಸುತ್ತಿದ್ದಾರೆ.

ಉದಯವಾಹಿನಿ ಚಿತ್ರ

> ತಮ್ಮ ವಿರುದ್ಧ ಷಡ್ಯಂತ್ರ ನಡೆದಿದೆ ಎಂದು ಸಿದ್ದರಾಮಯ್ಯ ಹೇಳಿದರೂ ಮುಖ್ಯಮಂತ್ರಿ ಇದನ್ನು ಗಂಭೀರವಾಗಿ ಪರಿಗಣಿಸಿಲ್ಲ. ಮುಖ್ಯಮಂತ್ರಿ, ಗೃಹ ಸಚಿವರು ಈಗಲಾದರೂ ಎಚ್ಚೆತ್ತುಕೊಂಡು ಪಾರದರ್ಶಕ ತನಿಖೆ ಮಾಡಬೇಕು.- ಬಿ.ವೈ.ವಿಜಯೇಂದ್ರ

> ಈ ಸ್ಟಿಂಗ್ ಕಾರ್ಯಾಚರಣೆ ನಡೆಸಿದ್ದು ತಾನೇ ಎಂದು ಹೇಳಿಕೊಂಡ ವ್ಯಕ್ತಿ ನಿರೀಕ್ಷಣಾ ಜಾಮೀನಿಗೆ ಅರ್ಜಿ ಸಲ್ಲಿಸಿದರೂ, ರಾಜ್ಯ ಸರ್ಕಾರ ಕೈಕಟ್ಟಿ ಕುಳಿತು ಕೊಂಡಿತ್ತು. ಹೀಗಾಗಿಯೇ ಸಿದ್ದರಾಮಯ್ಯ ಸಹಿತ ಎಲ್ಲರೂ ತನಿಖೆ ಬಗ್ಗೆ ಅನುಮಾನ ವ್ಯಕ್ತ ಪಡಿಸಿದ್ದಾರೆ' ಎಂದು ಹೇಳಿದರು.-ಎಚ್.ಡಿ.ಕುಮಾರಸ್ವಾಮಿ

ಪರಿಶಿಷ್ಟರು, ಹಿಂದುಳಿದವರಿಗೆ ಮನೆ: ಶಾಸಕ ಪ್ರದೀಪ್ ಈಶ್ವರ್ ಭರವಸೆ

• ಉದಯವಾಹಿನಿ, ಚಿಕ್ಕಬಳ್ಳಾಪುರ

ಉದಯವಾಹಿನಿ ಚಿತ್ರ

ನಾನು ಮುಂದೆ ಸಚಿವ, ಉಪಮುಖ್ಯಮಂತ್ರಿ, ಮುಖ್ಯಮಂತ್ರಿ ಆಗಬೇಕು ಎನ್ನುವ ಗುರಿಯೊಂದಿಗೆ ಕೆಲಸ ಮಾಡುತ್ತಿದ್ದೇನೆ. ಮುಂದಿನ 20 ವರ್ಷಕ್ಕಾದರೂ ಅಧಿಕಾರ ಹಿಡಿಯುವೆ. ಆಗ ಪರಿಶಿಷ್ಟ ಜಾತಿ, ಪಂಗಡ ಮತ್ತು ಹಿಂದುಳಿದ ವರ್ಗಗಳ ಜನರಿಗೆ ಎರಡು ಕೊಠಡಿಗಳ ಮನೆ ಕಟ್ಟಿಸಿಕೊಡುವೆ' ಎಂದು ಶಾಸಕ ಪ್ರದೀಪ್ ಈಶ್ವರ್ ಭರವಸೆ ನೀಡಿದರು. ತಾಲ್ಲೂಕಿನ ಪೆರೇಸಂದ್ರದಲ್ಲಿ ನಡೆದ ಕಾಂಗ್ರೆಸ್ ಮುಖಂಡರು ಮತ್ತು ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದರು. ನಾಲ್ಕು ಬ್ಯಾಂಕುಗಳಿಂದ ಸಾಲ ತಂದಾದರೂ ಸರಿ ತಲಾ 50 ಲಕ್ಷ ವೆಚ್ಚದಲ್ಲಿ ಮನೆಗಳನ್ನು ನಿರ್ಮಿಸಿಕೊಡುವೆ. ಕಾಂಗ್ರೆಸ್ ಪಕ್ಷವನ್ನು ಬೆಳೆಸುವೆ. ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ತಾಕತ್ತಿನಿಂದ ಮುಖ್ಯಮಂತ್ರಿ ಆಗಿದ್ದಾರೆ' ಎಂದರು.

“ನಿನಗೆ ಮುಂದೆ ಬಿ.ಫಾರಂ ಕೊಡುವುದಿಲ್ಲ ಎನ್ನುತ್ತಾರೆ. ಆದರೆ ನಾನು ಸಚಿವ, ಸಿ.ಎಂ ಆಗಬೇಕು ಎಂದು ಕನಸು ಕಾಣುತ್ತಿದ್ದೇನೆ. ನಾನು ಮುಖ್ಯಮಂತ್ರಿಯಾದರೆ ಬಡವರ ಮಕ್ಕಳ ಶಿಕ್ಷಣದ ಶುಲ್ಕವನ್ನು ಸರ್ಕಾರವೇ ಭರಿಸುವಂತೆ ಮಾಡುವೆ. ಬಡವರ ಮಕ್ಕಳಿಗೆ ವರ್ಷಕ್ಕೆ 10 ಜೊತೆ ಬಟ್ಟೆ ಹೊಲಿಸಿಕೊಡುವೆ' ಎಂದರು.

ಕೊಡಗು ಜಿಲ್ಲೆಯಾದ್ಯಂತ ಉತ್ತಮ ಮಳೆ; ಭತ್ತ, ಕಾಫಿ ಬೆಳೆಗೆ ಅನುಕೂಲ

• ಉದಯವಾಹಿನಿ, ಮಡಿಕೇರಿ

ಕೊಡಗು ಜಿಲ್ಲೆಯಲ್ಲಿ ಕಳೆದ ಎರಡು ದಿನಗಳಿಂದ ಸುರಿಯುತ್ತಿದ್ದ ಭಾರಿ ಮಳೆ ರಾತ್ರಿಯೂ ಮುಂದುವರಿದಿದ್ದು, ಜಿಲ್ಲೆಯ ಹಲವು ಭಾಗಗಳಲ್ಲಿ ಉತ್ತಮ ಮಳೆಯಾಗಿದೆ. ಭಾನುವಾರ ಮಳೆಯ ಪ್ರಮಾಣ ಕಡಿಮೆಯಾಗಿತ್ತು.

ರಾತ್ರಿ ಸಂಪಾಜೆಯಲ್ಲಿ 5 ಸೆಂ.ಮೀ., ಭಾಗಮಂಡಲದಲ್ಲಿ 4.5 ಸೆಂ.ಮೀ., ಮಡಿಕೇರಿಯಲ್ಲಿ 4 ಸೆಂ.ಮೀ., ಶಾಂತಳ್ಳಿಯಲ್ಲಿ 3.5 ಸೆಂ.ಮೀ. ಹಾಗೂ ಸೋಮವಾರಪೇಟೆಯಲ್ಲಿ 3.2 ಸೆಂ.ಮೀ. ಮಳೆಯಾಗಿದೆ.

ಈ ಮಳೆ ಭತ್ತ ಮತ್ತು ಕಾಫಿ ಬೆಳೆಗಳಿಗೆ ಅನುಕೂಲಕರವಾಗಿದೆ ಎಂದು ಗೋಣಿಕೊಪ್ಪಲಿನ ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿ ಡಾ. ವೀರೇಂದ್ರಕುಮಾರ್ ತಿಳಿಸಿದ್ದಾರೆ. ಹಲವು ಭತ್ತದ ಗದ್ದೆಗಳಲ್ಲಿ ನೀರಿನ

ಉದಯವಾಹಿನಿ ಚಿತ್ರ

ಕೊರತೆ ಕಂಡುಬಂದಿದ್ದು, ಇತ್ತೀಚಿನ ಮಳೆಯಿಂದ ಸ್ವಲ್ಪಮಟ್ಟಿಗೆ ಪರಿಹಾರ ದೊರೆತಿದೆ. ದೀರ್ಘ ವಿರಾಮದ ಬಳಿಕ ಮಳೆಯಾಗಿರುವುದರಿಂದ ಭತ್ತದ ಬೆಳೆಯಲ್ಲಿ ಕೀಟ ಅಥವಾ ರೋಗಬಾಧೆ ಕಾಣಿಸಿಕೊಂಡಲ್ಲಿ ಸೂಕ್ತ ನಿಯಂತ್ರಣ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಕೃಷಿ ಇಲಾಖೆಯ ಸಹಾಯಕ ನಿರ್ದೇಶಕ ವೀರಣ್ಣ ಹೇಳಿದರು. ಭಾರಿ ಮಳೆಯಿಂದ ಮಡಿಕೇರಿ ತಾಲ್ಲೂಕಿನ ಸಂಪಾಜೆ ಹೋಬಳಿಯ ಪಿ.ಪೆರಾಜೆ ಗ್ರಾಮದ ಪದ್ಮಯ್ಯ ಚಾಮಕಜೆ ಅವರ ವಾಸದ ಮನೆ ಸಂಪೂರ್ಣ ಹಾನಿಗೊಳಗಾಗಿದೆ. ಕುಶಾಲನಗರ ತಾಲ್ಲೂಕಿನ ಸಿದ್ದಲಿಂಗಪುರ ಗ್ರಾಮದ ಯಶೋಧಾ ಅವರ ಮನೆಯ ಗೋಡೆಯ ಭಾಗವೂ ಹಾನಿಯಾಗಿದೆ.

ಪ್ರಮೋದಾ ದೇವಿ ಜೊತೆ ಮಾತುಕತೆಗೆ ನಾವು ಸಿದ್ಧವಿದ್ದೇವೆ

ಪ್ರಮೋದಾದೇವಿ ಒಡೆಯರ್ ಅವರು, 4 ಪುಟಗಳ ಪತ್ರಿಕಾ ಪ್ರಕಟಣೆ ಬಿಡುಗಡೆ ಮಾಡಿದ್ದು, ಜೊತೆಗೆ ಹಲವು ವಿಚಾರಗಳ ಬಗ್ಗೆ ಅಸಮಾಧಾನ ಹೊರಹಾಕಿದ್ದಾರೆ.

• ಉದಯವಾಹಿನಿ, ಮೈಸೂರು

1 ಪ್ರಮೋದಾ ದೇವಿ ಪತ್ರದ ಬಗ್ಗೆ
2 4 ಪುಟದ ಪತ್ರಿಕಾ ಪ್ರಕಟಣೆ
3 ಸಮನ್ವಯದ ಅಗತ್ಯ ಇದೆಯಾ

ಚಿನ್ನದ ಅಂಬಾರಿ ಸಂಪೂರ್ಣವಾಗಿ ಅರಮನೆಯ ಆಸ್ತಿ, ದಸರಾ ಸಂದರ್ಭದಲ್ಲಿ ನಾವು ಹಣಕೊಟ್ಟು ತೆಗೆದುಕೊಳ್ಳುತ್ತೇವೆ.

ದಸರಾ ಸಮಯದಲ್ಲಾದ ಸಮಸ್ಯೆಗಳ ಬಗ್ಗೆ ಸರ್ಕಾರಕ್ಕೆ ಪತ್ರ ಬರೆದರೆ, ರಾಜಮಾತೆ ಪ್ರಮೋದಾ ದೇವಿ ಒಡೆಯರ್ ಜೊತೆ ಮಾತುಕತೆಗೆ ಸರ್ಕಾರ ಸಿದ್ಧವಿದೆ ಎಂದು ಉಸ್ತುವಾರಿ ಸಚಿವ ಯತೀಂದ್ರ ಸಿದ್ದರಾಮಯ್ಯ ಹೇಳಿದ್ದಾರೆ.

ರಾಜಮಾತೆ ಪ್ರಮೋದಾ ದೇವಿ ಒಡೆಯರ್ ಈ ಬಾರಿಯ ದಸರಾ ಅವ್ಯವಸ್ಥೆ ಹಾಗೂ ಇತರೆ ಸಲಹೆ ಸಹಿತ 4 ಪುಟದ ಪತ್ರಿಕಾ ಪ್ರಕಟಣೆ ನೀಡಿರುವ ಬಗ್ಗೆ ಸಚಿವ ಯತೀಂದ್ರ ಸಿದ್ದರಾಮಯ್ಯ ಅರಮನೆಯ ಕೋಟೆ ಆಂಜನೇಯ ಸ್ವಾಮಿ ದೇವಾಲಯದ ಬಳಿ ಮಾಧ್ಯಮಗಳ ಜೊತೆ ಮಾತನಾಡಿದರು. ನಾವು ಮೊದಲಿನಿಂದಲೂ ಅವರ ಸಂಪರ್ಕದಲ್ಲಿದ್ದೇವೆ. ಅವರಿಗೆ ನಾವು ಅಧಿಕೃತ ಸ್ವಾಗತ ಕೋರಿದ್ದೇವೆ. ಅವರ ಸಹಾಯ ಕೋರಿ ಮನವಿ ಮಾಡಿದ್ವಿ. ಮೊದಲಿನಿಂದಲೂ ಅವರಿಗೆ ಎಲ್ಲಾ ಸಹಕಾರ ನೀಡಿದ್ದೇವೆ. ವಿಜಯದಶಮಿಯ ದಿನ ಜಟ್ಟಿಕಾಳಗದ ದಿನ ಗೊಂದಲ ಆಗಿದೆ. ಅದನ್ನು ಹೊರತುಪಡಿಸಿ ಯಾವುದೇ ತೊಂದರೆ ಆಗಿಲ್ಲ. ಆದರೂ ಅವರು ಪತ್ರ ಬರೆದಿದ್ದಾರೆ. ಸರ್ಕಾರಕ್ಕೆ ಅಥವಾ ಅಧಿಕಾರಿಗಳಿಗೆ ಪತ್ರ ಬರೆದಿದ್ರೆ ಉತ್ತರ ಕೊಡುತ್ತಿದ್ದರು. ಈಗ ಕೂಡ ಸರ್ಕಾರ ಅದಕ್ಕೆ ಸ್ಪಷ್ಟ ಉತ್ತರ ಕೊಡಲಿದೆ ಎಂದರು.

ಉದಯವಾಹಿನಿ ಚಿತ್ರ

ಏಳು ದಿನ ದಸರಾ ಬೇಡ, ಎರಡು ದಿನ ಅರಮನೆ ಮುಕ್ತವಾಗಿಡಿ ಎಂಬ ವಿಚಾರದ ಕುರಿತು ಸರ್ಕಾರದಿಂದ ಅಧಿಕೃತ ಉತ್ತರ ನೀಡಲಾಗುವುದು. ಈ ಕುರಿತು ಏನನ್ನೂ ಹೇಳಲು ಬಯಸುವುದಿಲ್ಲ. ಅವರ ಜೊತೆ ಮಾತನಾಡಲು ಸಿದ್ಧರಿದ್ದೇವೆ. ಅವರು ಕರೆದರೆ ಹೋಗಿ ಮಾತನಾಡುತ್ತೇವೆ. ಪ್ರತಿ ವರ್ಷ ಇಂತಹ ತೊಂದರೆ ಉಂಟಾಗುತ್ತವೆ. ಜನ ಸೇರುವಾಗ ಏನು ಮಾಡಲು ಆಗಲ್ಲ ಎಂದು ಹೇಳಿದರು.

ಅರಮನೆ ಸರ್ಕಾರದ್ದು: ಪ್ಯಾಲೇಸ್ ಬೋರ್ಡ್ ಸರ್ಕಾರದ್ದು, ಜಾಗ ಸರ್ಕಾರದ್ದು. ರಾಜಮನೆತನಕ್ಕೆ ಏನು ಗೌರವ ಕೊಡಬೇಕೋ, ಅವರನ್ನು ಹೇಗೆ ವಿಶ್ವಾಸಕ್ಕೆ ತೆಗೆದುಕೊಳ್ಳಬೇಕೋ ಎಲ್ಲವನ್ನೂ ಹಿಂದಿನಿಂದಲೂ ಮಾಡಿಕೊಂಡು ಬಂದಿದ್ದೇವೆ. ಈಗಲೂ ಕೂಡ ಮುಂದುವರಿಸಿಕೊಂಡು ಬಂದಿದ್ದೇವೆ. ಸಮಸ್ಯೆಗಳಿದ್ದರೆ ಸರ್ಕಾರಕ್ಕೆ ನೇರವಾಗಿ ಹೇಳಲಿ, ಖಂಡಿತವಾಗಿಯೂ ಅದನ್ನು ಬಗೆಹರಿಸಲು ನಾವು ಸಿದ್ಧರಿದ್ದೇವೆ ಎಂದು ತಿಳಿಸಿದರು.

ಸಮನ್ವಯದ ಅಗತ್ಯ ಇದೆಯಾ ಎಂಬ ಪ್ರಶ್ನೆಗೆ ಉತ್ತರಿಸಿ, ಖಂಡಿತವಾಗಿಯೂ ರಾಜಮನೆತನ-ಸರ್ಕಾರದ ನಡುವೆ ಸಮನ್ವಯತೆ ಅಗತ್ಯ. ಹೈಕೋರ್ಟ್‌ಗೆ ಹೋಗುತ್ತೇವೆ. ಅಂಬಾರಿ ಕೊಡಲ್ಲ ಎಂಬಂತಹ ಅವಕಾಶಕ್ಕೆ ಮುಂದಾದರೆ, ಹೋಗಲಿ. ಸರ್ಕಾರ ಅಗತ್ಯಕ್ರಮ ತೆಗೆದುಕೊಳ್ಳುತ್ತದೆ. ಆದರೆ ಅದರ ಅವಶ್ಯಕತೆಯೇ ಉದ್ಭವಿಸಲ್ಲ. ನಾವು ಮಾತುಕತೆ ಮೂಲಕ ಮುಂದುವರಿದಿದ್ದೇವೆ ಎಂದರು.

1971 ರಿಂದ ಸರ್ಕಾರ ಅಧಿಕೃತ ದಸರಾ ನಡೆಸುತ್ತಿದೆ. ಸ್ವತಂತ್ರ್ಯ ಬಂದ ಮೇಲೆ ನಾಡಹಬ್ಬ ಆಗಿದೆ. ಪ್ರಜಾಪ್ರಭುತ್ವದಲ್ಲಿ ಸರ್ಕಾರ ದಸರಾ ನಡೆಸುತ್ತಿದೆ. ಹೀಗಾಗಿ ನಾವು ಮುಂದುವರಿಸುತ್ತೇವೆ. ಪತ್ರದಲ್ಲಿ ಏನೇ ಬರೆದಿರಲಿ ಸಮಸ್ಯೆ ಬಗೆಹರಿಸಲು ನಾವು ಸಿದ್ಧ ಅವರಿಗೆ ಉಂಟಾಗಿರುವ ಸಮಸ್ಯೆಗಳ ಇತ್ಯರ್ಥಕ್ಕೆ ಮಾತುಕತೆ ಮೂಲಕ ನಾವು ಸಿದ್ಧರಿದ್ದೇವೆ ಎಂದು ಹೇಳಿದರು.

> **ಸರ್ಕಾರ 7 ದಿನ ದಸರಾ ಆಚರಿಸುವ ವಿಚಾರ ಕುರಿತು ಮಾತನಾಡಿ, ಅವರು ಹೇಳಿದಂತೆ ಮಾಡಲು ಸಾಧ್ಯವಿಲ್ಲ. ಈ ಕುರಿತು ಸರ್ಕಾರ ಕೂಡ ಒಪ್ಪುವುದಿಲ್ಲ, ಸರ್ಕಾರದ ತೀರ್ಮಾನದಂತೆ ದಸರಾ ಮಹೋತ್ಸವ ನಡೆಯಲಿದೆ. ಅಂತಿಮ ತೀರ್ಮಾನ ಸರ್ಕಾರ ತೆಗೆದುಕೊಳ್ಳಲಿದೆ ಎಂದರು.- ಸಚಿವ ಯತೀಂದ್ರ ಸಿದ್ದರಾಮಯ್ಯ**

> **ಜೆಟ್ಟಿಗಳ ವಿಚಾರದಲ್ಲಿ ಪೊಲೀಸರ ಹಸ್ತಕ್ಷೇಪ ಕುರಿತು ಮಾತನಾಡಿ, ಎಸಿಪಿ, ಡಿಸಿಪಿಗಳ ಹಸ್ತಕ್ಷೇಪಕ್ಕೆ ಪೊಲೀಸರ ವರ್ಷನ್ ಬೇರೆ ಇದೆ. ಪೊಲೀಸ್ ಕಮಿಷನರ್ ಅವರಿಂದ ಮಾಹಿತಿ ಪಡೆದುಕೊಳ್ಳುತ್ತೇವೆ. ಆ ಬಳಿಕ ಸೂಕ್ತ ಉತ್ತರ ಕೊಡುತ್ತೇವೆ ಎಂದು ಹೇಳಿದರು.-ಸಚಿವ ಯತೀಂದ್ರ ಸಿದ್ದರಾಮಯ್ಯ**

ಯಳಂದೂರು ಬನದ ಪರಿಸರದಲ್ಲಿ ತರಹೇವಾರಿ ಅಣಬೆಗಳು

• ಉದಯವಾಹಿನಿ, ಯಳಂದೂರು

ಉದಯವಾಹಿನಿ ಚಿತ್ರ

ಮಳೆ ಸುರಿದು ಭೂಮಿ ತೇವಗೊಂಡ ಬೆನ್ನಲ್ಲೇ ಹೊಲದಂಚು, ಕಾಡಿನ ನೆಲ, ಒಣಗಿದ ಎಲೆಗಳ ರಾಶಿ ಹಾಗೂ ಕೊಳೆಯುತ್ತಿರುವ ಮರದ ತುಂಡುಗಳಲ್ಲಿ ಅಣಬೆಗಳು ಆವಿರ್ಭವಿಸಿವೆ. ಪ್ರಕೃತಿಯ ಮಡಿಲಲ್ಲಿ ಮೂಡಿರುವ ಈ ಅಣಬೆಗಳ ವೈವಿಧ್ಯ ಪರಿಸರಪ್ರಿಯರ ಹಾಗೂ ಜನಸಾಮಾನ್ಯರ ಗಮನ ಸೆಳೆಯುತ್ತಿದೆ. ತಾಲ್ಲೂಕಿನ ಬನದ ಪರಿಸರ ಹಾಗೂ ಮತ್ತು ಗ್ರಾಮೀಣ ಭಾಗಗಳ ಸುತ್ತಮುತ್ತಲಿನ ಹೊಲಗದ್ದೆಗಳಲ್ಲಿ ಮಳೆಯ ನಂತರ ಬಿಳಿ ಅಣಬೆಗಳು ಗೊಂಚಲು ಗೊಂಚಲಾಗಿ ಅರಳಿವೆ.

ಕೊಳೆತ ಮರದ ತುಂಡುಗಳ ಮೇಲೆ ಗುಂಪಾಗಿ ಬೆಳೆದಿರುವ ಅಣಬೆಗಳು ಪುಟ್ಟ ಛತ್ರಿಗಳಂತೆ ಇಣುಕಿದ್ದು ಗಮನ ಸೆಳೆಯುತ್ತಿವೆ. ಅಣಬೆಗಳು ಒಂದೇ ರೂಪದಲ್ಲಿ ಕಾಣಿಸಿಕೊಳ್ಳುವುದಿಲ್ಲ. ಕೆಲವು ಬಿಳಿ ಬಣ್ಣದಲ್ಲಿದ್ದರೆ, ಇನ್ನು ಕೆಲವು ಕಂದು, ಹಳದಿ, ಕೆಂಪು, ಬೂದು ಬಣ್ಣದಲ್ಲಿ ಕಾಣಸಿಗುತ್ತಿವೆ. ಕೆಲವು ಛತ್ರಿಯಾಕಾರದಲ್ಲಿದ್ದರೆ, ಮತ್ತೆ ಕೆಲವು ಮರದ ಕಾಂಡಕ್ಕೆ ಅಂಟಿಕೊಂಡಂತೆ ಅಥವಾ ಗೊಂಚಲು ಗೊಂಚಲಾಗಿ ಬೆಳೆಯುತ್ತವೆ. ಮಳೆಗಾಲದಲ್ಲಿ ತೇವಾಂಶ ಹೆಚ್ಚಾಗುವುದರಿಂದ ಅಣಬೆಗಳ ಬೆಳವಣಿಗೆಗೆ ಅನುಕೂಲಕರ ವಾತಾವರಣ ನಿರ್ಮಾಣವಾಗುತ್ತದೆ. ಅಣಬೆಗಳು ಅಲ್ಪಾವಧಿಗೆ ಕಾಣಿಸಿಕೊಂಡು ಅಷ್ಟೇ ಬೇಗ ಅಳಿದುಹೋಗುತ್ತವೆ ಎನ್ನುತ್ತಾರೆ ಗ್ರಾಮೀಣರು.

ಅಣಬೆಗಳು ಶಿಲೀಂಧ್ರಗಳ ಗುಂಪಿಗೆ ಸೇರಿದ್ದು ಮರ, ಒಣಗಿದ ಎಲೆಯ ನಡುವೆ ಬೆಳೆಯುತ್ತವೆ. ಸಾವಯವ ಪದಾರ್ಥಗಳನ್ನು ವಿಘಟಿಸುವ ಅಣಬೆಗಳು ನೆಲದ ಪೋಷಕಾಂಶಗಳು ಮತ್ತೆ ಮಣ್ಣು ಸೇರುವಂತೆ ಮಾಡುತ್ತವೆ. ಈ ಮೂಲಕ ಅರಣ್ಯ ಮತ್ತು ಕೃಷಿ ಪರಿಸರ ವ್ಯವಸ್ಥೆಯ ನಿಸರ್ಗ ಚಕ್ರದಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಕೆಲವು ಅಣಬೆಗಳು ಸಸ್ಯಗಳ ಬೇರುಗಳೊಂದಿಗೆ ಸಹಜೀವನ ನಡೆಸುತ್ತವೆ. ಸಸ್ಯಗಳಿಗೆ ಪೋಷಕಾಂಶಗಳನ್ನು ಹೀರಿಕೊಳ್ಳಲು ನೆರವು ನೀಡತ್ತವೆ. ಅಣಬೆಗಳು ಪರಿಸರದ ಆರೋಗ್ಯಕ್ಕೂ ಕೊಡುಗೆ ನೀಡುತ್ತವೆ ಎನ್ನುತ್ತಾರೆ ಏಟ್ರಿ ವಿಜ್ಞಾನಿ ಸಿದ್ದಪ್ಪಶೆಟ್ಟಿ,

ಪಾವಗಡ-ತುಮಕೂರು ಹೆದ್ದಾರಿ; ಎರಡು ದಿನದಲ್ಲಿ ಇಬ್ಬರ ಸಾವು

• ಉದಯವಾಹಿನಿ, ಪಾವಗಡ

ಪಟ್ಟಣದ ಶನೈಶ್ಚರ ವೃತ್ತದಿಂದ ಆಂಧ್ರದ ಗಡಿವರೆಗೆ ಸಾಗುವ ರಾಜ್ಯ ಹೆದ್ದಾರಿ ವಾಹನ ಸವಾರರಿಗೆ ಸುರಕ್ಷಿತ ರಸ್ತೆಯಾಗುವ ಬದಲು ಅಪಘಾತ ವಲಯವಾಗಿ ಪರಿಣಮಿಸುತ್ತಿದೆ.

ಕಳೆದ ಮೂರು ದಿನಗಳಲ್ಲಿ ಸಂಭವಿಸಿದ ಎರಡು ಪ್ರತ್ಯೇಕ ಅಪಘಾತಗಳಲ್ಲಿ ಇಬ್ಬರು ಮೃತಪಟ್ಟಿದ್ದು, ನಾಲ್ಕಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ. ಶನೈಶ್ಚರ ವೃತ್ತದಿಂದ ಕಣಿವೆ ಲಕ್ಷ್ಮೀನರಸಿಂಹಸ್ವಾಮಿ ದೇವಾಲಯದವರೆಗೆ ರಸ್ತೆ ವಿಭಜಕ ನಿರ್ಮಿಸಲಾಗಿದೆ. ಆದರೆ ಈ ವಿಭಜಕದ ಉದ್ದೇಶವೇ ಇಲ್ಲಿ ಈಡೇರದಂತಾಗಿದೆ.

ಕೆಲವರು ಅಲ್ಲಲ್ಲಿ ವಿಭಜಕಗಳನ್ನು ತೆರವುಗೊಳಿಸಿರುವುದು ಅಪಘಾತಗಳಿಗೆ ಆಹ್ವಾನ ನೀಡಿದಂತಾಗಿದೆ. ತುಮಕೂರು ರಸ್ತೆಯ ಪಟ್ಟಣ ವ್ಯಾಪ್ತಿಯಲ್ಲಿರುವ ಎರಡು ಪೆಟ್ರೋಲ್ ಬಂಕ್‌ಗಳಿಗೆ ವಾಹನಗಳು ಪ್ರವೇಶಿಸಲು ರಸ್ತೆ ವಿಭಜಕ ತೆರವುಗೊಳಿಸಲಾಗಿದೆ. ಎಂಎಜಿ ವೃತ್ತದಿಂದ ಕಣಿವೆವರೆಗೆ ನಾಲ್ಕಕ್ಕೂ ಹೆಚ್ಚು ಕಡೆಗಳಲ್ಲಿ ವಿಭಜಕ ತೆರವುಗೊಳಿಸಿ ವಾಹನಗಳು ಎಡಬದಿಯಿಂದ ಬಲಬದಿಗೆ ದಾಟಲು ಅವಕಾಶ ಕಲ್ಪಿಸಲಾಗಿದೆ.

ತುಮಕೂರು ಕಡೆಯಿಂದ ವೇಗವಾಗಿ ಬರುವ ಬೃಹತ್ ವಾಹನಗಳ ಚಾಲಕರಿಗೆ ರಸ್ತೆ ವಿಭಜಕದ ತೆರವು ಸ್ಥಳಗಳಲ್ಲಿ ದಿಢೀರನೆ ಅಡ್ಡಲಾಗಿ ತಿರುಗುವ ದ್ವಿಚಕ್ರ ವಾಹನ, ಕಾರುಗಳು ಕಾಣಿಸುವುದಿಲ್ಲ. ಇದರಿಂದ ನಿಯಂತ್ರಣ ತಪ್ಪಿ ಅಪಘಾತಗಳು ಸಂಭವಿಸುತ್ತಿವೆ. ಇಂತಹ ಅಪಾಯಕಾರಿ ಸ್ಥಳಗಳಲ್ಲಿ ವೇಗ ನಿಯಂತ್ರಕಗಳನ್ನೂ ಅಳವಡಿಸಿಲ್ಲ.

ರಸ್ತೆ ವಿಭಜಕಗಳ ಬಳಿ ಗಿಡಗಂಟಿಗಳು ಬೆಳೆದು ಪೊದೆಗಳಂತಾಗಿವೆ.

ಸಾರ್ವಜನಿಕರ ದೂರು

ಬಾಗಿರುವ ಕಬ್ಬಿಣದ ಸರಳುಗಳಿಗೆ ಡಿಕ್ಕಿ ಹೊಡೆದು ಗಾಯಗೊಂಡಿರುವ ಘಟನೆಗಳೂ ನಡೆದಿವೆ. ಹಾನಿಗೊಳಗಾದ ವಿಭಜಕಗಳನ್ನು ದುರಸ್ತಿಪಡಿಸುವ ಅಥವಾ ಬದಲಾಯಿಸುವ ಕಾರ್ಯವೂ ಸಮರ್ಪಕವಾಗಿ ನಡೆಯುತ್ತಿಲ್ಲ ಎನ್ನುವುದು ಸಾರ್ವಜನಿಕರ ದೂರು.

ರಸ್ತೆ ಬದಿಯಲ್ಲಿರುವ ಬೇಲಿ ಗಿಡಗಳು ಸೂಚನಾ ಫಲಕಗಳನ್ನೇ ಆವರಿಸಿಕೊಂಡಿವೆ. ವೇಗಮಿತಿ, ಅಪಾಯಕಾರಿ ತಿರುವು ಹಾಗೂ ಮುನ್ನೆಚ್ಚರಿಕೆ ಕುರಿತು ಅಳವಡಿಸಿರುವ ಫಲಕಗಳು ವಾಹನ ಚಾಲಕರ ಕಣ್ಣಿಗೆ ಬೀಳುತ್ತಿಲ್ಲ. ರಾತ್ರಿ ವೇಳೆ ಸಂಚರಿಸುವ ವಾಹನ ಸವಾರರಿಗೆ ಅಪಾಯದ ಮುನ್ಸೂಚನೆಯೇ ಸಿಗದಂತಾಗಿದೆ. ಅಪಘಾತಗಳಿಂದ ಹಾನಿಗೊಳಗಾದ ಕಬ್ಬಿಣದ ರಸ್ತೆ ವಿಭಜಕಗಳು ಅಲ್ಲಲ್ಲಿ ರಸ್ತೆಯತ್ತ ಬಾಗಿವೆ. ಇವು ವಾಹನ ಸವಾರರಿಗೆ ಅಪಾಯವಾಗಿ ಪರಿಣಮಿಸಿವೆ.

ಉದಯವಾಹಿನಿ ಚಿತ್ರ

ಹಳೆ ಬಸ್ ನಿಲ್ದಾಣದಲ್ಲಿ ಅತಿಕ್ರಮಣ ತೆರವು ಕಾರ್ಯಾಚರಣೆ

• ಉದಯವಾಹಿನಿ, ಕೋಲಾರ

ನಗರದ ಹೃದಯ ಭಾಗದಲ್ಲಿರುವ ಹಳೆ ಬಸ್ ನಿಲ್ದಾಣದಲ್ಲಿ ಕೊನೆಗೂ ಅತಿಕ್ರಮಣ ತೆರವು ಕಾರ್ಯಾಚರಣೆ ನಡೆದಿದ್ದು, ಪಾರಂಪರಿಕಾ ಗಡಿಯಾರ ಗೋಪುರ ಸುತ್ತಲಿನ ಮಳಿಗೆಗಳನ್ನು ತೆರವುಗೊಳಿಸಲಾಗಿದೆ.

ಈ ಮೂಲಕ ಹಳೆ ಬಸ್ ನಿಲ್ದಾಣಕ್ಕೆ ಈಗ ಮೊದಲಿನ ನೋಟ ಲಭಿಸಿದ್ದು, ವಿಶಾಲವಾಗಿ ಕಾಣಿಸುತ್ತಿದೆ. ಈವರೆಗೆ ಹೂವು ಹಾಗೂ ಹಣ್ಣಿನ ಮಳಿಗೆಗಳು ಆವರಿಸಿಕೊಂಡ ಕಾರಣ ಒಳಗೆ ಪ್ರಯಾಣಿಕರ ತಂಗುದಾಣ ಇತ್ತು ಎಂಬುದೇ ಹಲವರಿಗೆ ಗೊತ್ತಿರಲಿಲ್ಲ.

ಹೀಗಾಗಿ, ನಗರದ ಜನ ಹಾಗೂ ಹೊರಗಿನಿಂದ ಬಂದವರು ಅಚ್ಚರಿಯಿಂದ ನೋಡುತ್ತಿದ್ದರು. ಅಕ್ರಮವಾಗಿ ನಿರ್ಮಿಸಿಕೊಂಡಿದ್ದ ಮಳಿಗೆಗಳ ತೆರವಿಗೆ ಈ ಹಿಂದೆ ನಗರಸಭೆ ಅಧಿಕಾರಿಗಳು ಹಲವಾರು ಬಾರಿ ಪ್ರಯತ್ನಿಸಿದ್ದರೂ ಸಾಧ್ಯವಾಗಿರಲಿಲ್ಲ. ಆದರೆ, ಈ ಬಾರಿ ಜಿಲ್ಲಾಧಿಕಾರಿ ಎಂ.ಆರ್.ರವಿಕುಮಾರ್ ನಿರ್ದೇಶನದ ಮೇರೆಗೆ ಕೋಲಾರ ನಗರಸಭೆ ಆಯುಕ್ತ ವೆಂಕಟೇಶ್ ನಾಗನೂರ ಕೈಗೊಂಡ ದಿಟ್ಟ ನಿರ್ಧಾರ ತೆರವು ಕಾರ್ಯಾಚರಣೆ ಸುಗಮವಾಗಿ ನಡೆಯಲು ಕಾರಣವಾಗಿದೆ. ಕೆಲ ದಿನಗಳ ಹಿಂದೆಯಷ್ಟೇ ನಗರದ ಪ್ರಮುಖ ರಸ್ತೆಗಳಲ್ಲಿ ಒತ್ತುವರಿಯಾಗಿದ್ದ ಪಾದಚಾರಿ ಮಾರ್ಗ, ರಸ್ತೆ, ಚರಂಡಿಯ ತೆರವು ಕಾರ್ಯಾಚರಣೆ ನಡೆಸಿದ್ದರು.

ನಗರ ಸಾರಿಗೆ, ಖಾಸಗಿ ಬಸ್ಸುಗಳ ನಿಲ್ದಾಣವಾಗಬೇಕಿದ್ದ ಪ್ರದೇಶ ಹೂವು, ಹಣ್ಣಿನ ಮಾರುಕಟ್ಟೆಯಾಗಿ ಪರಿವರ್ತಿತಗೊಂಡಿತ್ತು. ಕೆಲವರು ಜೋಪಡಿ ರೀತಿ ತಾತ್ಕಾಲಿಕ ವ್ಯವಸ್ಥೆ ಮಾಡಿಕೊಂಡು ದಶಕಗಳಿಂದ ವ್ಯಾಪಾರ ನಡೆಸುತ್ತಿದ್ದರು.

ಪಕ್ಕದಲ್ಲೇ ಇರುವ ನೇತಾಜಿ ವಾಣಿಜ್ಯ ಸಂಕೀರ್ಣದಲ್ಲಿ ನಗರಸಭೆಯಿಂದ ಹರಾಜಿನಲ್ಲಿ ಮಳಿಗೆ ಪಡೆದು ಹೂವು, ಹಣ್ಣಿನ ವಹಿವಾಟು ನಡೆಸುತ್ತಿದ್ದಾರೆ.

ಮಹಿಳಾ ಬಂಧನ ಕೇಂದ್ರಕ್ಕೆ ಭದ್ರತೆ ಕೊರತೆ

• ಉದಯವಾಹಿನಿ, ತುಮಕೂರು

ನಗರ ಹೊರವಲಯದ ದಿಟ್ಟೂರು ಬಳಿಯ ವಿದೇಶಿ ಮಹಿಳಾ ವಲಸಿಗರ ಬಂಧನ ಕೇಂದ್ರದಿಂದ ಈಚೆಗೆ ಮತ್ತೊಬ್ಬರು ಪರಾರಿಯಾಗಿದ್ದು, ಭದ್ರತಾ ವ್ಯವಸ್ಥೆ ಬಗ್ಗೆ ಚರ್ಚೆಗಳನ್ನು ಹುಟ್ಟುಹಾಕಿದೆ.

2024ರ ಆ. 11ರಂದು ಬಂಧನ ಕೇಂದ್ರದ ಚಾವಣಿ ಹಾರಿ ಬಾಂಗ್ಲಾದೇಶದ ಇಬ್ಬರು ಓಡಿ ಹೋಗಿದ್ದರು. ರೇಷ್ಮಾ (45), ಲಿಜಾ ಶೈಕಾ (25) ಎಂಬುವರು ಪರಾರಿಯಾಗಿದ್ದರು. ಇದು ನಡೆದ ಮೂರು ತಿಂಗಳ ನಂತರ ನ. 28ರಂದು ಉಗಾಂಡ ರಾಷ್ಟ್ರದ ಜೆನಿಫರ್ (26) ತಪ್ಪಿಸಿಕೊಂಡಿದ್ದರು.

ಇದೇ ಅ. 20ರಂದು ನೈಜೀರಿಯಾದ ಅದೇವೋಲೆ ಅಡೆತ್ತು ಅನು ಅಲಿಯಾಸ್ ರೆಜಿನಾ ಜರಾ ಅಲಿಯಾಸ್ ಆಯಿಷಾ (33) ಎಂಬುವರು ಕಟ್ಟಡದ ಕಿಟಕಿಯ ಕೆಳ ಭಾಗದ ಕಬ್ಬಿಣದ ಸರಳು ಕತ್ತರಿಸಿ ಹೊರಗಡೆ ಜಿಗಿದಿದ್ದಾರೆ. 2023ರ ಜುಲೈ ತಿಂಗಳಲ್ಲಿ ವಿದೇಶಿ ಮಹಿಳೆಯರು ಕೇಂದ್ರದ ಸಿಬ್ಬಂದಿ ಮತ್ತು ಮಹಿಳಾ ಪೊಲೀಸ್ ಅಧಿಕಾರಿಗಳ ಮೇಲೆ ಹಲ್ಲೆ ನಡೆಸಿದ್ದರು.

ಗಾಯಗೊಂಡಿದ್ದ ಪೊಲೀಸರು ಚಿಕಿತ್ಸೆ ನಂತರ ಚೇತರಿಸಿಕೊಂಡಿದ್ದರು. ಈ ಹಿಂದೆ ಕೇಂದ್ರದಿಂದ ಪರಾರಿಯಾಗಿದ್ದ ಮೂವರನ್ನು ಪತ್ತೆ ಹಚ್ಚಿ ಬಂಧಿಸಲಾಗಿದೆ. ಈಚೆಗೆ ತಪ್ಪಿಸಿಕೊಂಡ ನೈಜೀರಿಯಾ ಮಹಿಳೆಯ ಪತ್ತೆಗೆ ಪೊಲೀಸರು ಕಾರ್ಯಾಚರಣೆ ಕೈಗೊಂಡಿದ್ದಾರೆ. ಇಂತಹ ಘಟನೆಗಳು ಸಾಲು ಸಾಲಾಗಿ ನಡೆಯುತ್ತಿವೆ. ಕೇಂದ್ರದ ಬಳಿ ಯಾವುದೇ ಸುಧಾರಣೆ ಆಗುತ್ತಿಲ್ಲ. ಅಧಿಕಾರಿಗಳು ಇಚ್ಛಾಶಕ್ತಿ ತೋರುತ್ತಿಲ್ಲ. ಅಗತ್ಯ ಮುಂಜಾಗ್ರತಾ ಕ್ರಮ ಕೈಗೊಳ್ಳುತ್ತಿಲ್ಲ' ಎಂಬ ಆರೋಪಗಳು ವ್ಯಾಪಕವಾಗಿವೆ.

ಹಲವು ವರ್ಷಗಳಿಂದ ಕೇಂದ್ರ ನಡೆಯುತ್ತಿದೆ. ಅಪರಾಧ ಪ್ರಕರಣದಲ್ಲಿ ಭಾಗಿಯಾದವರು, ವೀಸಾ, ಪಾಸ್‌ಪೋರ್ಟ್ ಅವಧಿ ಮುಗಿದ ನಂತರವೂ ರಾಜ್ಯದಲ್ಲಿಯೇ ನೆಲಸಿದ ವಿದೇಶಿ ಮಹಿಳೆಯರನ್ನು ಪತ್ತೆ ಹಚ್ಚಿ ಕೇಂದ್ರಕ್ಕೆ ತರಲಾಗುತ್ತಿದೆ.

ತಮ್ಮ ಜಾತಿಗೆ ಮತ ಹಾಕುತ್ತೇವೆ ಎನ್ನುತ್ತಾರೆ: ಮಾಜಿ ಸಿಎಂ ಸಿದ್ದರಾಮಯ್ಯ

ಹಿಂದೂ ಧರ್ಮ ಸುಧಾರಣೆ ಆಗದಿದ್ದರಿಂದ ಅಂಬೇಡ್ಕರ್ ಅವರು ಬೌದ್ಧ ಧರ್ಮಕ್ಕೆ ಸೇರಿದರು. ಬಹಳ ಪ್ರಯುತ್ನಿಸಿದರೂ ಹೋಗಲಾಡಿಸಲಾಗಲಿಲ್ಲ

• ಉದಯವಾಹಿನಿ, ಚಾಮರಾಜನಗರ

ಅಂತಾರಾಷ್ಟ್ರೀಯ ಬೌದ್ಧ ಸಮ್ಮೇಳನ ನಡೆದಿರುವುದು ಸಂತಸದ ವಿಚಾರ. ಜನರಿಗೆ ಬೌದ್ಧ ಧರ್ಮವನ್ನು ವಿಚಾರಗಳ ಮೂಲಕ ತಿಳಿಸಲಾಗಿದೆ. ಇವತ್ತಿಗೂ ಕೂಡ ಬುದ್ಧ, ಬಸವ, ಅಂಬೇಡ್ಕರ್ ಪ್ರಸ್ತುತ ಎಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿಪ್ರಾಯಪಟ್ಟರು.

ಎರಡು ದಿನಗಳವರೆಗೆ ಚಾಮರಾಜನಗರದಲ್ಲಿ ನಡೆದ ಅಂತಾರಾಷ್ಟ್ರೀಯ ಬೌದ್ಧ ಸಮ್ಮೇಳನವು ಭಾನುವಾರ ಸಂಜೆ ಸಂಪನ್ನಗೊಂಡಿತು. ಸಮಾರೋಪ ಸಮಾರಂಭದಲ್ಲಿ ಪಾಲ್ಗೊಂಡು ಮಾತನಾಡಿದ ಸಿದ್ದರಾಮಯ್ಯ, ಮಾನವೀಯತೆ, ಸಾಮಾಜಿಕ ನ್ಯಾಯ, ದ್ವೇಷ ಇರಬಾರದು, ಪ್ರೀತಿ ಇರಬೇಕೆಂಬುದು ಎಲ್ಲಾ ದಾರ್ಶನಿಕರ ಮಾತಾಗಿದೆ. ಹಿಂದೂ ಧರ್ಮದಲ್ಲಿರುವ ತಾರತಮ್ಯ ಹೋಗಲಾಡಿಸಲು ಹಲವರು ಪ್ರಯತ್ನ ಮಾಡಿದ್ದಾರೆ. ಜೈನ, ಬೌದ್ಧ ಧರ್ಮಗಳೆರಡೂ ಮನುಷ್ಯರಿಗೆ ದುಃಖ, ನೋವು ಹೋಗಲಾಡಿಸುವ ಬಗ್ಗೆ ತಿಳಿಸಿವೆ. ಸಮಾಜದಲ್ಲಿ ದುಃಖವು ಇದೆ, ನೋವೂ ಇದೆ. ಇದರ ಪರಿಹಾರಕ್ಕೆ ಬುದ್ಧನೇ ಪರಿಹಾರ ಎಂದು ತಿಳಿಸಿದರು.

ಶಿಕ್ಷಣದಿಂದ ವಂಚಿತರಾದ ಜನರು ದಡ್ಡರಲ್ಲ, ಆದರೆ ಅವರಿಗೆ ಅವಕಾಶ ಸಿಗಲಿಲ್ಲ. ಶಿಕ್ಷಣ, ಸಂಘಟನೆ, ಹೋರಾಟದಿಂದ ಮಾತ್ರ ಸಮ ಸಮಾಜ ನಿರ್ಮಾಣ ಸಾಧ್ಯ. ಆರ್ಥಿಕ, ಸಾಮಾಜಿಕ, ರಾಜಕೀಯವಾಗಿ ಶಕ್ತಿ ಬರದಿದ್ದರೆ ಸಮ ಸಮಾಜ ಅಸಾಧ್ಯ. ಆದರೆ, ತಾನು 13 ಚುನಾವಣೆ ಎದುರಿಸಿದ್ದು, ಚುನಾವಣೆಯಲ್ಲಿ ಶಿಕ್ಷಿತರೇ ಹೆಚ್ಚು ಜಾತಿ ಮಾಡುವುದು. 80% ಶಿಕ್ಷಿತರು ಇದ್ದರೂ ಕೂಡ ಅವರು ತಮ್ಮ ತಮ್ಮ ಜಾತಿಗೇ ಮತ ಹಾಕುತ್ತೇವೆ ಎನ್ನುತ್ತಾರೆ. ಶಿಕ್ಷಣ ಪಡೆದವರೂ ಕೂಡ ವೈಜ್ಞಾನಿಕವಾಗಿ, ವೈಚಾರಿಕವಾಗಿ ಯೋಚಿಸುತ್ತಿಲ್ಲ. ಶಿಕ್ಷಣ ವೈಜ್ಞಾನಿಕ, ವೈಚಾರಿಕವಾಗಿರಬೇಕು, ಅದಾಗದಿದ್ದರೆ ವ್ಯವಸ್ಥೆ ಬದಲಾಗಲ್ಲ ಎಂದು ಅಭಿಪ್ರಾಯಪಟ್ಟರು.



ಉದಯವಾಹಿನಿ ಚಿತ್ರ

> **ಅತಿಯಾದ ಆಸೆಯೇ ದುಃಖಕ್ಕೆ ಕಾರಣ ಎಂದು ಬುದ್ಧ ಹೇಳಿದ್ದಾರೆ. ಹಿಂದೂ ಧರ್ಮ ಸುಧಾರಣೆ ಆಗದಿದ್ದರಿಂದ ಅಂಬೇಡ್ಕರ್ ಬೌದ್ಧ ಧರ್ಮಕ್ಕೆ ಸೇರಿದರು. ಬಹಳ ಪ್ರಯುತ್ನಿಸಿದರೂ ಸಮಾಜದ ಅಸಮಾನತೆ ಹೋಗಲಾಡಿಸಲಾಗಲಿಲ್ಲ, ಸಮಾನತೆಯ ಸಮಾಜ ಬರಬೇಕಾದರೆ ತಾರತಮ್ಯ ಹೋಗಬೇಕು ಎಂದು ಹೇಳಿದರು.-ಮಾಜಿ ಸಿಎಂ ಸಿದ್ದರಾಮಯ್ಯ**

> **ಬೌದ್ಧ ಧರ್ಮ ಸ್ವೀಕರಿಸಿದ ಬಳಿಕ ಡಾ.ಬಿ.ಆರ್.ಅಂಬೇಡ್ಕರ್ 20 ವರ್ಷ ಹೆಚ್ಚು ಬದುಕಿದ್ದರೆ ದೇಶದಲ್ಲಿ ಅರ್ಧದಷ್ಟು ಬೌದ್ಧರು ಇರುತ್ತಿದ್ದರು. ಹಿಂದು ಧರ್ಮ ದಲಿತರಲ್ಲಿ ಕ್ಷೀಣಿಸುತ್ತಿದೆ. ಬೌದ್ಧ ಧರ್ಮ ಪ್ರಜ್ಞೆ ಬರುತ್ತಿದ್ದು, ಅಂಬೇಡ್ಕರ್ ನಮ್ಮ ಆಧಾತ್ಮಿಕ ನಾಯಕ ಎಂದು ತಿಳಿಸಿದರು.- ಮಾಜಿ ಸಿಎಂ ಸಿದ್ದರಾಮಯ್ಯ**

ಬುದ್ಧ, ಬಸವಣ್ಣ ಮೌಢ್ಯ ಹಾಗೂ ಕಂದಾಚಾರದಲ್ಲಿ ನಂಬಿಕೆ ಇಟ್ಟಿರಲಿಲ್ಲ. ಎಲ್ಲಾ ಸರ್ಕಾರಗಳು ಸಂವಿಧಾನ ಬದ್ಧವಾಗಿ ನಡೆಯಬೇಕು. ಸಂವಿಧಾನ ಜಾರಿಯಾಗಿ 7 ದಶಕ ಕಳೆದರೂ ಸಮಾನತೆ ಬಂದಿಲ್ಲ, ಸಮಾನ ಅವಕಾಶ ಸಿಕ್ಕಿಲ್ಲ. ನನ್ನ ಅಧಿಕಾರವಧಿಯಲ್ಲಿ ಅಸಮಾನತೆ ನಿವಾರಣೆ ಮಾಡುವ ಕೆಲಸವನ್ನು ಪ್ರಾಮಾಣಿಕವಾಗಿ ಮಾಡಿರುವೆ ಎಂದರು.

ಬೌದ್ಧ ಬಿಕ್ಕುಗಳಿಗೆ ಮಾಸಾಶನ ಸಿಗಲಿ: ವಿಧಾನ ಪರಿಷತ್ ಸದಸ್ಯ ಶಿವಕುಮಾರ್ ಮಾತನಾಡಿ, ಕಳೆದ ಬಜೆಟ್‌ನಲ್ಲಿ ಸಿದ್ದರಾಮಯ್ಯ ರಾಜ್ಯದ ಬೌದ್ಧ ಬಿಕ್ಕುಗಳಿಗೆ ಮಾಸಾಶನ ಜಾರಿ ಮಾಡಿದ್ದರು. ಇದು ದಕ್ಷಿಣ ಭಾರತದ ರಾಜ್ಯಗಳಲ್ಲೂ ಆಗಬೇಕು. ಈ ಬಗ್ಗೆ, ತಮಿಳುನಾಡು, ಕೇರಳ, ತೆಲಂಗಾಣ, ಆಂಧ್ರಪ್ರದೇಶದ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಲಾಗುವುದು ಎಂದರು. ದೇಶದಲ್ಲಿ ಮೀಸಲಾತಿ ಪ್ರಮಾಣವನ್ನು 50%ರಿಂದ 70%ಗೆ ಹೆಚ್ಚಿಸಬೇಕು. ಇದರಲ್ಲಿ, ದಲಿತರಿಗೆ 30% ಮೀಸಲಾತಿ ನೀಡಬೇಕು. ನನ್ನ 2 ಕೋಟಿ ರೂ. ಅನುದಾನದಲ್ಲಿ 70 ಲಕ್ಷ ರೂ.ಗಳನ್ನು ಬುದ್ಧ ವಿಹಾರಗಳಿಗೆ ನೀಡಿದ್ದೇನೆ. ದೇವಾಲಯ, ಸ್ಮಶಾನಗಳಿಗೆ ಅನುದಾನ ಕೊಡದಿರಲು ನಿರ್ಧರಿಸಿದ್ದು, ಲೈಬ್ರರಿ, ಬುದ್ಧ ವಿಹಾರಕ್ಕೆ ಮಾತ್ರ ಕೊಡುತ್ತೇನೆ ಎಂದರು.

ಮುಂದಿನ ಸಮ್ಮೇಳನ ಬೆಂಗಳೂರು ದಕ್ಷಿಣಕ್ಕೆ: ಬೆಂಗಳೂರು ದಕ್ಷಿಣ ಜಿಲ್ಲೆಯಲ್ಲಿ ಮುಂದಿನ ಬೌದ್ಧ ಸಮ್ಮೇಳನ ನಡೆಸಲಾಗುವುದು ಎಂದು ಮಧ್ಯಾಹ್ನದ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದ್ದರಿಂದ, ಸಮ್ಮೇಳನದ ಧಮ್ಮ ಜ್ಯೋತಿಯನ್ನು ಬೆಂಗಳೂರು ದಕ್ಷಿಣಕ್ಕೆ ಹಸ್ತಾಂತರಿಸಲಾಯಿತು.

ಮಿನಿ ನ್ಯೂಸ್

ಬೌದ್ಧ ವಿಶ್ವವಿದ್ಯಾಲಯ ಸ್ಥಾಪನೆ ಕುರಿತು ಸಚಿವ ಸಂಪುಟದಲ್ಲಿ ಚರ್ಚಿಸಿ ತೀರ್ಮಾನ

ಉದಯವಾಹಿನಿ ಚಿತ್ರ

• ಉದಯವಾಹಿನಿ, ಚಾಮರಾಜನಗರ

ಬೌದ್ಧ ವಿಶ್ವವಿದ್ಯಾಲಯ ಸ್ಥಾಪನೆ ಕುರಿತು ಸಚಿವ ಸಂಪುಟದಲ್ಲಿ ಚರ್ಚೆ ಮಾಡಿ, ತೀರ್ಮಾನ ತೆಗೆದುಕೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಹೇಳಿದ್ದಾರೆ. ಅಂತಾರಾಷ್ಟ್ರೀಯ ಬೌದ್ಧ ಮಹಾಸಮ್ಮೇಳನದಲ್ಲಿ ಪಾಲ್ಗೊಂಡು ಮಾತನಾಡಿದ ಮುಖ್ಯಮಂತ್ರಿ, ಬುದ್ಧ, ಬಸವ, ಅಂಬೇಡ್ಕರ್ ತತ್ವಗಳೇ ಸರ್ಕಾರಕ್ಕೆ ಮಾರ್ಗದರ್ಶನ. ಮುಂದಿನ ಅಂತಾರಾಷ್ಟ್ರೀಯ ಬೌದ್ಧ ಸಮ್ಮೇಳನವನ್ನು ಬೆಂಗಳೂರು ದಕ್ಷಿಣ ಜಿಲ್ಲೆಯಲ್ಲಿ ಆಯೋಜಿಸಲಾಗುವುದು.

ಬೆಳಗಾವಿಯಲ್ಲಿಯೂ ಈ ಸಮ್ಮೇಳನ ನಡೆಸುವ ಬಗ್ಗೆ ಸಚಿವರಾದ ಸತೀಶ್ ಜಾರಕಿಹೊಳಿ ಅವರು ಹೇಳಿದ್ದಾರೆ. ವರ್ಷಕ್ಕೆ ಎರಡು ಸಮ್ಮೇಳನಗಳನ್ನು ನಡೆಸುವುದಕ್ಕೆ ಅಭ್ಯಂತರವಿಲ್ಲ. ಪ್ರತಿಯೊಬ್ಬರ ನಂಬಿಕೆ ಮತ್ತು ಧಾರ್ಮಿಕ ಆಚರಣೆಗಳಿಗೆ ಗೌರವ ನೀಡುವುದು ಮುಖ್ಯ ಎಂದರು. ನಮ್ಮಗೆ ಜಾತಿ ಕೇಳುವ ಸಮಾಜ ಬೇಕಿಲ್ಲ. ಜ್ಞಾನ ಕೇಳುವ ಸಮಾಜ ಬೇಕಾಗಿದೆ. ಬುದ್ಧ ಜ್ಞಾನದ ಸಂಕೇತ, ಅಂಬೇಡ್ಕರ್ ಸಾಮಾಜಿಕ ನ್ಯಾಯದ ಸಂಕೇತ. ಬುದ್ಧ, ಬಸವ ಮತ್ತು ಅಂಬೇಡ್ಕರ್ ಎಂಬ ಮೂರು ಜ್ಯೋತಿಗಳು ಬೆಳಗಿದರೆ ಮಾತ್ರ ಭಾರತ ಬೆಳಗಲು ಸಾಧ್ಯ. ನನಗೆ ಜಾತಿ ಮೇಲೆ ನಂಬಿಕೆಯಿಲ್ಲ. ನೀತಿ ಮೇಲೆ ಮಾತ್ರ ನಂಬಿಕೆಯಿದೆ. ಅಧಿಕಾರ ಜನರ ಸೇವೆಗೋಸ್ಕರ ಇರಬೇಕೇ ಹೊರತು ಒಬ್ಬರಿಗಾಗಿ ಅಲ್ಲ ಎಂದು ಬುದ್ಧ ಗುರು ಹೇಳಿದ್ದಾರೆ. ನಮ್ಮ ಸರ್ಕಾರ ಕೂಡ ಇದೇ ಹಾದಿಯಲ್ಲಿ ನಡೆಯುತ್ತಿದೆ. ಅಂಬೇಡ್ಕರ್ ಅವರು ತಮ್ಮ ಜೀವನದ ಅಂತ್ಯದಲ್ಲಿ ಬೌದ್ಧ ಧರ್ಮವನ್ನು ಸ್ವೀಕರಿಸಿದ್ದು ಜಗತ್ತಿನ ಗಮನ ಸೆಳೆದ ಮಹತ್ವದ ಘಟನೆ. ಅವರ ಚಿಂತನೆಗಳು ಸಾಮಾಜಿಕ ಪರಿವರ್ತನೆಗೆ ದಾರಿದೀಪ ಎಂದು ಹೇಳಿದರು.

ಮಳವಳ್ಳಿ ಪ್ರಜಾ ಸೇವಾ ಆಂದೋಲನದಲ್ಲಿ ಸಮಸ್ಯೆಗಳಿಗೆ ತ್ವರಿತ ಪರಿಹಾರ

• ಉದಯವಾಹಿನಿ, ಮಳವಳ್ಳಿ

ನ್ಯಾಯಾಲಯದಲ್ಲಿವಿಚಾರಣಾ ಹಂತದಲ್ಲಿ ಇರುವ ಪ್ರಕರಣಗಳನ್ನು ಹೊರತುಪಡಿಸಿ ಪ್ರಜಾ ಸೇವಾ ಆಂದೋಲನದಲ್ಲಿ ತ್ವರಿತಗತಿಯಲ್ಲಿ ಪರಿಹಾರ ಕಂಡುಕೊಳ್ಳಲಾಗುವುದು ಎಂದು ತಹಶೀಲ್ದಾರ್ ಎಸ್.ವಿ.ಲೋಕೇಶ್ ತಿಳಿಸಿದರು. ತಾಲ್ಲೂಕಿನ ಸುಜ್ಜಲೂರಿನ ನಾಡಕಚೇರಿಯಲ್ಲಿ ಆಯೋಜಿಸಿದ್ದ ಪ್ರಜಾ ಸೇವಾ ಆಂದೋಲನ ಉದ್ಘಾಟಿಸಿ ಮಾತನಾಡಿದರು. 100ಕ್ಕೂ ಹೆಚ್ಚು ಅರ್ಜಿಗಳು ಸಲ್ಲಿಕೆಯಾಗಿವೆ. ಕಾರ್ಯಕ್ರಮದಲ್ಲಿಬಂದಿರುವ ಬಹುತೇಕ ಅರ್ಜಿಗಳುಕಂದಾಯ ಇಲಾಖೆಗೆ ಸಂಬಂಧಿಸಿದ್ದಾಗಿವೆ. 60ಕ್ಕೂ ಹೆಚ್ಚು ಅರ್ಜಿಗಳು ಮಾಸಾಶನ ಸಂಬಂಧಿಸಿದ್ದಾಗಿವೆ. ಅವುಗಳನ್ನು ಪರಿಶೀಲನೆ ನಡೆಸಿ ವಾರದೊಳಗೆ ಸಮಸ್ಯೆ ಬಗೆಹರಿಸಲು ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದು ಹೇಳಿದರು. ಕಿರುಗಾವಲು-2 ರಲ್ಲಿ ಮತ್ತೊಂದು ಮೊರಾರ್ಜಿ ವಸತಿ ಶಾಲೆಗೆ ಜಾಗ ಗುರುತಿಸುವ ಕಾರ್ಯ ಪ್ರಗತಿಯಲ್ಲಿದೆ. ಶೀಘ್ರ ಅದು ಅಂತಿಮಗೊಳ್ಳಲಿದೆ. ಪ್ರತಿ ನಡೆಯಲಿರುವ ಪ್ರಜಾ ಸೇವಾ ಆಂದೋಲನ ಕಾರ್ಯಕ್ರಮದಲ್ಲಿ ಸಾರ್ವಜನಿಕರು ಅರ್ಜಿ ಸಲ್ಲಿಸಿ ಸಮಸ್ಯೆ ಬಗೆಹರಿಸಿಕೊಳ್ಳಲು ಆಸಕ್ತಿ ತೋರುತ್ತಿದ್ದಾರೆ. ಸರ್ಕಾರಿ ಕಚೇರಿಗಳಿಗೆ ಜನರ ಅಲೆದಾಟ ತಪ್ಪಿಸಲು ಆಂದೋಲನ ಸಹಕಾರಿಯಾಗಿದೆ ಎಂದರು. ಸಾರ್ವಜನಿಕರ ಕುಂದುಕೊರತೆಗಳನ್ನು ಜನರ ಹತ್ತಿರವೇ ಹೋಗಿ ಆಲಿಸಿ ಸ್ಥಳದಲ್ಲಿಯೇ ಅಥವಾ ಕಾಲಮಿತಿಯೊಳಗೆ ಪರಿಹಾರ ಕಲ್ಪಿಸುವ ಉದ್ದೇಶದಿಂದ ಸರ್ಕಾರ ಇಂಥ ಉತ್ತಮ ಕಾರ್ಯಕ್ರಮ ಅನುಷ್ಠಾನಗೊಳಿಸಿದ್ದು, ಇದರಿಂದ ಹಿರಿಯ ನಾಗರಿಕರು ಹಾಗೂ ಮಹಿಳೆಯರಿಗೆ ಅನುಕೂಲವಾಗಿದೆ ಎಂದು ಮಾಹಿತಿ ನೀಡಿದರು. ಮಾಸಾಶನದ ಎರಡು ಅರ್ಜಿಗಳ ದಾಖಲೆಗಳನ್ನು ಸ್ಥಳದಲ್ಲಿಯೇ ಪರಿಶೀಲಿಸಿ ಇಬ್ಬರು ಫಲಾನುಭವಿಗಳಿಗೆ ಮಂಜೂರಾತಿ ಪತ್ರ ನೀಡಲಾಯಿತು.

ತಾಲ್ಲೂಕು ಪಂಚಾಯಿತಿ ಇಒ ಎಚ್.ಜಿ. ಶ್ರೀನಿವಾಸ್, ಕ್ಷೇತ್ರ ಶಿಕ್ಷಣಾಧಿಕಾರಿ ವಿ.ಇ.ಉಮಾ, ಸೆಸ್ಕ್ ಎಇಇ ಎಚ್.ಎಸ್.ಪ್ರೇಮ್ ಕುಮಾರ್, ಲೋಕೋಪಯೋಗಿ ಇಲಾಖೆಯ ಎ.ಎಂ.ಸೋಮಶೇಖರ್, ರಾಜಸ್ವ ನಿರೀಕ್ಷಕ ಲಿಂಗಸ್ವಾಮಿ ಪಾಲ್ಗೊಂಡಿದ್ದರು.

ಪೊಲೀಸ್ ಇಲಾಖೆ ವಿರುದ್ಧ ಪ್ರಮೋದಾದೇವಿ ಒಡೆಯರ್ ಅಸಮಾಧಾನ

• ಉದಯವಾಹಿನಿ, ಮೈಸೂರು

ದಸರಾ ಮಹೋತ್ಸವದಲ್ಲಿ ಇದೇ ಮೊದಲ ಬಾರಿಗೆ ಜಟ್ಟಿ ಕಾಳಗ ರದ್ದುಪಡಿಸಿಲ್ಲ ಎಂದಿರುವ ರಾಜಮಾತೆ ಪ್ರಮೋದಾದೇವಿ ಒಡೆಯರ್ ಅವರು, ದಸರಾ ಸಂದರ್ಭದಲ್ಲಿ ಕರ್ತವ್ಯ ನಿರ್ವಹಿಸಿದ ಪೊಲೀಸ್ ಇಲಾಖೆಯಲ್ಲಿ ಸಮನ್ವಯದ ಕೊರತೆ ಪ್ರತಿವರ್ಷ ಎದ್ದು ಕಾಣುತ್ತಿದೆ ಎಂದು ವಿಷಾದ ವ್ಯಕ್ತಪಡಿಸಿದ್ದಾರೆ. ಈ ಸಂಬಂಧ ಪ್ರಮೋದಾದೇವಿ ಒಡೆಯರ್ ಅವರು, ಸುದೀರ್ಘ ಪತ್ರಿಕಾ ಪ್ರಕಟಣೆ ಬಿಡುಗಡೆ ಮಾಡಿದ್ದು, ಹಲವು ವಿಚಾರಗಳ ಬಗ್ಗೆ ತೀವ್ರ ಅಸಮಾಧಾನ ಹೊರಹಾಕಿದ್ದಾರೆ.

2026ರ ದಸರಾ ಮಹೋತ್ಸವವನ್ನು ನಡೆಸುವಲ್ಲಿ ವಿವಿಧ ಸರ್ಕಾರಿ ಇಲಾಖೆಗಳ ಅಧಿಕಾರಿಗಳ ನಡುವೆ ಇದ್ದ ಮೂಲಭೂತ ಸಮನ್ವಯದ ಕೊರತೆಯ ಬಗ್ಗೆ ನನಗೆ ತೀವ್ರ ನಿರಾಶೆಯಾಗಿದೆ. ಅರಮನೆ ಪೊಲೀಸ್, ಮೈಸೂರು ಜಿಲ್ಲಾ ಪೊಲೀಸ್, ಕರ್ನಾಟಕ ರಾಜ್ಯ ಮೀಸಲು ಪೊಲೀಸ್ ತುಕಡಿಗಳು, ನಗರ ಸಶಸ್ತ್ರ ಮೀಸಲು/ಜಿಲ್ಲಾ ಸಶಸ್ತ್ರ ಮೀಸಲು ಪಡೆಗಳು ಮತ್ತು ಇತರ ಜಿಲ್ಲೆಗಳಿಂದ ನಿಯೋಜಿಸಲ್ಪಟ್ಟ ಪೊಲೀಸ್ ಸಿಬ್ಬಂದಿಯ ನಡುವೆ ಪರಿಣಾಮಕಾರಿ ಸಮನ್ವಯ ಹಾಗೂ ಸಂವಹನದ ಕೊರತೆಯಿರುವುದು ಪ್ರತಿ ವರ್ಷವೂ ಎದ್ದು ಕಾಣುತ್ತಿರುವುದು ವಿಷಾದನೀಯ ಎಂದಿದ್ದಾರೆ.

ವಜ್ರಮುಷ್ಟಿ ಕಾಳಗವನ್ನು ಇತಿಹಾಸದಲ್ಲೇ ಮೊದಲ ಬಾರಿಗೆ ನಿಲ್ಲಿಸಲಾಗಿದೆ ಎಂದು ಕೆಲವು ಮಾಧ್ಯಮಗಳಲ್ಲಿ ವರದಿಯಾಗಿದೆ.

ಮಂಡ್ಯಕ್ಕೆ ಸಿ.ಎಂ ಭೇಟಿ: ಕಾಂಗ್ರೆಸ್ ಮುಖಂಡರ ಸಭೆ

ಉದಯವಾಹಿನಿ ಚಿತ್ರ

• ಉದಯವಾಹಿನಿ, ಕೆ.ಆರ್.ಪೇಟೆ

ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಮಂಡ್ಯಕ್ಕೆ ಅ.31ರಂದು ಭೇಟಿ ನೀಡಲಿರುವ ಕಾರಣ ಕಾಂಗ್ರೆಸ್ ಮುಖಂಡರು ಮತ್ತು ಕಾರ್ಯಕರ್ತರು ಪಟ್ಟಣದ ಪ್ರವಾಸಿ ಮಂದಿರದಲ್ಲಿ ಭಾನುವಾರ ಸಭೆ ನಡೆಸಿದರು.

ಮಾಜಿ ಶಾಸಕ ಕೆ.ಬಿ.ಚಂದ್ರಶೇಖರ್ ಮಾತನಾಡಿ, ಮುಖ್ಯಮಂತ್ರಿ ಮೊದಲ ಬಾರಿಗೆ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಲು ಮಂಡ್ಯ ಜಿಲ್ಲೆಗೆ ಬರುತ್ತಿದ್ದಾರೆ. ಮಂಡ್ಯದ ವಿಶ್ವವಿದ್ಯಾಲಯದ ಆವರಣದಲ್ಲಿ ಕಾರ್ಯಕ್ರಮ ನಡೆಯಲಿದ್ದು, ಹೆಚ್ಚಿನ ಜನರು ಭಾಗವಹಿಸಲಿದ್ದಾರೆ. ಪ್ರತಿ ಗ್ರಾಮ ಪಂಚಾಯಿತಿಗೆ ಎರಡರಿಂದ ಮೂರು ಬಸ್‌ಗಳು ಬರಲಿದ್ದು, ತಾಲ್ಲೂಕಿನಿಂದ 100 ಬಸ್‌ಗಳು ಬರಲಿವೆ. ವಿವಿಧ ಯೋಜನೆಯ ಫಲಾನುಭವಿಗಳನ್ನು ಬಸ್‌ಗಳಲ್ಲಿ ಕರೆದೊಯ್ದು, ವಾಪಸ್ ಬಿಡುವ ಜವಾಬ್ದಾರಿಯನ್ನು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಅಧಿಕಾರಿಗಳಿಗೆ ವಹಿಸಲಾಗಿದೆ. ಪಕ್ಷದ ಮುಖಂಡರು ತಮ್ಮ ಗ್ರಾಮದ ವ್ಯಾಪ್ತಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳಾ ಸ್ವಸಹಾಯ ಸಂಘಗಳು, ಸಹಕಾರ ಸಂಘಗಳ ಸದಸ್ಯರನ್ನು, ಪಕ್ಷದ ಕಾರ್ಯಕರ್ತರನ್ನು ಕಾರ್ಯಕ್ರಮಕ್ಕೆ ಕಳುಹಿಸಲು ಅಗತ್ಯ ಕ್ರಮ ವಹಿಸಬೇಕು ಎಂದು ಮನವಿ ಮಾಡಿದರು.

ಮಾಜಿ ಶಾಸಕ ಬಿ. ಪ್ರಕಾಶ್, ಕರ್ನಾಟಕ ಸರ್ಕಾರದ ಕೈಮಗ್ಗ ಅಭಿವೃದ್ಧಿ ನಿಗಮದ ಅಧ್ಯಕ್ಷ ಬಿ.ನಾಗೇಂದ್ರಕುಮಾರ್, ಟಿಎಪಿಸಿಎಂಎಸ್ ಮಾಜಿ ಅಧ್ಯಕ್ಷ ಬಿ.ಎಲ್.ದೇವರಾಜು, ಕೆಯುಐಡಿಎಫ್‌ಸಿ ನಿಗಮದ ಮಾಜಿ ಅಧ್ಯಕ್ಷ ಎಂ.ಡಿ.ಕೃಷ್ಣಮೂರ್ತಿ, ಕೆಪಿಸಿಸಿ ಸದಸ್ಯ ಕಿಕ್ಕೇರಿ ಸುರೇಶ್, ಡಿಸಿಸಿ ಬ್ಯಾಂಕ್ ನಿರ್ದೇಶಕ ಎಸ್.ಅಂಬರೀಶ್, ಮನ್‌ಮುಲ್ ನಿರ್ದೇಶಕ ಎಂ.ಬಿ.ಹರೀಶ್ ಮಾತನಾಡಿದರು.

ಅಂತರಾಳದಿಂದ... EDITORIAL

ಸಾಮಾಜಿಕ ಜಾಲತಾಣ ಪೋಸ್ಟ್: ಹೈಕೋರ್ಟ್ ಮಹತ್ವದ ತೀರ್ಪು

ಸಾಮಾಜಿಕ ಜಾಲತಾಣಗಳಲ್ಲಿ ಹಾಕಿದ ಪೋಸ್ಟ್ ಇಲ್ಲವೇ ಹಂಚಿಕೊಂಡ ಪೋಸ್ಟ್‌ಗಳಿಗೆ ಸಂಬಂಧಿಸಿದಂತೆ ಯಾರಾದರೂ ದೂರು ಸಲ್ಲಿಸಿದ ತತ್‌ಕ್ಷಣ ಪ್ರಕರಣ ದಾಖಲಿಸಿಕೊಂಡು ನೋಟಿಸ್ ಜಾರಿಗೊಳಿಸುವುದು, ಬಂಧಿಸುವುದು ಸರಿಯಾದ ಕ್ರಮವಲ್ಲ ಎಂದು ಕರ್ನಾಟಕ ಹೈಕೋರ್ಟ್ ನ್ಯಾಯಪೀಠ ತನ್ನ ಆದೇಶದಲ್ಲಿ ತಿಳಿಸಿದೆ. ಅಷ್ಟು ಮಾತ್ರವಲ್ಲದೆ ಇಂಥ ದೂರುಗಳು ಬಂದ ವೇಳೆ ಅಪರಾಧದ ಅಗತ್ಯ ಅಂಶಗಳಿವೆಯೇ ಎಂಬುದನ್ನು ಪರಿಶೀಲಿಸಿದ ಬಳಿಕ ಅಂಥ ಅಂಶಗಳಿದ್ದಲ್ಲಿ ಮಾತ್ರವೇ ಪ್ರಕರಣ ದಾಖಲಿಸಿಕೊಂಡು ಮುಂದಿನ ಕಾನೂನು ಕ್ರಮ ಜರಗಿಸಬೇಕು ಎಂದು ಪೊಲೀಸರಿಗೆ ನಿರ್ದೇಶನ ನೀಡಿದೆ. ಇತ್ತೀಚಿನ ದಿನಗಳಲ್ಲಿ ಸಾಮಾಜಿಕ ಜಾಲತಾಣಗಳ ಪೋಸ್ಟ್ ವಿಷಯವನ್ನು ಮುಂದಿಟ್ಟು ದೂರು ಬಂದಾಕ್ಷಣ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಕಾನೂನು ಕ್ರಮ ಜರಗಿಸುತ್ತಿರುವ ಘಟನಾವಳಿಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಸರಕಾರ ಮತ್ತು ಪೊಲೀಸ್ ಇಲಾಖೆಗೆ ಹೈಕೋರ್ಟ್ ತನ್ನ ಈ ಆದೇಶದ ಮೂಲಕ ಎಚ್ಚರಿಕೆಯ ಸಂದೇಶವನ್ನು ರವಾನಿಸಿದೆ.

ನಿರ್ದಿಷ್ಟ ಪ್ರಕರಣವೊಂದರ ವಿಚಾರಣೆ ನಡೆಸಿದ ಹೈಕೋರ್ಟ್ ಏಕಸದಸ್ಯ ಪೀಠ ಈ ಮಹತ್ವದ ಆದೇಶವನ್ನು ನೀಡಿದೆ. ಕಳೆದ ಕೆಲವು ವರ್ಷಗಳಿಂದ ಸಾಮಾಜಿಕ ಜಾಲತಾಣ ಬಳಕೆ ವ್ಯಾಪಕವಾಗಿದ್ದು ಇವುಗಳಲ್ಲಿ ಹಾಕಲಾಗುವ ಪೋಸ್ಟ್‌ಗಳು, ವಿಡಿಯೋಗಳು, ಹೇಳಿಕೆಗಳು, ಪ್ರತಿಕ್ರಿಯೆಗಳು, ಪೋಸ್ಟ್ ಹಂಚಿಕೊಳ್ಳುವಿಕೆಗೆ ಸಂಬಂಧಿಸಿದಂತೆ ಪದೇಪದೆ ತಕರಾರುಗಳು ಸೃಷ್ಟಿಯಾಗುತ್ತಿವೆ. ಕೆಲವು ಸೂಕ್ಷ್ಮ ಘಟನೆಗಳ ಸಂದರ್ಭದಲ್ಲಂತೂ ಸಾಮಾಜಿಕ ಜಾಲತಾಣಗಳಲ್ಲಿ ಪರ-ವಿರೋಧ ಅಭಿಪ್ರಾಯಗಳ ವಿನಿಮಯ ತಾರಕಕ್ಕೇರುತ್ತವೆ.

ಈ ಸಂಬಂಧ ಹಲವರು ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ, ಕಾನೂನು ಮತ್ತು ಸುವ್ಯವಸ್ಥೆಗೆ ಧಕ್ಕೆ, ದ್ವೇಷ, ಪ್ರಚೋದನೆ ಮತ್ತಿತರ ಆರೋಪಗಳಡಿ ಪೊಲೀಸರಿಗೆ ದೂರು ನೀಡುವುದು ಸಾಮಾನ್ಯವಾಗಿದೆ. ಇಂತಹ ಸಂದರ್ಭದಲ್ಲಿ ಪೊಲೀಸರು ಕೂಡ ದೂರಿನ ಪರಾಮರ್ಶೆ ನಡೆಸದೆ ಆರೋಪಿಗಳ ವಿರುದ್ಧ ಕಾನೂನು ಕ್ರಮಕ್ಕೆ ಮುಂದಾಗುತ್ತಾರೆ.

ಈ ಎಲ್ಲಾ ಅಂಶಗಳನ್ನು ಗಮನಿಸಿಯೇ ನ್ಯಾಯಪೀಠ ಇಂತಹ ದೂರುಗಳು ಬಂದಾಗ ಸಮರ್ಪಕ ವಿಚಾರ, ವಿಮರ್ಶೆ ನಡೆಸದೆ ಪೊಲೀಸರು ತ್ವರಿತ ಕ್ರಮ ಕೈಗೊಳ್ಳುವುದು ಸರಿಯಲ್ಲ ಎಂದು ಅಭಿಪ್ರಾಯಪಟ್ಟಿದ್ದೇ ಅಲ್ಲದೆ, ಟೀಕೆ, ಭಿನ್ನಾಭಿಪ್ರಾಯಗಳನ್ನು ಕೋಮು ದ್ವೇಷ ಎಂದು ಪರಿಗಣಿಸಲಾಗದು ಎಂದು ಸ್ಪಷ್ಟಪಡಿಸಿದೆ.

ಇನ್ನು ಇಂಥ ಬೆಳವಣಿಗೆ ನಡೆದ ಸಂದರ್ಭದಲ್ಲಿ ಒಂದೇ ಘಟನೆಗೆ ಸಂಬಂಧಿಸಿದಂತೆ ಸರಣಿ ಪ್ರಕರಣ ದಾಖಲಿಸುವ ಪ್ರವೃತ್ತಿ ಹೆಚ್ಚುತ್ತಿರುವ ಕುರಿತಂತೆಯೂ ಹೈಕೋರ್ಟ್ ತೀವ್ರ ಅಸಮಾಧಾನ ವ್ಯಕ್ತಪಡಿಸಿ ಇದು ಕಾನೂನುಸಮ್ಮತವಲ್ಲ ಎಂದು ಅಭಿಪ್ರಾಯಪಟ್ಟಿದೆ. ಹೈಕೋರ್ಟ್ ಏಕಸದಸ್ಯ ಪೀಠ ತನ್ನ ಆದೇಶದಲ್ಲಿ ಉಲ್ಲೇಖಿಸಿರುವ ಅಂಶಗಳಲ್ಲೂ ಸಾಮಾಜಿಕ ಜಾಲತಾಣಗಳ ಪೋಸ್ಟ್‌ಗಳ ನೆಪವೊಡ್ಡಿ ಬೇಕಾಬಿಟ್ಟಿಯಾಗಿ ಪ್ರಕರಣ ದಾಖಲಿಸಿಕೊಂಡು ಕಿರುಕುಳ ನೀಡುವ ಪೊಲೀಸ್ ಇಲಾಖೆ ಮತ್ತು ಇಂಥ ವಿಷಯಗಳಲ್ಲಿ ಹಸ್ತಕ್ಷೇಪ ನಡೆಸುವವರಿಗೆ ಕಿವಿಮಾತೇ ಸರಿ. ಇದೇ ವೇಳೆ ಅಭಿವ್ಯಕ್ತಿ ಸ್ವಾತಂತ್ರ್ಯದ ನೆಪದಲ್ಲಿ ಸಾಮಾಜಿಕ ಜಾಲತಾಣಗಳಲ್ಲಿ ಬೇಕಾಬಿಟ್ಟಿಯಾಗಿ ಪೋಸ್ಟ್ ಮಾಡುವವರಿಗೂ ಹೈಕೋರ್ಟ್‌ನ ಈ ಆದೇಶದಲ್ಲಿ ಎಚ್ಚರಿಕೆಯ ಸಂದೇಶವಿದೆ. ಕೋಮು ಸಾಮರಸ್ಯ, ಸಮಾಜದ ಶಾಂತಿ, ಸೌಹಾರ್ದತೆಯನ್ನು ಕದಡಿ ಕಾನೂನು ಸುವ್ಯವಸ್ಥೆಗೆ ಭಂಗ ಉಂಟು ಮಾಡುವಂತಹವರ ವಿರುದ್ಧ ಕಾನೂನು ಪ್ರಕಾರ ಕ್ರಮ ಕೈಗೊಳ್ಳಲು ಪೊಲೀಸರಿಗೆ ಸಂಪೂರ್ಣ ಅಧಿಕಾರವಿದೆ ಎಂಬುದನ್ನು ಸಾಮಾಜಿಕ ಜಾಲತಾಣ ಬಳಕೆದಾರರು ಮರೆಯಬಾರದು. ಸಾಮಾಜಿಕ ಜಾಲತಾಣ ಬಳಕೆ ವೇಳೆ ಈ ಎಲ್ಲಾ ವಿಷಯಗಳ ಬಗೆಗೆ ಸ್ವಯಂ ಜಾಗೃತಿ ಹೊಂದುವುದರ ಜತೆಯಲ್ಲಿ ಒಂದಿಷ್ಟು ಸ್ವಯಂ ನಿಯಂತ್ರಣ ಹೊಂದುವುದು ಅತ್ಯಗತ್ಯ ಎಂಬುದನ್ನು ಮರೆಯಬಾರದು.

ಪರೀಕ್ಷಾ ಸಂಭ್ರಮ

ಡಾ.ಸುಧಾಕರ್ . ಜಿ. ಲಕ್ಕವಳ್ಳಿ
ಲೇಖಕರು
ಸಾಮಾಜಿಕ ಚಿಂತಕರು
(M)8747969381

20

ಕೈ ಬೆರಳುಗಳ ಆಯಾಸಕ್ಕೆ ವ್ಯಾಯಾಮ

ಲೇಖನಿಯನ್ನು ಬಿಗಿಯಾಗಿ ಒತ್ತಿ ಹಿಡಿಯಬೇಡಿ, ಸಡಿಲ ಹಿಡಿತದಿಂದ ಒತ್ತಡ ಕಡಿಮೆಯಾಗುತ್ತದೆ. ಮಣಿಕಟ್ಟು ಮೇಜಿನ ಅಂಚಿಗೆ ಒತ್ತದಂತೆ ಎಚ್ಚರ ವಹಿಸಿ. ಬರವಣಿಗೆಯ ನಡುವೆ ಕೈಯನ್ನು ಮೇಜಿನ ಮೇಲೆ ಸಮತಟ್ಟಾಗಿ ಇರಿಸಿ ಕ್ಷಣ ವಿಶ್ರಾಂತಿ ನೀಡಿ. ಸೂಕ್ತ ಎತ್ತರದ ಪೀಠವಿದ್ದರೆ ಭುಜದಿಂದ ಕೈವರೆಗಿನ ಭಾರ ಇಳಿಯುತ್ತದೆ.

ಗಂಟೆಗಟ್ಟಲೆ ಬರವಣಿಗೆಯಲ್ಲಿ ತೊಡಗಿದಾಗ ಬೆರಳುಗಳು ಸೆಟೆದುಕೊಳ್ಳುತ್ತವೆ, ಮಣಿಕಟ್ಟಿನಲ್ಲಿ ನೋವು ಮೂಡುತ್ತದೆ, ಲೇಖನಿ ಹಿಡಿದ ಜಾಗದಲ್ಲಿ ಗುಳ್ಳೆ ಏಳುತ್ತದೆ. ಅಕ್ಷರಗಳು ನಿಧಾನಗತಿಯಾಗಿ ಪರೀಕ್ಷೆಯಲ್ಲಿ ವೇಗ ಕುಂಠಿತವಾಗುತ್ತದೆ. ನಿರಂತರ ಒತ್ತಡದಿಂದ ನರಗಳು ಮತ್ತು ಸ್ನಾಯುಗಳು ಬಳಲಿ ಬರವಣಿಗೆಯೇ ಸವಾಲಾಗುತ್ತದೆ.

ಪ್ರತಿ ಅರ್ಧ ಗಂಟೆಗೆ ಒಮ್ಮೆ ಒಂದು ನಿಮಿಷ ಈ ಲಘು ವ್ಯಾಯಾಮಗಳನ್ನು ಮಾಡಿ. ಎರಡೂ ಕೈಗಳನ್ನು ಬಿಗಿಯಾಗಿ ಮುಷ್ಟಿ ಮಾಡಿ ಐದು ಸೆಕೆಂಡು ಹಿಡಿದು ಸಡಿಲಿಸಿ, ಹತ್ತು ಬಾರಿ ಪುನರಾವರ್ತಿಸಿ.

ಬೆರಳುಗಳನ್ನು ಅಗಲವಾಗಿ ಹರಡಿ ಮತ್ತೆ ಮುಚ್ಚಿ. ಒಂದು ಕೈಯ ಬೆರಳುಗಳನ್ನು ಇನ್ನೊಂದು ಕೈಯಿಂದ ಮೆಲ್ಲನೆ ಹಿಂದಕ್ಕೆ ಎಳೆಯಿರಿ, ಮಣಿಕಟ್ಟನ್ನು ಬಲ-ಎಡಕ್ಕೆ ನಿಧಾನವಾಗಿ ತಿರುಗಿಸಿ. ಕೊನೆಗೆ ಕೈಗಳನ್ನು ಲಘುವಾಗಿ ಅಲುಗಾಡಿಸಿ ರಕ್ತಸಂಚಾರವನ್ನು ಚುರುಕುಗೊಳಿಸಿ.

ನೆನಪಿಡಿ, ನಿಮ್ಮ ಕೈಯೇ ಪರೀಕ್ಷೆಯ ಆಯುಧ. ಅದನ್ನು ಹದವರಿತು ಕಾಪಾಡುವುದು ನಿಮ್ಮ ಹೊಣೆ.

ದಿನಕ್ಕೆ ಎರಡು ಬಾರಿ ಈ ಪುಟ್ಟ ಅಭ್ಯಾಸಗಳನ್ನು ಮಾಡಿದರೆ ಆಯಾಸ ಕರಗಿ ಬರವಣಿಗೆಯ ವೇಗ ಮತ್ತು ಅಂದ ಎರಡೂ ಹೆಚ್ಚುತ್ತವೆ. ನೋವರಹಿತವಾಗಿ ಬರೆಯಿರಿ, ನೆಮ್ಮದಿಯಿಂದ ಗೆಲ್ಲಿರಿ.

ಜ್ಯೋತಿ ತಾಂತ್ರಿಕ ಮಹಾವಿದ್ಯಾಲಯದಲ್ಲಿ 'ಗೇಮ್ ಅಥಾನ್ 8.0' ಜಾಗತಿಕ ಗೇಮ್ ಡೆವಲಪ್‌ಮೆಂಟ್ ಸ್ಪರ್ಧೆ

• ಉದಯವಾಹಿನಿ, ಬೆಂಗಳೂರು

ನಗರದ ಜ್ಯೋತಿ ತಾಂತ್ರಿಕ ಮಹಾವಿದ್ಯಾಲಯದ ಮಾಹಿತಿ ವಿಜ್ಞಾನ ಮತ್ತು ಇಂಜಿನಿಯರಿಂಗ್ ವಿಭಾಗದ ವತಿಯಿಂದ 'ಬಿಟ್ಸ್ ಆಂಡ್ ಬೈಟ್ಸ್, ಎಸಿಎಂ ಸ್ಟೂಡೆಂಟ್ ಚಾಪ್ಟರ್ ಸಹಯೋಗದಲ್ಲಿ ಗೇಮ್‌ಅಥಾನ್ 8.0 ಎ ಗ್ಲೋಬಲ್ ಕಂಟೆಸ್ಟ್' ಎಂಬ 24 ಗಂಟೆಗಳ ಗೇಮ್ ಡೆವಲಪ್‌ಮೆಂಟ್ ಸ್ಪರ್ಧೆಯನ್ನು ಅಕ್ಟೋಬರ್ 23 ಮತ್ತು 24ರಂದು ಆಯೋಜಿಸಲಾಯಿತು.

ಕಾರ್ಯಕ್ರಮದ ಉದ್ಘಾಟನಾ ಸಮಾರಂಭಕ್ಕೆ ಸಿಎಸ್ಐಆರ್‌ಎನ್‌ಐಡಿಎಸ್‌ಎಯ ನಿರ್ದೇಶಕರಾದ ಡಾ. ಗೋಪಾಲ್ ಕೃಷ್ಣ ಪಾತ್ರ ಮುಖ್ಯ ಅತಿಥಿಗಳಾಗಿ ,ಅರಿಸ್ಟಾ ನೆಟ್‌ವರ್ಕ್ಸ್‌ನ ಸಾಫ್ಟ್‌ವೇರ್ ಇಂಜಿನಿಯರ್ ಶ್ರೀಶಾಶ್ವತ ಮಿತ್ರ ಜಿ.ಬಿ. ಗೌರವ ಅತಿಥಿಗಳಾಗಿ ಭಾಗವಹಿಸಿದರು. ಮಹಾವಿದ್ಯಾಲಯದ ಟ್ರಸ್ಟಿಗಳು, ಆಡಳಿತ ಮಂಡಳಿಯ ಸದಸ್ಯರು ಹಾಗೂ ಪ್ರಾಂಶುಪಾಲರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ವಿದ್ಯಾರ್ಥಿಗಳಲ್ಲಿ ಗೇಮ್ ಡೆವಲಪ್ ಮೆಂಟ್ ಕೌಶಲ, ಸೃಜನಶೀಲತೆ, ತಾಂತ್ರಿಕ ಜ್ಞಾನ ಮತ್ತು ನವೀನ ಚಿಂತನೆಯನ್ನು ಉತ್ತೇಜಿಸುವ ಉದ್ದೇಶದಿಂದ ಈ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು. ಸೈಬರ್‌ಪಂಕ್ ಥೀಮ್ ಆಧಾರಿತ ಈ ಸ್ಪರ್ಧೆಯಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳಿಗೆ ನಾಲ್ಕು ವಿಭಿನ್ನ ಸಮಸ್ಯಾ ಹೇಳಿಕೆಗಳನ್ನು ನೀಡಲಾಗಿತ್ತು. ಅವುಗಳಲ್ಲಿ ಒಂದನ್ನು ಆಯ್ಕೆ ಮಾಡಿಕೊಂಡು, ಆಯ್ದ ವಿಷಯಕ್ಕೆ ಅನುಗುಣವಾಗಿ ತಮ್ಮದೇ ಆದ ವಿಡಿಯೋ ಗೇಮ್ ಅನ್ನು ಅಭಿವೃದ್ಧಿಪಡಿಸುವ ಸವಾಲನ್ನು ನೀಡಲಾಗಿತ್ತು.

ನಾಲ್ಕು ವಿಭಿನ್ನ ಪರಿಕಲ್ಪನೆಗಳಾದ 'ದಿ ನೋಮ್ಯಾಡ್ ಸರ್ವೈವ್ ದಿ ವೇಸ್ಟ್‌ಲ್ಯಾಂಡ್ಸ್', 'ದಿ ಸ್ಟ್ರೀಟ್‌ಕಿಡ್ ರೂಲ್ ದಿ ಸ್ಟ್ರೀಟ್ಸ್', 'ದಿ ಮ್ಯಾಟ್ರಿಕ್ಸ್ ಬ್ರೇಕ್ ದಿ ಸಿಮ್ಯುಲೇಶನ್' ಮತ್ತು 'ದಿ ರೇಸರ್ ಓನ್ ದಿ ನೈಟ್' ಎಂಬ ವಿಷಯಗಳ ಆಧಾರದ ಮೇಲೆ ವಿದ್ಯಾರ್ಥಿಗಳು ಆಟಗಳನ್ನು ರೂಪಿಸಿದರು. ಪ್ರತಿಯೊಂದು ವಿಷಯವೂ ವಿಭಿನ್ನ ಸವಾಲು ಮತ್ತು ಸೃಜನಶೀಲತೆಗೆ ಅವಕಾಶ ನೀಡುವಂತೆ ವಿನ್ಯಾಸಗೊಳಿಸಲಾಗಿತ್ತು.

ಉದಯವಾಹಿನಿ ಚಿತ್ರ

24 ಗಂಟೆಗಳ ಅವಧಿಯಲ್ಲಿ ಸ್ಪರ್ಧಾರ್ಥಿಗಳು ಆಟದ ಪರಿಕಲ್ಪನೆ, ವಿನ್ಯಾಸ, ಪಾತ್ರಗಳ ರಚನೆ, ಆಟದ ಹಂತಗಳು ಮತ್ತು ಆಟದ ಕಾರ್ಯವೈಖರಿಯನ್ನು ಅಭಿವೃದ್ಧಿಪಡಿಸುವ ಕಾರ್ಯದಲ್ಲಿ ತೊಡಗಿಸಿಕೊಂಡರು.

ತಮ್ಮ ತಾಂತ್ರಿಕ ಕೌಶಲ, ಕಲ್ಪನಾಶಕ್ತಿ ಮತ್ತು ತಂಡದ ಸಹಕಾರವನ್ನು ಬಳಸಿಕೊಂಡು ಆಯ್ದ ವಿಷಯಕ್ಕೆ ತಕ್ಕಂತೆ ಆಟಗಳನ್ನು ರೂಪಿಸಿ, ಅವುಗಳನ್ನು ಕಾರ್ಯಗತಗೊಳಿಸುವ ಮೂಲಕ ತಮ್ಮ ಪ್ರತಿಭೆಯನ್ನು ಪ್ರದರ್ಶಿಸಿದರು.

ಕಾರ್ಯಕ್ರಮದಲ್ಲಿ ಒಟ್ಟು 2,000 ಅಮೆರಿಕನ್ ಡಾಲರ್ ಬಹುಮಾನ ಮೊತ್ತವನ್ನು ಘೋಷಿಸಲಾಗಿತ್ತು. ವಿದ್ಯಾರ್ಥಿಗಳಿಗೆ ಗೇಮ್ ಡೆವಲಪ್‌ಮೆಂಟ್ ಕ್ಷೇತ್ರದಲ್ಲಿ ಪ್ರಾಯೋಗಿಕ ಅನುಭವ ಪಡೆಯಲು, ಹೊಸ ತಂತ್ರಜ್ಞಾನಗಳನ್ನು ಕಲಿಯಲು ಮತ್ತು ತಮ್ಮ ಸೃಜನಶೀಲ ಆಲೋಚನೆಗಳನ್ನು ಡಿಜಿಟಲ್ ಆಟಗಳ ರೂಪದಲ್ಲಿ ಸಾಕಾರಗೊಳಿಸಲು ಈ ಸ್ಪರ್ಧೆ ಉತ್ತಮ ವೇದಿಕೆಯಾಯಿತು.

ಕಂಪ್ಯೂಟರ್ ಸೈನ್ಸ್ ಮತ್ತು ಇಂಜಿನಿಯರಿಂಗ್ ಹಾಗೂ ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ ಮತ್ತು ಮೆಷಿನ್ ಲರ್ನಿಂಗ್ ವಿಭಾಗಗಳ ಸಹಯೋಗದೊಂದಿಗೆ ನಡೆದ ಈ ಕಾರ್ಯಕ್ರಮಕ್ಕೆ ವಿವಿಧ ಸಂಸ್ಥೆಗಳು ಸಹಭಾಗಿತ್ವ ನೀಡಿದ್ದವು. ಕಾರ್ಯಕ್ರಮದ ಆಯೋಜನೆಯಲ್ಲಿ ಮಾಹಿತಿ ವಿಜ್ಞಾನ ಮತ್ತು ಇಂಜಿನಿಯರಿಂಗ್ ವಿಭಾಗದ ಮುಖ್ಯಸ್ಥರಾದ ಡಾ. ಕಿಶೋರ್ ಜಿ.ಆರ್. ಅವರು ಪ್ರಮುಖ ಪಾತ್ರವಹಿಸಿದರು.

ಕಲಾ ಸಾಹಿತ್ಯ

ಕೃಷ್ಣಪ್ಪ
ಲೇಖಕರು
ಪ್ರಗತಿ ಪರ ಚಿಂತಕ ಹಾಗೂ ವಿಮರ್ಶಕರು

ಸಮಸ್ಯೆಗಳ ಜೊತೆಯಲ್ಲಿಯೇ ಮಾನವರು ಬದುಕನ್ನು ಕಟ್ಟಿಕೊಂಡು ಶಾಂತಿ,ನೆಮ್ಮದಿಯನ್ನು ಕಾಪಾಡಿಕೊಳ್ಳಬೇಕು. ಸಮಸ್ಯೆ ಇಲ್ಲದ ಮನೆ ಇಲ್ಲ, ನೋವು ಇಲ್ಲದ ಮನೆ ಇಲ್ಲ, ಸಾವು ಇಲ್ಲದ ಮನೆ ಇಲ್ಲ, ದುಃಖ ಇಲ್ಲದ ಮನೆ ಇಲ್ಲ ಎಲ್ಲದಕ್ಕೂ ನಾವು ಸಿದ್ದರಿರಬೇಕು. ಬದುಕು ಅನಿಶ್ಚಿತ, ಸಾವು ನಿಶ್ಚಿತ ಇದನ್ನ ಎಲ್ಲರೂ ಮನಗಾಣಬೇಕು. ಒಂಟಿ ಜೀವನದ ಬದುಕು, ಅದು ನರಕದ ಜೀವನ. ಅದೇ ಸಂಸಾರಿಕ ಜೀವನ ಅಥವಾ ಸಂಘ ಜೀವನವೇ ಅದು ಸ್ವರ್ಗ.ಸಂಸಾರಿಕ ಎಂಬ ಬಂಧನದ ಬದುಕು ಇಲ್ಲದಿದ್ದರೆ ಅದು ಜೀವನವಲ್ಲ. ಅದಿಲ್ಲದಿದ್ದರೆ ಪ್ರಪಂಚವೇ ಇಲ್ಲ ಹಾಗೂ ಜನನ ಮತ್ತು ಮರಣ ಈಎರಡೂ ಸಹ ಏಕಕಾಲದಲ್ಲಿ ನಡೆಯುವ ಪ್ರಕ್ರಿಯೆ ಇವೆರಡೂ ಇಲ್ಲದಿದ್ದರೆ ಪ್ರಪಂಚವೇ ಇಲ್ಲ. ತಂದೆ ತಾಯಿ,ಗಂಡ ಹೆಂಡತಿ , ಮಕ್ಕಳು ಇರುವ ಸಂಸಾರದಲ್ಲಿ ಸುಖ, ಶಾಂತಿ, ನೆಮ್ಮದಿ, ಸಂತೋಷ ಬೇರೆ ಎಲ್ಲೂ ಕಾಣಲಿಕ್ಕೆ ಸಾಧ್ಯವಿಲ್ಲ. ಆದರೆ ಆ ಮನೆಯನ್ನು, ಆ ಸಂಸಾರವನ್ನ ಸ್ವರ್ಗ ಮಾಡಿ ಕೊಳ್ಳುವ ಗುಣಗಳನ್ನು ಕುಟುಂಬದ ಸದಸ್ಯರೆಲ್ಲರೂ ಸ್ವಯಂ ವಿವೇಚನೆಯಿಂದ ಮಾಡಿಕೊಳ್ಳಬೇಕು. ಇಲ್ಲ ಅಂದರೆ ಆ ಮನೆಯೇ ನರಕವಾಗುತ್ತದೆ.

ಸಂಸಾರಿಕ ಜೀವನವೇ ನಿಜವಾದ ಜೀವನ, ಅದು ಬದುಕಿನ ಎಲ್ಲಾ ಬಗೆಯ ಆಯಾಮಗಳನ್ನು ಕಲಿಸುತ್ತದೆ

ಜಗತ್ತಿನ ಇತರೆ ದೇಶಗಳಿಗಿಂತ ಭಾರತ ದೇಶ ವಿಭಿನ್ನ,ವಿಶೇಷ ಹಾಗೂ ವಿವಿಧತೆಯಲ್ಲಿ ಏಕತೆಯಿಂದ ಕೂಡಿದೆ. ಒಂದು ಕಾಲದಲ್ಲಿ ಭಾರತ ದೇಶ ವಸುದೈವ ಕುಟುಂಬಕಂ ಅಂದರೆ ವಿಶ್ವವೇ ಒಂದು ಕುಟುಂಬ ಎಂಬ ಕೀರ್ತಿಗೆ ಪಾತ್ರವಾಗಿತ್ತು. ಆಗ ಭಾರತ ಅವಿಭಕ್ತ ಕುಟುಂಬಗಳ ತವರೂ ಸಹ ಎನಿಸಿಕೊಂಡಿತ್ತು ಆದರೆ ಈಗ ಅದು ಉಳಿದಿಲ್ಲ ಎಂತಹ ವಿಪರ್ಯಾಸ.

ಹುಟ್ಟುವಾಗ ಅಣ್ಣತಮ್ಮಂದಿರರಾಗಿ ಹುಟ್ಟಿ ಬಾಲ್ಯ, ವಿದ್ಯಾಭ್ಯಾಸ ಮುಗಿಸಿ ಯೌವನಕ್ಕೆ ಕಾಲಿಟ್ಟು ಬೆಳೆಯುತ್ತಾ- ಬೆಳೆಯುತ್ತಾ ಮನಸ್ಸು ಮತ್ತು ಹೃದಯವನ್ನು ಬದಲಾವಣೆ ಮಾಡಿಕೊಂಡು ದಾಯಾದಿ ಮತ್ಸರ ರೀತಿ ಬದುಕುತ್ತಾ ಹೊಂದಾಣಿಕೆಯಾಗದೇ ಈಗ ಒಂದು ಮನೆ ಮೂರು ಬಾಗಿಲುಗಳಾಗಿವೆ. ನಮ್ಮ ನಾಡು ಸಮಶೀತೋಷ್ಣ ಹವಾಮಾನ ಕೂಡಿರುವ ನಾಡಾದ್ದರಿಂದ ಗಣನೀಯವಾಗಿ ಮಕ್ಕಳ ಸಂತತಿ ಯಥಪ್ರಕಾರ ಬೆಳೆಯುತ್ತಿದೆ.

ಚೈನಾದೇಶವನ್ನು ಹಿಂದಿಕ್ಕಿ ಸದ್ಯ ಭಾರತ 142 ಕೋಟಿ ಜನಸಂಖ್ಯೆಯನ್ನು ಹೊತ್ತುಕೊಂಡಿದೆ. ಈ ಹಿಂದೆ ಕುಟುಂಬದ ಎಲ್ಲಾ ಸದಸ್ಯರಿಗೂ ವಿವಾಹ ನಂತರ ಮಕ್ಕಳ ಸಂತತಿ ಬೆಳೆಯಲು ಯಾವುದೇ ಅಡ್ಡಿಯಾಗದೇ ಆಸ್ಪತ್ರೆ ಮತ್ತು ದೇವಾಲಯದ ಮೊರೆಗೆ ಹೋಗುತ್ತಿರಲಿಲ್ಲ. ಬಾಲ್ಯ,ಯೌವ್ವನ, ಮಧ್ಯವಯಸ್ಸು ಮತ್ತು ಮುಪ್ಪು ಇವುಗಳು ಪ್ರತಿಯೊಬ್ಬರ ಜೀವನದ ಬದುಕಿನಲ್ಲಿ ಬರುವುದು ಸಹಜ ಇದು ಪ್ರಕೃತಿಯ ನಿಯಮ.ಬಾಲ್ಯ, ವಿದ್ಯಾಭ್ಯಾಸ ಮುಗಿದ ನಂತರ ಉದ್ಯೋಗವನ್ನು ಅರಸಿ, ಉದ್ಯೋಗವನ್ನು ಕಲ್ಪಿಸಿಕೊಳ್ಳುವುದು.

ಉದ್ಯೋಗ ಕಲ್ಪಿಸಿಕೊಂಡ ಮೇಲೆ ಹೆಣ್ಣಾಗಲೀ ಅಥವಾ ಗಂಡಾಗಲೀ ವಿವಾಹ ಮಾಡಿಕೊಂಡು ಸಂಸಾರಿಕ ಜೀವನಕ್ಕೆ ಕಾಲಿಡುವುದು ಇದು ಕೂಡ ಸಹಜ ಹಾಗೂ ಸೃಷ್ಟಿಯು ಮೆಚ್ಚುವ ಪ್ರಕ್ರಿಯೆ. ವಿವಾಹ ಬಂಧನಕ್ಕೆ ಒಳಪಟ್ಟ ಮೇಲೆ ಅನೇಕನೇಕ ನಿಬಂಧನೆಗಳು,ನಿರ್ಬಂಧಗಳು, ಚಿಂತನೆ-ಯೋಚನೆಗಳು, ಯೋಜನೆಗಳು ಕಟ್ಟುಪಾಡುಗಳು ಸಹಜವಾಗಿ ಉದ್ಭವವಾಗುತ್ತವೆ ಹಾಗೂ ಮನಸ್ಸಿನ ಮೇಲೆ ಪರಿಣಾಮ ಬೀರುತ್ತವೆ. ಆಗ ವಿವಾಹ ಬಂಧನವಾದವರಿಗೆ ಹೆಚ್ಚುವರಿಯಾಗಿ ಜವಾಬ್ದಾರಿ,ಹೊಣೆಗಾರಿಕೆ, ಕರ್ತವ್ಯ ಏನೆಂಬುದು ಹಂತ- ಹಂತವಾಗಿ ಅರ್ಥವಾಗುತ್ತದೆ. ಹಣ ಉಳಿತಾಯ ಮಾಡುವುದು, ಸಂಸಾರ ನಿಭಾಯಿಸಿಕೊಂಡು ಹೋಗುವುದು,ಮಕ್ಕಳಿಗೆ ಶಿಕ್ಷಣ ಕೊಡಿಸುವುದು,ಅಗತ್ಯ ವಸ್ತುಗಳ ಬಗ್ಗೆ ಖರೀದಿ ಮಾಡುವುದು,ಮನೆ ಕಟ್ಟಲು ಯೋಜನೆ ರೂಪಿಸಿಕೊಳ್ಳುವುದು ಇತ್ಯಾದಿ ಎಲ್ಲವೂ ಒಟ್ಟೊಟ್ಟಿಗೆ ಮನಸ್ಸಿನ ಮೇಲೆ ಪರಿಣಾಮ ಬೀರುತ್ತವೆ.ಇದು ನನ್ನ ಮನೆ, ನನ್ನ ನಿವೇಶನ,ಇದು ನನ್ನ ಮನೆಯ ವಸ್ತುಗಳು, ನನ್ನ ಹೆಂಡತಿ, ನನ್ನ ಗಂಡ ಇವರು ನನ್ನ ಮಕ್ಕಳು ಇವರ ಮೇಲೆ ಸಹಜವಾಗಿ ಪ್ರೀತಿಯು ಹುಟ್ಟುತ್ತದೆ ಹಾಗೂ ಅವರಿಗೆ ಒಂದು ದಾರಿ ತೋರಿಸುವ ಹಾಗೂ ದಾರಿ ಮಾಡುವ ಆಸೆ ಮತ್ತು ಗುಣ ಯಥಾಪ್ರಕಾರ ಒದಗಿಬರುತ್ತದೆ. ಇಲ್ಲಿಂದಲೇ ಸಂಸಾರಿಕನಿಗೆ ಎಲ್ಲಾ ಪ್ರಶ್ನೆಗಳು ಹುಟ್ಟುವುದು ಹಾಗೂ ನಿಜವಾದ ಜೀವನ ಮತ್ತು ಬದುಕು ಏನೆಂಬುದು ಅರ್ಥವಾಗುವುದು. ಸಂಸಾರಿಕ ಜೀವನ ಯಾವುದೇ ವಿಶ್ವವಿದ್ಯಾಲಯವು ಕಲಿಸದ ಪಾಠವನ್ನು ಕಲಿಸುತ್ತದೆ ಮತ್ತು ಎಲ್ಲಾ ಬಗೆಯ ಆಯಾಮಗಳನ್ನು ಕಲಿಸುತ್ತದೆ ಹಾಗೂ ಸಂಸಾರ ಎಂಬ ಸಾಗರದಲ್ಲಿ ಈಜಿ ದಡ ಸೇರಬೇಕು ಆಗಲೇ ಬದುಕು ಸಾರ್ಥಕ. ಮಕ್ಕಳ ಯೋಗಕ್ಷೇಮ, ಮಕ್ಕಳ ಬೆಳವಣಿಗೆ, ಮಕ್ಕಳ ವಿದ್ಯಾಭ್ಯಾಸ, ನಂತರ ಉದ್ಯೋಗ ದೊರಕಿಸಿಕೊಟ್ಟು ಅವರನ್ನೂ ಸಹ ವಿವಾಹ ಬಂಧನಕ್ಕೆ ಒಳಪಡಿಸುವುದು. ನಂತರ ಅವರಿಗೆ ಮಕ್ಕಳು ಅವರ ಬೆಳವಣಿಗೆ ಅವರ ವಿದ್ಯಾಭ್ಯಾಸಗಳು ಒಟ್ಟಾರೆ ಮಕ್ಕಳು ಮತ್ತು ಮೊಮ್ಮಕ್ಕಳ ಸಂತತಿ ಬೆಳೆಯುತ್ತಾ ಜೀವನ ಪರ್ಯಂತರ ಸಂಸಾರಿಕ ಜೀವನ ಉಸಿರಿರುವವರೆಗೂ ಎಳೆದುಕೊಂಡು ಹೋಗುತ್ತದೆ. ಆದರೆ ಬದುಕಿನ ಬಂಡಿಯಲ್ಲಿ ಕಷ್ಟ, ನೋವು, ತೊಂದರೆ, ಸಮಸ್ಯೆ ಎಂದು ಅಂದುಕೊಳ್ಳಬಾರದು, ಅಂದುಕೊಂಡರೆ ನೋವು ಜಾಸ್ತಿ ಆಗುತ್ತದೆ. ಇದೆಲ್ಲಾ ಶಿಕ್ಷೆಯಲ್ಲ, ಕೇವಲ ಪರೀಕ್ಷೆ ಅಷ್ಟೇ ಪ್ರತಿ ದಿವಸ ಒದಗಿ ಬರುವ ಜೀವನದ ಪರೀಕ್ಷೆಗಳನ್ನ ಬಹಳ ಸಂತೋಷವಾಗಿ ಎದುರಿಸಬೇಕು. ಪರೀಕ್ಷೆಯಲ್ಲಿ ಜೀವನವಿಲ್ಲ, ಜೀವನದಲ್ಲಿ ಪರೀಕ್ಷೆ ಇದೆ ಅದೇ ಮನುಷ್ಯನ ಧರ್ಮ. ಆದರೆ ಸ್ವತಂತ್ರವಾಗಿ ಬಂದು ಸ್ವತಂತ್ರವಾಗಿ ಈ ಭೂಮಿಯಿಂದ ನಿರ್ಗಮಿಸುತ್ತಾರೆ. ಏನಾದರೂ ಸಾಧಿಸಿದ್ದರೆ ಸಾಧಕ ಎಂದು ಕರೆಯುತ್ತಾರೆ ಇಲ್ಲ ಅಂದರೆ ಅಂದೇ ಮರೆಯುತ್ತಾರೆ.

ಅದೇ ಸಂಸಾರಿಕ ಜೀವನದಲ್ಲಿ ವಂಶಾವಳಿ ಬೆಳೆಸಿ ತಾನು ಬೆಳೆಯುವುದರ ಜೊತೆಗೆ ಮಕ್ಕಳನ್ನು ಬೆಳೆಸಿ ಮಕ್ಕಳಿಗೆ ಸಂಸ್ಕಾರದ ಜೊತೆಗೆ ವಿದ್ಯಾಭ್ಯಾಸಕೊಟ್ಟು ರಾಷ್ಟ್ರಕ್ಕೆ ಸಮರ್ಪಿಸುತ್ತಾರೆ. ಇದು ನಿಜವಾದ ಸಾರ್ಥಕದ ಬದುಕು.ಒಬ್ಬ ನಿಜವಾದ ತಂದೆ ತಾಯಿಗಳು ತಮಗೆ ಎಷ್ಟು ಮಕ್ಕಳಾದರೂ ಸಹ ಮಕ್ಕಳು ನಮಗೆ ಎಂದೂ ಭಾರವಾಗಲಿಲ್ಲ ಎಂದುಕೊಳ್ಳುವ ಅವರೇ ನಿಜವಾದ ತಂದೆ ತಾಯಿಗಳು. ಅದೇ ರೀತಿ ತನ್ನ ಮಕ್ಕಳು ದೊಡ್ಡವರಾದ ಮೇಲೆ ತಂದೆ ತಾಯಿಗಳು ವಯಸ್ಸಾದ ಮೇಲೆ ನಮಗೆ ಎಂದೂ ಭಾರವಾಗಲಿಲ್ಲ ಎನ್ನುವ ಮಕ್ಕಳೇ ನಿಜವಾದ ಮಕ್ಕಳು. ಮುಖ್ಯವಾಗಿ ನಿಜವಾದ ಸಂಸಾರಿಕ ಜೀವನವು ಸನ್ಮಾರ್ಗ, ಮಾನವೀಯತೆ ಹಾಗೂ ಎಲ್ಲಾ ಬಗೆಯ ಆಯಾಮಗಳನ್ನು ಕಲಿಯುವುದರ ಜೊತೆಗೆ ಅವಿನಾಭಾವ ಸಂಬಂಧ, ರಕ್ತ ಸಂಬಂಧ, ಬಂಧು-ಬಳಗ, ಸ್ನೇಹ ಬಳಗ ಬದುಕಿನಲ್ಲಿ ಬರುವ ಇವೆಲ್ಲವನ್ನೂ ಸಾಮಾನ್ಯವಾಗಿ ಗಟ್ಟಿಗೊಳಿಸುತ್ತದೆ. **ಉದಾಹರಣೆಗೆ:** ಸಾಕ್ಷಾತ್ ದೇವರಾದ ರಾಮ,ಕೃಷ್ಣ, ಶಿವ ಈ ಮೂವರು ಮಹತ್ ಸ್ವಪ್ನಗಳು. ಈ ಮಹಾನ್ ಶಕ್ತಿಗಳು ಸಂಸಾರಿಕ ಜೀವನವನ್ನು ಬಹಳ ಉತ್ಸಾಹದಿಂದ ಅನುಭವಿಸಿ ಜಗತ್ತಿಗೆ ದಾರಿದೀಪ ತೋರಿಸಿದರು ಹಾಗೂ ಕನ್ನಡಿಯಾದರು. ಒಟ್ಟಾರೆ ಸಂಸಾರಿಕ ಜೀವನವು ಬದುಕುವ ಎಲ್ಲಾ ಬಗೆಯ ದಾರಿಮಾರ್ಗವನ್ನು , ದಾರಿ ದೀಪವನ್ನು, ದಾರಿ ದೀಪೋಕ್ತಿಯನ್ನು, ಸುಖ ದುಃಖ,ಸೋಲು ಗೆಲುವು, ಲಾಭ, ನಷ್ಟ,ಶಾಂತಿ,ನೆಮ್ಮದಿ, ಸಂತೋಷ,ಆಸೆಗಳು, ತೃಪ್ತಿಗಳು ಇತ್ಯಾದಿ ಜೀವನಾನುಭವವನ್ನು ಕಲಿಸುವುದೇ ನಿಜವಾದ ಸಂಸಾರಿಕ ಜೀವನ ಸಾರ್ಥಕದ ಬದುಕು. ಜೀವನೋತ್ಸವ ಸಿಗುವುದೇ ಸಂಸಾರಿಕ ಜೀವನದಿಂದ ಮಾತ್ರ ಸಾಧ್ಯ. ಇದು ಸೃಷ್ಟಿಯ ನಿಯಮ ಆಗಂತ ಬ್ರಹ್ಮಚಾರಿಗಳು ತಪ್ಪು ಕಲ್ಪನೆಯನ್ನು ಮಾಡಿಕೊಳ್ಳುವುದು ಸರಿಯಲ್ಲ.

ಹೊಂದಾಣಿಕೆ ನಿಜವಾದ ಸಂಸಾರಿಕ ಜೀವನ

ಎಲ್ಲದಕ್ಕೂ ಅಂದರೆ ಏಳಿಗೆಗೆ ಅಥವಾ ಅವನತಿಗೆ ನಾವೇ ಹೊಣೆಗಾರರಾಗುತ್ತೇವೆ ಬೇರೆಯವರನ್ನ ಹೊಣೆಗಾರರನ್ನಾಗಿ ಮಾಡುವುದು ಅದು ಅಕ್ಷಮ್ಯ ಅಪರಾಧ. ಇರುವುದರಲ್ಲಿಯೇ ಕುಟುಂಬದ ಸದಸ್ಯರೆಲ್ಲರೂ ಅರ್ಥ ಮಾಡಿಕೊಂಡು ಹೊಂದಾಣಿಕೆಯಲ್ಲಿ ಹೋಗುವುದೇ ನಿಜವಾದ ಸಂಸಾರಿಕ ಜೀವನ. ಇಲ್ಲದ ಅಥವಾ ದಕ್ಕದ ವಿಚಾರಕ್ಕೆ ಕೈ ಹಾಕಿ ಮನಸ್ಸನ್ನು ಕೆಡಿಸಿಕೊಂಡು ಹಾಗೂ ಬೇರೆಯವರೊಂದಿಗೆ ಹೋಲಿಕೆ ಮಾಡಿಕೊಂಡು ಸಂಸಾರದಲ್ಲಿ ರಾದ್ಧಾಂತ ಮಾಡಿಕೊಳ್ಳುವುದು ಹಾಗೂ ಸಮಸ್ಯೆಗಳನ್ನು ಹುಟ್ಟಿಹಾಕಿಕೊಳ್ಳುವುದು ಅದು ಮನುಷ್ಯನ ಧರ್ಮವಲ್ಲ. ಮಕ್ಕಳು ವಿದ್ಯಾಭ್ಯಾಸ ಮುಗಿಸಿ ದೊಡ್ಡವರಾದ ಮೇಲೆ ಅವರಿಗೆ ದಕ್ಕುವ ಉದ್ಯೋಗಗಳು ಹಾಗೂ ಸ್ಥಾನ ಮಾನಗಳು ತಂದೆ-ತಾಯಿಗಳ ಮನಸ್ಸುಗಳನ್ನು ಹಿಮ್ಮಡಿಗೊಳಿಸುತ್ತದೆ. ಉದಾಹರಣೆಗೆ: ಒಂದೇ ಕುಟುಂಬದಲ್ಲಿ 10 ಮಕ್ಕಳಿದ್ದರೆ ಅದರಲ್ಲಿ ಒಬ್ಬ ನ್ಯಾಯಾಧೀಶ, ಒಬ್ಬ ರಾಷ್ಟ್ರಾಧ್ಯಕ್ಷ, ಒಬ್ಬ ಪ್ರಧಾನಮಂತ್ರಿ, ಒಬ್ಬ ಮುಖ್ಯಮಂತ್ರಿ, ಒಬ್ಬ ಐಪಿಎಸ್, ಒಬ್ಬ ಐಎಎಸ್, ಒಬ್ಬ ಐಎಫ್ ಎಸ್, ಒಬ್ಬ ಡಾಕ್ಟರ್, ಒಬ್ಬ ಇಂಜಿನಿಯರ್, ಒಬ್ಬ ಪೊಲೀಸ್ ಅಧಿಕಾರಿ, ಒಬ್ಬ ರಕ್ಷಣಾಧಿಕಾರಿ, ಒಬ್ಬ ಶಿಕ್ಷಕ, ಒಬ್ಬ ಸಿಇಓ, ಒಬ್ಬ ನಟ, ಒಬ್ಬ ರೈತ ಇತ್ಯಾದಿ ಹೀಗೆ ಒಬ್ಬೊಬ್ಬರು ಒಂದೊಂದು ವೃತ್ತಿಯಲ್ಲಿ ಪರಿಣಿತಿ ಸಾಧಿಸಿ ರಾಷ್ಟ್ರದಲ್ಲಿ ಶಕ್ತಿವಂತರಾಗಿ ಮತ್ತು ಆಸ್ತಿವಂತರಾಗಿ ಇರುವ ಮಕ್ಕಳನ್ನು ನೋಡಿದ ತಂದೆ ತಾಯಿಗಳ ಮನಸ್ಸು ನಿಜಕ್ಕೂ ಉಲ್ಲಾಸವಾಗಿ ನಮ್ಮ ಬದುಕು ಎಷ್ಟೊಂದು ಸಾರ್ಥಕ ಎಂದು ಅಂದುಕೊಳ್ಳುತ್ತಾರೆ.ಅದೇ ಗಂಡಾಗಲೀ ಅಥವಾ ಹೆಣ್ಣಾಗಲೀ ಮದುವೆ ಮಾಡಿಕೊಳ್ಳದೇ ಬ್ರಹ್ಮಚಾರಿಯಾಗಿ ಏಕಾಂತ ಜೀವನ ಮಾಡುವ ಸಮೂಹಕ್ಕೆ ಸಾಂಸಾರಿಕ ಜೀವನದ ಅರಿವು ಅರ್ಥವಾಗುವುದಿಲ್ಲ.

• ಹಿಂದಿನ ಸಂಚಿಕೆಯಿಂದ **121ನೆಯ ಅಧ್ಯಾಯ**

ದೇವತತಿ ನಡುಗಿತು, ಅವನ ಸಿಂಹನಾದವನ್ನು ಕೇಳಿ ಸಮುದ್ರವೇ ಕಂಪಿಸಿತು. ಈ ರೀತಿಯಲ್ಲಿ ಅಸುರಬಲವು - ಕಾಳಮೇಘವು ಸೇರಿ ಘುಡುಘುಡಿಸುವಂತೆ - ಹೊರಡಲು ಪ್ರಹಸನು ತನ್ನ ಪರಾಕ್ರಮವನ್ನು ತೋರಿಸುವ ಆತುರದಿಂದ ಯುದ್ಧರಂಗಕ್ಕೆ ನಡೆದ. ಮೊರೆಯುವ ಕಹಳೆಗಳು, ಚೀರುವ ಶಂಖಗಳ ಜೊತೆಗೆ ತಮ್ಮಟೆ ದುಂದುಭಿಗಳ ಶಬ್ದವು ಸೇರಿಕೊಂಡು ಗೆಲವನ್ನು ಪಡೆಯುವ ಮಹದಾಸೆಯಿಂದ ದಾನವಪಡೆಯು ಮುನ್ನಡೆಯಿತು. ಪ್ರಹಸ್ತನ ಜೊತೆಗೆ ಮಹಾಕಾಯರಾದ ನರಾಂತಕ, ಕುಂಭಹ, ಮಹಾನಾದ ಮತ್ತು ಸಮುನ್ನತ ಎಂಬ ಅವನ ನಾಲ್ವರು ಸಚಿವರು ಅವನ ರಥದ ಸುತ್ತ ಬಂದರು. ಕಡುಗಲಿಯಾದ ಪ್ರಹಸ್ತನು ಕಪಿಮುಖ್ಯರನ್ನು ಇಂದೇ ಜಯಿಸಿ ಜಯಲಕ್ಷ್ಮಿಯನ್ನು ಸಡಗರದಿಂದ ಕೈಹಿಡಿದು ಕರೆತರುವವನೆಂಬ ಉತ್ಸಾಹದಿಂದ ರಾಕ್ಷಸಬಳಗವು ಭೋರ್ಗರೆಯುತ್ತ ಹಸಿದ ಹುಲಿಯಂತೆ ರೋಷದಿಂದ ಪೂರ್ವದ್ವಾರದ ಮೂಲಕ ಹೊರಟಿತು. ಅಮಿತ ಸಂಖ್ಯೆಯ ಕರಿತುರಗಗಳು, ರತ್ನಚಿತ್ರಿತ ರಥಗಳು, ಅಗಣಿತ ಪದಾತಿ ಸೈನ್ಯವೆಲ್ಲವೂ ಒಂಟೆ ನರಿ ಸಿಂಹ ಮುಂತಾದವುಗಳನ್ನೇರಿ ಆರ್ಭಟೆಯಿಂದ ಭೂಮಿಯನ್ನು ಕಿತ್ತು ಎತ್ತುವಂತೆ ಆ ಸೇನಾಪತಿಗಳ ಹಿರಿತನದಲ್ಲಿ ಹೊರಟವು. ಭಾನುಕುಲನಂದನನನ್ನು ಪ್ರಹಸ್ತನು ಗೆಲ್ಲುವನೆಂಬ ಭರವಸೆಯಲ್ಲಿ ದಾನವಗಣವು ಬರುತ್ತಿರಲು ಅಪಶಕುನಗಳಂತೆ ಮೃಗಪಕ್ಷಿಗಳು ವಕಾರಧ್ವನಿಯಿಂದ ಕೂಗಿಕೊಂಡವು, ಹದ್ದುಗಳು ಪ್ರಹಸನ ರಥದ ಗೋಪುರದ ಮೇಲೆ ಕುಳಿತುಕೊಂಡುವು, ಅಲ್ಲಲ್ಲಿ ಮೋಡಗಳಿಂದ ರಕ್ತದ ಹನಿಗಳುದುರಿದುವು. ಹಸಿದ ಯಮನು ಪ್ರಾಣಿಗಳನ್ನೆಲ್ಲ ಕೊಲ್ಲಬಯಸಿ ಬರುತ್ತಿರುವನೋ ಎಂಬಂತೆ ಪ್ರಹಸ್ತನು ಅಸಮಬಲರಾದ ದೈತ್ಯಭಟರೊಡನೆ ತನ್ನ ಸರ್ಪಲಾಂಛನದ ರಥದಲ್ಲಿ ಕುಳಿತು. ಅತ್ಯಂತ ವೇಗವಾಗಿ ನಗರದಿಂದ ರಕ್ತದ ಮಳೆ, ಹೊಡೆಯುತ್ತಿರುವ ಬರಸಿಡಿಲುಗಳನ್ನು ಲೆಕ್ಕಿಸದೆ - ಬರುತ್ತಿರಲು ಕಪಿಸಮೂಹಕ್ಕೆ ಅವನು ಬಿಸಿಲೆರೆಯನಂತೆ ಕಾಣಿಸಿದ. ಹೀಗೆ ಬಂದವನನು ಕಪಿಸೈನ್ಯವು ವಿವಿಧ ಆಯುಧಗಳನ್ನು ಹಿಡಿದು ಎದುರಿಸಿತು. ಮರಗಳನ್ನು ಮುರಿದು ತರುವ, ಬಂಡೆಗಳನ್ನೆತ್ತಿ ಬಿಸುಡುವ ಕಪಿಯೋಧರ ಗದ್ದಲದಿಂದ ದಿಕ್ಕಾಲಕರ ಗಡಚಿಕ್ಕಿತು. ಅವರ ಮೇರೆ ರಾಕ್ಷಸರು ಶರವೃಷ್ಟಿಯನ್ನು ಕರೆದರು. ಎರಡೂ ಕಡೆಯ ಭಟರ ಬೊಬ್ಬಿರಿತದಿಂದ ವಾತಾವರಣವೆಲ್ಲ ಶಬ್ದಮಯವಾಯಿತು. ನಾಗಕೇತನನ ಮೇಲೆ ಈ ರೀತಿ ಆಕ್ರಮಣ ಮಾಡುತ್ತಿರುವ ಪ್ಲವಗಸೇನೆಯನ್ನು ಕಂಡ ರಘುನಾಥನು ಅಚ್ಚರಿಯಿಂದ ವಿಭೀಷಣನನ್ನು ಕರೆದು ಬರುತ್ತಿರುವ ದೈತ್ಯಸೇನಾನಾಯಕನಾರು ಎಂದು ಕೇಳಿದ. ಆ ದೈತ್ಯೋತ್ತಮನು ರಾಮನಿಗೆರಗಿ ಕೈಮುಗಿದುಕೊಂಡು, ದೇವ ಕೇಳು, ಹಿಂದೆ ಸುರರಿಪು ಮಾಲಿಯೆಂಬುವ ಒಬ್ಬನಿದ್ದ, ಅವನ ತಮ್ಮಂದಿರು ಸುಮಾಲಿ ಮತ್ತು ಮಾಲ್ಯವಂತರೆಂಬುವ ಲೋಕಕಂಟಕರು ಅವರು ಮೂವರೂ ಸ್ವರ್ಗವನ್ನು ಗೆಲ್ಲಲೆಂದು ಹೋದಾಗ ಲಕ್ಷ್ಮೀಕಾಂತನು ದೇವತೆಗಳನ್ನು ಕಾಪಾಡಲೆಂದು ದಾವಾಗ್ನಿಗಳಂತಿದ್ದ ಮಾಲಿ-ಸುಮಾಲಿ-ಮಾಲ್ಯವಂತರನ್ನು ಭೂಮಿಗೆ ಕೆಡವಿದ ಅವರಲ್ಲಿ ಮಾಲಿಯು ಸತ್ತು ಉಳಿದ ಸುಮಾಲಿ ಮತ್ತು ಮಾಲ್ಯವಂತರು ಉಳಿದುಕೊಂಡರು. ಅತುಲ ಪರಾಕ್ರಮಿಗಳಾದ ಮಾಲಿ-ಸುಮಾಲಿಯರಿಗೆ ಹಲವು ಜನ ಮಕ್ಕಳು ಅವರೆಲ್ಲ ಕೆಲವು ಕಾಲ ಜೀವರಕ್ಷಣೆಗಾಗಿ ಪಾತಾಳವನ್ನು ಹೊಕ್ಕರು. ಭೂಮಿಯಲ್ಲಿ ದಶಕಂಠನು ಹುಟ್ಟಲು ಮತ್ತೆ ಭೂಮಿಗೆ ಬಂದ ಇವರು ಅವನೊಡನೆ ಸೇರಿ ಗೋವಿಪ್ರಹತಕರಾಗಿ ಅಪ್ರತಿಹತರೆನ್ನಿಸಿ ಓಡಾಡಿಕೊಂಡಿದ್ದರು ಸುಮಾಲಿಯ ಮಗನೇ ಈಗ ಬರುತ್ತಿರುವ ಪ್ರಹಸ್ತ ಹರನ ವರದಾನ ಬಲದಿಂದ ರಾವಣನಿಗೆ ಅಖಿಲ ಶಸ್ತ್ರಾಸ್ತ್ರಬಲವು ದೊರೆಯಲು ಅಂದಿನಿಂದ ಇವನು ಒಂದು ಅಭೇದ್ಯವಾದ ಕವಚವನ್ನು ಧರಿಸಿದ್ದಾನೆ. ಇವನು ರಾವಣನಿಗೆ ತುಂಬ ಆಪ್ತನೆನಿಸಿದವನು ಇಂದ್ರ ಚಂದ್ರರನ್ನು ಲೆಕ್ಕಿಸದ, ಬಾಹುಬಲ ಪರಾಕ್ರಮ ಯುದ್ಧಚಾತುರ್ಯಗಳಿಂದ ಕೂಡಿದ ಪ್ರಹಸ್ತನನ್ನು ದಶಾನನನು ನಿನ್ನನ್ನು ಗೆಲ್ಲುವ ಆಸೆಯಿಂದ ಕಳಿಸಿಕೊಟ್ಟಿದ್ದಾನೆ ಎಂದು ಪ್ರಹಸ್ತನ ಬಗೆಗಿನ ವಿವರಗಳನ್ನು ನೀಡಿದ.

ಅಷ್ಟರಲ್ಲಿ ದಾನವಬಲವು ಪರಶು ತೋಮರ ಯಷ್ಟಿ ಕತ್ತಿಗಳಿಂದ ಹೊಡೆಯುತ್ತ ಕಪಿನಾಯಕರನ್ನು ತರಿದಿಡುತ್ತ ಬಂದರು. ಇವರೇನೂ ಸಾಮಾನ್ಯರಲ್ಲ, ತಮ್ಮ ಹಲ್ಲು ಉಗುರುಗಳಿಂದ ದಾನವರನ್ನು ಸೀಳಿ ಹರಿದಿಡುತ್ತ ಎದುರಿಸಿದರು ಕೋಪದಿಂದ ರಕ್ಕಸರು ನಾನಾ ಬಗೆಯ ಆಹಿಹದೆಗಳಂದ ಪ್ಲವಗರ ಮೇಲೆ ಬಿದ್ದರು. ಸಾಮಾನ್ಯ ಆಯುಧಗಳಲ್ಲದೆ ಕೈಗೆ ಸಿಕ್ಕಿದ್ದನ್ನೆಲ್ಲ ಹಿಡಿದು ವೀರಾವೇಶದಿಂದ ಹೋರಾಡಿದರು. ಎರಡೂ ಕಡೆಯ ಹಲವಾರು ಮಂದಿ ಹತರಾದರು. ಆಯುಧಗಳಿಂದ ಎದುರಿಸಿದುದಲ್ಲದೆ, ಕೆಲವರು ದ್ವಂದ್ವಯುದ್ಧಕ್ಕೂ ಇಳಿದರು.

ಮುಂದುವರೆಯುವುದು

ಇತಿಹಾಸದ ವೈಭವ, ಸಂಸ್ಕೃತಿಯ ಶ್ರೀಮಂತಿಕೆ: ಹಾಸನ ಜಿಲ್ಲೆಯ ಹೆಮ್ಮೆಯ ಹೆಜ್ಜೆಗುರುತುಗಳು!



ಲೇಖಕರು
ವಿಶ್ವಾಸ್ .ಡಿ.ಗೌಡ
ಲೇಖಕರು
ಸಾಮಾಜಿಕ ಚಿಂತಕರು

ಕರ್ನಾಟಕದ ಇತಿಹಾಸವನ್ನು ಅವಲೋಕಿಸಿದಾಗ ತನ್ನದೇ ಆದ ವಿಶಿಷ್ಟ ಪರಂಪರೆ, ಸಾಂಸ್ಕೃತಿಕ ಶ್ರೀಮಂತಿಕೆ ಹಾಗೂ ಐತಿಹಾಸಿಕ ಮಹತ್ವದಿಂದ ಗಮನ ಸೆಳೆಯುವ ಜಿಲ್ಲೆಗಳಲ್ಲಿ ಹಾಸನವೂ ಪ್ರಮುಖವಾದುದು. ಪಶ್ಚಿಮ ಘಟ್ಟಗಳ ಹಸಿರು ಸಿರಿಯಿನಿಂದ ಹಿಡಿದು ಹೊಯ್ಸಳರ ಶಿಲ್ಪಕಲೆಯ ಅದ್ಭುತ ದೇಗುಲಗಳವರೆಗೆ, ಜೈನ ಧರ್ಮದ ಪವಿತ್ರ ನೆಲೆಗಳಿಂದ ಹಿಡಿದು ಆಧ್ಯಾತ್ಮಿಕ ಕ್ಷೇತ್ರಗಳವರೆಗೆ ಹಾಸನ ಜಿಲ್ಲೆಯ ಪ್ರತಿಯೊಂದು ಭಾಗವೂ ತನ್ನದೇ ಆದ ಇತಿಹಾಸವನ್ನು ಸಾರುತ್ತದೆ. ಇದು ಕೇವಲ ಒಂದು ಭೌಗೋಳಿಕ ಪ್ರದೇಶವಲ್ಲ ಕನ್ನಡ ನಾಡಿನ ಕಲೆ, ಸಾಹಿತ್ಯ, ಧರ್ಮ, ಸಂಸ್ಕೃತಿ ಮತ್ತು ಪರಂಪರೆಯ ಜೀವಂತ ದರ್ಶನ. **ಇತಿಹಾಸದ ಪುಟಗಳಲ್ಲಿ ಹಾಸನ:** ಹಾಸನ ಜಿಲ್ಲೆಯ ಇತಿಹಾಸವು ಪ್ರಾಚೀನ ಕಾಲದಿಂದಲೂ ವಿವಿಧ ರಾಜವಂಶಗಳ ಆಡಳಿತದೊಂದಿಗೆ ಬೆಸೆದುಕೊಂಡಿದೆ. ಗಂಗರು, ರಾಷ್ಟ್ರಕೂಟರು, ಹೊಯ್ಸಳರು, ವಿಜಯನಗರ ಸಾಮ್ರಾಜ್ಯದ ಅರಸರು ಹಾಗೂ ನಂತರದ ಮೈಸೂರು ಅರಸರ ಆಡಳಿತದ ಪ್ರಭಾವ ಈ ಭಾಗದ ಇತಿಹಾಸ ಮತ್ತು ಸಂಸ್ಕೃತಿಯ ಮೇಲೆ ಬೀರಿದೆ. ವಿಶೇಷವಾಗಿ ಹೊಯ್ಸಳರ ಕಾಲದಲ್ಲಿ ಹಾಸನ ಪ್ರದೇಶವು ಕಲೆ ಮತ್ತು ವಾಸ್ತುಶಿಲ್ಪದ ಪ್ರಮುಖ ಕೇಂದ್ರವಾಗಿ ಬೆಳೆಯಿತು.ಹೊಯ್ಸಳ ಸಾಮ್ರಾಜ್ಯದ ಕಲಾ ವೈಭವಕ್ಕೆ ಸಾಕ್ಷಿಯಾಗಿ ನಿಂತಿರುವ ಬೇಲೂರು ಮತ್ತು ಹಳೇಬೀಡು ಇಂದಿಗೂ ಜಗತ್ತಿನ ಪ್ರವಾಸಿಗರನ್ನು ಆಕರ್ಷಿಸುತ್ತಿವೆ. ಕಲ್ಲಿನಲ್ಲಿ ಅರಳಿದ ಸೂಕ್ಷ್ಮ ಕೆತ್ತನೆಗಳು, ಪೌರಾಣಿಕ ಕಥೆಗಳನ್ನು ಸಾರುವ ಶಿಲ್ಪಗಳು, ದೇವಾಲಯಗಳ ಅದ್ಭುತ ವಿನ್ಯಾಸಗಳು ನಮ್ಮ ಪೂರ್ವಜರ ಅಪಾರ ಪ್ರತಿಭೆಗೆ ಸಾಕ್ಷಿಯಾಗಿವೆ. ಇಂತಹ ಸ್ಮಾರಕಗಳು ಕೇವಲ **ಧಾರ್ಮಿಕ ಕೇಂದ್ರಗಳಲ್ಲ:** ಅವು ನಮ್ಮ ಇತಿಹಾಸವನ್ನು ಮುಂದಿನ ಪೀಳಿಗೆಗೆ ಪರಿಚಯಿಸುವ ಅಮೂಲ್ಯ ಜ್ಞಾನಭಂಡಾರಗಳಾಗಿವೆ. ಬೇಲೂರು ಮತ್ತು **ಹಳೇಬೀಡು ಶಿಲ್ಪಕಲೆಯ ಸ್ವರ್ಗ:** ಬೇಲೂರಿನ ಚೆನ್ನಕೇಶವ ದೇವಾಲಯವು ಹೊಯ್ಸಳರ ವಾಸ್ತುಶಿಲ್ಪದ ಅಪೂರ್ವ ಪ್ರತೀಕವಾಗಿದೆ. ದೇವಾಲಯದ ಕಂಬಗಳು, ನೃತ್ಯ ಭಂಗಿಯಲ್ಲಿರುವ ಶಿಲ್ಪಗಳು, ಆಭರಣಗಳ ಸೂಕ್ಷ್ಮ ಕೆತ್ತನೆಗಳು ಮತ್ತು ಪೌರಾಣಿಕ ಚಿತ್ರಣಗಳು ನೋಡುಗರನ್ನು ಮಂತ್ರಮುಗ್ಧಗೊಳಿಸುತ್ತವೆ. ಹಳೇಬೀಡಿನ ಹೊಯ್ಸಳೇಶ್ವರ ದೇವಾಲಯವು ಶಿಲ್ಪಕಲೆಯ ಮತ್ತೊಂದು ಅದ್ಭುತ ಲೋಕವಾಗಿದೆ. ಪೌರಾಣಿಕ ಪ್ರಸಂಗಗಳು, ಪ್ರಾಣಿ-ಪಕ್ಷಿಗಳ ಆಕೃತಿಗಳು ಮತ್ತು ಅಲಂಕಾರಿಕ ಕೆತ್ತನೆಗಳು ಹೊಯ್ಸಳರ ಕಲಾತ್ಮಕ ದೃಷ್ಟಿಕೋನವನ್ನು ಪ್ರತಿಬಿಂಬಿಸುತ್ತವೆ. ಈ ದೇವಾಲಯಗಳು 2023ರಲ್ಲಿ ಯುನೆಸ್ಕೋದ ವಿಶ್ವ ಪರಂಪರೆಯ ಪಟ್ಟಿಗೆ ಸೇರ್ಪಡೆಯಾದ ಹೊಯ್ಸಳರ ಪವಿತ್ರ ದೇವಾಲಯಗಳ ಸಮೂಹದ ಭಾಗವಾಗಿವೆ. ಇವು ಕರ್ನಾಟಕದ ಕೀರ್ತಿಯನ್ನು ಜಾಗತಿಕ ಮಟ್ಟದಲ್ಲಿ ಎತ್ತಿಹಿಡಿದಿವೆ. **ಶ್ರವಣಬೆಳಗೊಳ ಜೈನ ಪರಂಪರೆಯ ಪವಿತ್ರ ನೆಲೆ:** ಹಾಸನ ಜಿಲ್ಲೆಯ ಮತ್ತೊಂದು ಮಹತ್ವದ ಐತಿಹಾಸಿಕ ಮತ್ತು ಧಾರ್ಮಿಕ ಕ್ಷೇತ್ರವೆಂದರೆ ಶ್ರವಣಬೆಳಗೊಳ. ಇಲ್ಲಿ ವಿರಾಜಮಾನವಾಗಿರುವ ಗೊಮ್ಮಟೇಶ್ವರ ಬಾಹುಬಲಿಯ ಏಕಶಿಲಾ ಮೂರ್ತಿಯು ತ್ಯಾಗ, ಅಹಿಂಸೆ, ಆತ್ಮಸಂಯಮ ಮತ್ತು ಶಾಂತಿಯ ಸಂದೇಶವನ್ನು ಸಾರುತ್ತದೆ. ಶತಮಾನಗಳಿಂದ ಜೈನ ಧರ್ಮದ ಪ್ರಮುಖ ಕೇಂದ್ರವಾಗಿರುವ ಈ ಕ್ಷೇತ್ರವು ದೇಶ-ವಿದೇಶಗಳಿಂದ ಭಕ್ತರನ್ನು ಆಕರ್ಷಿಸುತ್ತದೆ. ಮಹಾಮಸ್ತಕಾಭಿಷೇಕದಂತಹ ಧಾರ್ಮಿಕ ಆಚರಣೆಗಳು ಈ ಕ್ಷೇತ್ರದ ಮಹತ್ವವನ್ನು ಮತ್ತಷ್ಟು ಹೆಚ್ಚಿಸಿವೆ. **ಹಾಸನಾಂಬೆ ನಂಬಿಕೆಯ ಪ್ರತೀಕ:** ಹಾಸನ ನಗರದ ಅಧಿದೇವತೆಯಾದ ಹಾಸನಾಂಬೆ ದೇವಿಯ ದೇವಾಲಯವು ಜಿಲ್ಲೆಯ ಧಾರ್ಮಿಕ ಪರಂಪರೆಯ ಪ್ರಮುಖ ಕೇಂದ್ರವಾಗಿದೆ. ವರ್ಷಕ್ಕೊಮ್ಮೆ ನಿರ್ದಿಷ್ಟ ಅವಧಿಯಲ್ಲಿ ದೇವಾಲಯದ ಬಾಗಿಲು ತೆರೆಯುವ ಸಂಪ್ರದಾಯವು ಅಪಾರ ಭಕ್ತರನ್ನು ಸೆಳೆಯುತ್ತದೆ. ಭಕ್ತರ ನಂಬಿಕೆ, ಜನಪದ ಸಂಸ್ಕೃತಿ ಮತ್ತು ಧಾರ್ಮಿಕ ಆಚರಣೆಗಳ ಸಂಗಮವಾಗಿ ಹಾಸನಾಂಬೆ ಜಾತ್ರೆ ಪ್ರಸಿದ್ಧಿ ಪಡೆದಿದೆ. **ಪ್ರಕೃತಿ ಮತ್ತು ಕೃಷಿಯ ಸೊಬಗು:** ಹಾಸನ ಜಿಲ್ಲೆಯ ಸೌಂದರ್ಯವು ಐತಿಹಾಸಿಕ ಸ್ಮಾರಕಗಳಿಗೆ ಮಾತ್ರ ಸೀಮಿತವಾಗಿಲ್ಲ. ಸಕಲೇಶಪುರದ ಹಸಿರು ಬೆಟ್ಟಗಳು, ಕಾಫಿ ತೋಟಗಳು, ಮಂಜಿನಿಂದ ಆವೃತವಾದ ಪರ್ವತಶ್ರೇಣಿಗಳು, ಜಲಪಾತಗಳು ಮತ್ತು ಪಶ್ಚಿಮ ಘಟ್ಟಗಳ ನೈಸರ್ಗಿಕ ಸಂಪತ್ತು ಜಿಲ್ಲೆಯ ಹೆಮ್ಮೆಯಾಗಿವೆ. ಮಲೆನಾಡು ಮತ್ತು ಬಯಲುಸೀಮೆಯ ವೈವಿಧ್ಯಮಯ ಭೌಗೋಳಿಕ ಲಕ್ಷಣಗಳು ಇಲ್ಲಿನ ಜೀವನಶೈಲಿಯಲ್ಲಿಯೂ ಪ್ರತಿಫಲಿಸುತ್ತವೆ.ಕೃಷಿ ಜಿಲ್ಲೆಯ ಆರ್ಥಿಕತೆಯ ಪ್ರಮುಖ ಆಧಾರವಾಗಿದೆ. ಕಾಫಿ, ಭತ್ತ, ತೆಂಗು, ಅಡಿಕೆ ಹಾಗೂ ಇತರ ಬೆಳೆಗಳು ರೈತರ ಬದುಕಿಗೆ ಆಸರೆಯಾಗಿವೆ. ರೈತರ ಪರಿಶ್ರಮ, ಗ್ರಾಮೀಣ ಬದುಕಿನ ಸರಳತೆ ಮತ್ತು ಪ್ರಕೃತಿಯೊಂದಿಗಿನ ಸಹಬಾಳ್ವೆ ಹಾಸನದ ವಿಶಿಷ್ಟ ಗುರುತುಗಳಾಗಿವೆ. **ಸಂಸ್ಕೃತಿ, ಸಾಹಿತ್ಯ ಮತ್ತು ಜನಜೀವನ:** ಹಾಸನ ಜಿಲ್ಲೆ ಧಾರ್ಮಿಕ ಸಾಮರಸ್ಯ, ಜನಪದ ಕಲೆಗಳು, ಸಾಹಿತ್ಯಿಕ ಚಟುವಟಿಕೆಗಳು ಮತ್ತು ಸಾಂಸ್ಕೃತಿಕ ಪರಂಪರೆಯಲ್ಲಿಯೂ ಶ್ರೀಮಂತವಾಗಿದೆ. ಜಾತ್ರೆಗಳು, ಉತ್ಸವಗಳು, ಗ್ರಾಮೀಣ ಆಚರಣೆಗಳು ಮತ್ತು ಕನ್ನಡದ ಸಾಹಿತ್ಯಿಕ ಕಾರ್ಯಕ್ರಮಗಳು ಜನರನ್ನು ಪರಂಪರೆಯೊಂದಿಗೆ ಬೆಸೆಯುತ್ತವೆ. ಐತಿಹಾಸಿಕ ನೆಲೆಗಳು ಮತ್ತು ಪುರಾತನ ಸ್ಮಾರಕಗಳು ಯುವಪೀಳಿಗೆಯಲ್ಲಿ ನಾಡಿನ ಇತಿಹಾಸದ ಬಗ್ಗೆ ಆಸಕ್ತಿ ಮೂಡಿಸಲು ನೆರವಾಗುತ್ತವೆ.

ಆಚಾರ್ಯ ಶ್ರೀ ರಾಕುಂ ಶಾಲೆಯ ಸಂಸ್ಥಾಪನಾ ದಿನಾಚರಣೆ ಮತ್ತು ಸ್ವಾಮೀ ರಾಕುಂಜೀ ಮಹಾರಾಜ್ ಅವರ ಜನ್ಮದಿನಾಚರಣೆ

ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ಇಂದಿರಾನಗರದಲ್ಲಿರುವ ಆಚಾರ್ಯ ಶ್ರೀ ರಾಕುಂ ಅಂಧರ ಶಾಲೆಯ ಸಂಸ್ಥಾಪನಾ ದಿನಾಚರಣೆ ಮತ್ತು ಸ್ವಾಮಿ ರಾಕುಂಜೀ ಮಹಾರಾಜ್ ರವರ ಹುಟ್ಟುಹಬ್ಬದ ದಿನಾಚರಣೆ.

ಸ್ವಾಮಿ ರಾಕುಂಜೀ ಮಹಾರಾಜ್ ರವರಿಗೆ ಶಾಲೆಯ ಮಕ್ಕಳು ಸನ್ಮಾನಿಸಿ, ಶುಭಕೋರಿದರು. ರಾಜಕೀಯ ಗಣ್ಯರು, ಶಾಲೆಯ ಶಿಕ್ಷಕರು ಮತ್ತು ಸಾರ್ವಜನಿಕರು ಭಾಗವಹಿಸಿದ್ದರು.

ಸ್ವಾಮಿ ರಾಕುಂಜೀ ಮಹಾರಾಜ್ ರವರು ಮಾತನಾಡಿ ಮಕ್ಕಳು ದೇವರ ಸಮಾನ. ಮಕ್ಕಳಿಗೆ ಶಿಕ್ಷಣ ಮತ್ತು ಉತ್ತಮ ಆರೋಗ್ಯ ಸಿಗಬೇಕು ಎಂಬ ಉದ್ದೇಶದಿಂದ ಆಚಾರ್ಯ ಶ್ರೀ ರಾಕುಂ ಅಂಧರ ಶಾಲೆ ಇಂದಿರಾನಗರ ಮತ್ತು ಆಚಾರ್ಯ ರಾಕುಂ ಶಾಲೆ ದೇವನಹಳ್ಳಿಯಲ್ಲಿ ಪ್ರಾರಂಭಿಸಲಾಗಿದೆ. ನರ್ಸರಿಯಿಂದ ಮಾಸ್ಟರ್ ಪದವಿವರೆಗೆ ಶಿಕ್ಷಣ ಮತ್ತು ವಸತಿ ಎಲ್ಲವೂ ಉಚಿತ ಮಕ್ಕಳಿಗೆ ಬೇಕಾದ ಊಟ, ಬಟ್ಟೆ, ದಿನಬಳಕೆ ವಸ್ತುಗಳು ಉಚಿತವಾಗಿ ನೀಡಲಾಗುತ್ತದೆ. ಶಾಲೆಯಲ್ಲಿ ವಿದ್ಯಾಭ್ಯಾಸದ ಜೊತೆಯಲ್ಲಿ ಯೋಗ, ಆಧ್ಯಾತ್ಮ, ಕರಾಟೆ ಮತ್ತು ಕ್ರೀಡಾ ಚಟುವಟಿಕೆಗಳನ್ನು ಕಲಿಸಲಾಗುತ್ತದೆ. ಉತ್ತಮ ಶಿಕ್ಷಣ ಪಡೆದ ಮಕ್ಕಳಿಗೆ ಇಲ್ಲಿಯೇ ಉದ್ಯೋಗ ಅವಕಾಶ ಸಿಗುತ್ತದೆ.ನಮ್ಮ ಎರಡು ಶಾಲೆಯಲ್ಲಿ 2000ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿ, ವಿದ್ಯಾರ್ಥಿನಿಯರು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಮಕ್ಕಳು ಶಿಕ್ಷಣದಿಂದ ವಂಚಿತರಾಗಬಾರದು ಪ್ರತಿಯೊಂದು ಮಗುವಿಗೆ ಶಿಕ್ಷಣ ಸಿಗಬೇಕು ಮತ್ತು ಆರೋಗ್ಯವಂತ ಮಕ್ಕಳ ಮುಂದೆ ದೇಶದ ಭವಿಷ್ಯ ಎಂದು ಹೇಳಿದರು.

ಶಾಸಕ ಬಿ.ಪಿ. ಹರೀಶ್ ವಿರುದ್ಧ ಎಂ.ಪಿ.ರೇಣುಕಾಚಾರ್ಯ ವಾಗ್ದಾಳಿ

ಎಂಎಲ್‌ಸಿ ಚುನಾವಣೆಯಲ್ಲಿ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಮುಂದೆ ನಾವೇ ಗೆಲ್ಲುತ್ತೇ ಅಂತ ಹೇಳಿದ್ದೇವೆ. ಇಲ್ಲಿ ಯಾವುದೇ ಹೊಂದಾಣಿಕೆ ಇಲ್ಲ

• **ಉದಯವಾಹಿನಿ, ದಾವಣಗೆರೆ:**

ಬೆಣ್ಣೆನಗರಿಯ ಬಿಜೆಪಿಯಲ್ಲಿ ಭಿನ್ನಮತ ಮುಂದುವರೆದಂತೆ ಕಾಣುತ್ತಿದೆ. ಹರಿಹರ ಶಾಸಕ ಬಿ.ಪಿ.ಹರೀಶ್ ಅವರ ಟೀಕೆಗಳಿಗೆ ಮಾಜಿ ಸಚಿವ ರೇಣುಕಾಚಾರ್ಯ ಅವರು ಪ್ರತಿಕ್ರಿಯಿಸಿ, 'ಬಿ.ಎಸ್.ಯಡಿಯೂರಪ್ಪ ಅವರು ನನಗೆ ತಂದೆಯ ಸಮಾನ. ಇವನು, ನಾನು ಯಡಿಯೂರಪ್ಪ ಅವರಿಗೆ ಬ್ಲಾಕ್‌ಮೇಲ್ ಮಾಡಿದ್ದೇನೆ ಎಂದು ಹೇಳುತ್ತಾನೆ. ಅವನದು ಹೊಲಸು ಬಾಯಿ' ಎಂದು ಏಕವಚನದಲ್ಲಿ ಆಕ್ರೋಶ ವ್ಯಕ್ತಪಡಿಸಿದ್ದಾರೆ. ನಗರದಲ್ಲಿ ಮಾಧ್ಯಮದವರಿಗೆ ಪ್ರತಿಕ್ರಿಯಿಸಿದ ಎಂ.ಪಿ.ರೇಣುಕಾಚಾರ್ಯ, ಶಾಸಕ

1 : ಸಚಿವರ, ನಮ್ಮ ಭೇಟಿ ಆಕಸ್ಮಿಕ ಅಷ್ಟೆ
2 : ಪ್ರೀತಿ-ವಿಶ್ವಾಸದಲ್ಲಿ ಭೇಟಿ ಆಗಿದೆ,ತಪ್ಪಲ್ಲ
3 : ಹರಿಹರದ ನಾಮಿನೇಷನ್ ಮಾಡಿಸಿದ್ದೆ

ಬಿ.ಪಿ. ಹರೀಶ್ ವಿರುದ್ಧ ವಾಗ್ದಾಳಿ ನಡೆಸುತ್ತಾ, 2009ರಲ್ಲಿ ಹೈದರಾಬಾದ್ ಹೋಟೆಲ್‌ಗೆ ಬಂದು ನೀನು ಎಷ್ಟು ಹಣ ಎಣಿಸಿಕೊಂಡಿದ್ದೀಯಾ. ಅದರ ಲೆಕ್ಕ ಹೇಳಬೇಕಾ ಅದೇ ಹಣದಿಂದ ತಾನೇ ಬೆಂಗಳೂರಿನಲ್ಲಿ ಜಮೀನು ಖರೀದಿ ಮಾಡಿದ್ದು ಎಂದು ಆರೋಪಿಸಿದ ಅವರು, ಆ ಜಮೀನಿನ ದಾಖಲೆ ಬಿಡುಗಡೆ ಮಾಡಬೇಕಾ ಎಂದು ಕೆಂಡಕಾರಿದ್ದಾರೆ.

2018ರಲ್ಲಿ ಸೋತಾಗ 2023ರವರೆಗೂ ನನ್ನ ಮನೆಯಲ್ಲೇ ನೀನು ಇದ್ದೆ. ನನ್ನದೇ ಕಾರು ಹಾಗೂ ಆಫೀಸ್ ಬಳಸಿದ್ದೆ. ಇದೇ ದಾವಣಗೆರೆ ಸರ್ಕ್ಯೂಟ್ ಹೌಸ್‌ನಲ್ಲಿ ನನಗೆ ಸಿದ್ದೇಶಣ್ಣ ಬಹಳ ತೊಂದರೆ ಕೊಡುತ್ತಿದ್ದಾರೆ, ನನ್ನ ಕೆಲಸಗಳು ಆಗುತ್ತಿಲ್ಲ ಎಂದಾಗ ಹರಿಹರದ ನಾಮಿನೇಷನ್ ನಾನು ಮಾಡಿಸಿದ್ದೆ. ಮರೆತು ಬಿಟ್ಟೆಯಲ್ಲಾ ಹರೀಶಣ್ಣ ಎಂದು ಹಳೆಯ ಘಟನೆಗಳನ್ನು ಮಾಜಿ ಸಚಿವರು ನೆನಪಿಸಿಕೊಂಡು ಶಾಸಕ ಹರೀಶ್ ವಿರುದ್ಧ ಕಿಡಿಕಾರಿದರು. ಎಂಎಲ್‌ಸಿ ಚುನಾವಣೆಯಲ್ಲಿ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಮುಂದೆ ನಾವೇ ಗೆಲ್ಲುತ್ತೇ ಅಂತ ಹೇಳಿದ್ದೇವೆ. ಇಲ್ಲಿ ಯಾವುದೇ ಹೊಂದಾಣಿಕೆ ಇಲ್ಲ. ಸಚಿವರ, ನಮ್ಮ ಭೇಟಿ ಆಕಸ್ಮಿಕ ಅಷ್ಟೆ. ಪ್ರೀತಿ-ವಿಶ್ವಾಸದಲ್ಲಿ ಭೇಟಿ ಆಗಿದೆ, ಅದು ತಪ್ಪಲ್ಲ. ಆದರೆ ಇದು ಹೊಂದಾಣಿಕೆ ಅಲ್ಲ. ಇದರ ಬಗ್ಗೆ ವರಿಷ್ಠರಿಗೆ ದೂರು ನೀಡಿದರೆ, ಉತ್ತರ ಕೊಡುತ್ತೇವೆ.

ಉದಯವಾಹಿನಿ ಚಿತ್ರ

> ಈ ವಿಧಾನ ಪರಿಷತ್ ಚುನಾವಣೆಯಲ್ಲಿ ಬಿಜೆಪಿ ಒಂದೇ ಟೀಮ್. ಆದರೆ ಬಿಜೆಪಿ ಬಿ ಟೀಮ್ ಶಾಮನೂರು ಮನೆತನದವರು. ಶಾಮನೂರು ಮನೆತನದವರು ಚುನಾವಣೆಗೆ ನಿಂತರೆ ಲಗಾನ್ ಟೀಮ್ ಬೆಂಬಲ. ಲಗಾನ್ ಟೀಮ್ ಅಭ್ಯರ್ಥಿ ನಿಂತಾಗ ಶಾಮನೂರು ಮನೆತನ ಬೆಂಬಲ ಕೊಡುತ್ತದೆ ಎಂದು ಆರೋಪಿಸಿದ್ದರು. -ಎಂ.ಪಿ.ರೇಣುಕಾಚಾರ್ಯ

> ಎಂ.ಪಿ.ರೇಣುಕಾಚಾರ್ಯ ಅವರ ಮನೆಗೆ ಹೋಗಿ ನಾನು ಊಟ ಮಾಡಿದ್ದೇನೆ ಎಂದು ಹೇಳುತ್ತಾರೆ. ಎಂ.ಪಿ.ರೇಣುಕಾಚಾರ್ಯ ಮಂತ್ರಿ ಆಗಲು ಮುಖ್ಯ ಕಾರಣ ನಾನು. ಇವತ್ತು ನನಗೆ ಇಂತಹ ವ್ಯಕ್ತಿಯನ್ನು ಮಂತ್ರಿ ಮಾಡಿದ್ದೇನಲ್ಲ ಎನ್ನುವ ನೋವಿದೆ ಎಂದು ಹೇಳಿದ್ದರು. -ಶಾಸಕ ಬಿ.ಪಿ. ಹರೀಶ್

ಆದರೆ ಮೀಡಿಯಾ ಮುಂದೆ ಹೇಳಿ ಪ್ರಚಾರ ಮಾಡಿದ್ದೀಯಾ. ವೈಯುಕ್ತಿಕ ವಿಚಾರ ಕೆದಕ್ಕಿದ್ದೀಯಾ, ಹುಷಾರ್ ಎಂದು ಎಂ.ಪಿ. ರೇಣುಕಾಚಾರ್ಯ ಎಚ್ಚರಿಕೆ ನೀಡಿದರು.

ಜಿಲ್ಲಾಮಂತ್ರಿ ಕಾಲಿಗೆ ಬೀಳುತ್ತಾರೆ ಎಂದಿದ್ದ ಶಾಸಕ ಬಿ.ಪಿ.ಹರೀಶ್: ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್.ಮಲ್ಲಿಕಾರ್ಜುನ ಅವರಿಗೆ ಸಾರ್ವಜನಿಕವಾಗಿ ಕಾಲಿಗೆ ಬೀಳುತ್ತಾರೆ. ಸಂಸದೆ ಪ್ರಭಾ ಮಲ್ಲಿಕಾರ್ಜುನ ಅವರ ಮುಂದೆಯೂ ಸಹಕಾರ ಇರಲಿ ಅಂತಾರೆ ಎಂದು ಆಗ್ನೇಯ ಪದವೀಧರರ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ವಿರುದ್ಧ ಶಾಸಕ ಬಿ.ಪಿ.ಹರೀಶ್ ವಾಗ್ದಾಳಿ ನಡೆಸಿದ್ದರು.ಮಾಜಿ ಸಚಿವ ಎಂ.ಪಿ.ರೇಣುಕಾಚಾರ್ಯ ಹಾಗೂ ಸಚಿವ ಎಸ್.ಎಸ್. ಮಲ್ಲಿಕಾರ್ಜುನ ಅವರು ಎಂಎಲ್‌ಸಿ ಚುನಾವಣೆಯಲ್ಲಿ ಮುಖಾಮುಖಿಯಾದಾಗ, ರೇಣುಕಾಚಾರ್ಯ ನೋಡಿದ ತಕ್ಷಣ ಸಚಿವರಿಗೆ ಏನ್ ಆನಂದ ರೀ.. ಬಿಜೆಪಿ ಎ ಟೀಮ್, ಬಿ ಟೀಮ್ ಅಂತಾ ಮಲ್ಲಿಕಾರ್ಜುನ ಹೇಳಿದ್ದಾರೆ.

ದಾವಣಗೆರೆಯಲ್ಲಿ ಬಿಜೆಪಿ ಕಟ್ಟಿದ್ದೇನೆ ಎನ್ನುವ ಮಹಾಶಯ ಕಾಂಗ್ರೆಸ್‌ನ ಬಿ ಟೀಮ್ ಎಂದು ಪರೋಕ್ಷವಾಗಿ ಮಾಜಿ ಸಚಿವ ಎಸ್.ಎ.ರವೀಂದ್ರನಾಥ ವಿರುದ್ಧ ಹರೀಶ್ ಆರೋಪ ಮಾಡಿದ್ದರು.

ಮಿನಿ ನ್ಯೂಸ್

ಗಣಪತಿ ಭಟ್ಟಗೆ 'ಮಹಾಬಲ' ಪ್ರಶಸ್ತಿ ಪ್ರದಾನ

ಉದಯವಾಹಿನಿ ಚಿತ್ರ

• **ಉದಯವಾಹಿನಿ, ಹೊನ್ನಾವರ:**

'ಯಕ್ಷಗಾನ ಭಾಗವತರು ರಾಗ ಹಾಗೂ ಲಯದ ಸ್ಪಷ್ಟತೆಯೊಂದಿಗೆ ಹಾಡುವ ಪದ್ಯಗಳು ರಂಗದಲ್ಲಿ ಮುಮ್ಮೇಳದ ಕಲಾವಿದರ ಭಾವಾಭಿನಯ ಹಾಗೂ ನೃತ್ಯಕ್ಕೆ ಸ್ಫೂರ್ತಿ ಕೊಡುತ್ತವೆ. ಯಕ್ಷಗಾನ ಹಾಗೂ ಶಾಸ್ತ್ರೀಯ ಸಂಗೀತದ ನಡುವೆ ನವಿರಾದ ಸಂಬಂಧವಿದೆ' ಎಂದು ಯಕ್ಷಗಾನ ಸಾಹಿತ್ಯ ವಿಮರ್ಶಕ ಸಿ.ಆನಂದರಾಮ ಉಪಾಧ್ಯ ಅಭಿಪ್ರಾಯಪಟ್ಟರು. ಡಾ.ಕೆರೆಮನೆ ಮಹಾಬಲ ಹೆಗಡೆ ರಂಗಪ್ರತಿಷ್ಠಾನದ ವತಿಯಿಂದ ಗುಣವಂತೆಯಲ್ಲಿ ನಡೆದ 'ಕೆರೆಮನೆ ಮಹಾಬಲ ಹೆಗಡೆ ಹಾಗೂ ರಾಮ ಹೆಗಡೆ ಸಂಸ್ಮರಣೆ' ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಹಿಂದುಸ್ತಾನಿ ಗಾಯಕ ಪಂ.ಗಣಪತಿ ಭಟ್ಟ ಹಾಸಣಗಿ 'ಮಹಾಬಲ' ಪ್ರಶಸ್ತಿ ಸ್ವೀಕರಿಸಿ ಮಾತನಾಡಿದರು. ತಬಲಾ ಕಲಾವಿದ ಗೋಪಾಲಕೃಷ್ಣ ಹೆಗಡೆ ಕಲ್ಬಾಗ, ಕೃಷ್ಣಮೂರ್ತಿ ಭಟ್ಟ ಶಿವಾನಿ, ನರಸಿಂಹಮೂರ್ತಿ ಪಂಡಿತ, ಪ್ರತಿಷ್ಠಾನದ ಅಧ್ಯಕ್ಷೆ ನಾಗವೇಣಿ ಹೆಗಡೆ, ಕಾರ್ಯದರ್ಶಿ ಎಲ್.ಎಂ.ಹೆಗಡೆ, ಗಾಯಕ ಪರಮೇಶ್ವರ ಹೆಗಡೆ ಕಲ್ಬಾಗ, ಎನ್.ಜಿ.ಭಟ್ಟ ಮಾಳ್ಕೊಡ, ಮಹಾಬಲ ಹೆಗಡೆ ಮೊಮ್ಮಕ್ಕಳಾದ ಶಶಾಂಕ, ಕಿಶೋರ ಭಾಗವಹಿಸಿದ್ದರು. 'ಕೀಚಕ ವಧೆ' ಪ್ರಸಂಗದ ಯಕ್ಷಗಾನ ಪ್ರದರ್ಶನ ನಡೆಯಿತು.

ತೊಡಿಕಾನದಲ್ಲಿ ಮರಿಯಾನೆ ಸಾವು

• **ಉದಯವಾಹಿನಿ, ಸುಳ್ಯ:**

ತೊಡಿಕಾನ ಗ್ರಾಮದ ಹರ್ಲಡ್ಕ ಎಂಬಲ್ಲಿ ಆನೆ ಮರಿಯೊಂದು ಸಾವಿಗೀಡಾಗಿರುವ ಘಟನೆ ನಡೆದಿದೆ. ದಕ್ಷಿಣ ಕನ್ನಡ ಮತ್ತು ಕೊಡಗು ಗಡಿ ಭಾಗವಾದ ಹರ್ಲಡ್ಕದ ಚಂದ್ರಶೇಖರ ಎಂಬವರ ತೋಟದಲ್ಲಿ ಒಂದು ವರ್ಷದ ಪ್ರಾಯದ ಆನೆ ಮರಿ ಸಾವಿಗೀಡಾಗಿದೆ. ಭಾಗಮಂಡಲ ಮೀಸಲು ಅರಣ್ಯದಿಂದ ಆನೆಗಳ ಹಿಂಡು ಚಂದ್ರಶೇಖರ ಅವರ ರಬ್ಬರ್ ತೋಟ ಹಾಗೂ ಇತರೆ ಕೃಷಿ ಪ್ರದೇಶಕ್ಕೆ ದಾಳಿ ಇಟ್ಟಿತ್ತು. ಆನೆ ದಾಳಿಯಿಂದ ಕಾಫಿ, ಬಾಳೆ ಕೃಷಿ ನಾಶವಾಗಿದೆ. ತೋಟದ ಒಂದು ಬದಿ ಎತ್ತರದ ಗುಡ್ಡ ಪ್ರದೇಶವಾದ ಕಾರಣ ಗುಡ್ಡವನ್ನು ಹತ್ತಿ ಆನೆಗಳು ವಾಪಾಸು ಕಾಡಿಗೆ ಹೋಗುವಾಗ ಮರಿಯಾನೆಯು ಜಾರಿ ಬಿದ್ದಿರುವ ಸಾಧ್ಯತೆ ಇದೆ ಅಥವಾ ದೊಡ್ಡ ಆನೆಗಳ ಒಡೆತಕ್ಕೆ ಸಿಕ್ಕಿ ಮರಿಯಾನೆ ಸಾವಿಗೀಡಾಗಿದೆ ಎಂದು ಶಂಕೆ ವ್ಯಕ್ತವಾಗಿದೆ. ಸ್ಥಳಕ್ಕೆ ಸುಳ್ಯ ಅರಣ್ಯ ಇಲಾಖೆ ಎಸಿಎಫ್ ಪ್ರಶಾಂತ್ ಪೈ, ಸುಳ್ಯ ವಲಯ ಅರಣ್ಯಾಧಿಕಾರಿ ನಿರಂಜನ್ ಶೆಟ್ಟಿ, ತಾಲ್ಲೂಕು ಪಶು ವೈದ್ಯಾಧಿಕಾರಿ ಡಾ. ನಿತೀನ್ ಪ್ರಭು ಮತ್ತು ಸಿಬ್ಬಂದಿಗಳು ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಿದ್ದಾರೆ. ಮಹಜರು ನಡೆಸಿದ ಬಳಿಕ ಮರಿಯಾನೆಯ ಸಾವಿಗೆ ನಿಖರ ಕಾರಣ ತಿಳಿದು ಬರಲಿದೆ.

ಉದಯವಾಹಿನಿ ಚಿತ್ರ

ಹೆಗ್ಗಡೆಯವರ ಸೇವೆ-ಸಾಧನೆ ವಿಶ್ವಮಾನ್ಯವಾಗಿದೆ.

• **ಉದಯವಾಹಿನಿ, ಉಜಿರೆ:**

ಧರ್ಮಸ್ಥಳದ ಭವ್ಯ ಇತಿಹಾಸ ಮತ್ತು ಪರಂಪರೆಗೆ ಅನುಗುಣವಾಗಿ ಅನ್ನದಾನ, ವಿದ್ಯಾದಾನ, ಅಭಯದಾನ ಮತ್ತು ಔಷಧದಾನ ಎಂಬ ಚತುರ್ವಿಧ ದಾನ ಪರಂಪರೆಯನ್ನು ಉಳಿಸಿ, ಬೆಳೆಸಿಕೊಂಡು ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ ನಿಸ್ವಾರ್ಥ ಮನೋಭಾವದಿಂದ ಸಾತ್ವಿಕತ್ಯಾಗದೊಂದಿಗೆ ಬದ್ಧತೆಯಿಂದ ಕರ್ತವ್ಯ ನಿರ್ವಹಿಸುತ್ತಾ ಸಮಾಜದ ಸರ್ವರ ಕಲ್ಯಾಣಕ್ಕಾಗಿ ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆಯವರು ಮಾಡುತ್ತಿರುವ ಸೇವಾಕಾರ್ಯ ಹಾಗೂ ಸಾಧನೆ ಆದರ್ಶ ಹಾಗೂ ಅನುಕರಣೀಯವಾಗಿದ್ದು ವಿಶ್ವಮಾನ್ಯವಾಗಿದೆ ಎಂದು ಕರ್ಣಾಟಕ ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕ ಹಾಗೂ ಸಿ.ಇ.ಒ. ರಾಘವೇಂದ್ರ ಶ್ರೀನಿವಾಸ ಭಟ್ ಹೇಳಿದರು.

ಮಲ್ಲಿಕಾರ್ಜುನ ಖರ್ಗೆ ಪ್ರಧಾನಿ ಮೋದಿಯವರ ಕ್ಷಮೆಯಾಚಿಸಲಿ

• **ಉದಯವಾಹಿನಿ, ಬೀದರ:**

ಉದಯವಾಹಿನಿ ಚಿತ್ರ

ಕಾಂಗ್ರೆಸ್ ಪಕ್ಷದ ರಾಷ್ಟ್ರೀಯ ಅಧ್ಯಕ್ಷರಾದ ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ಪಾಟ್ನಾದಲ್ಲಿ ಅವರ ಪಕ್ಷದ ಸಭೆಯಲ್ಲಿ ದೇಶದ ಪ್ರಧಾನ ಮಂತ್ರಿಗಳಾದ ಸನ್ಮಾನ್ಯ ಶ್ರೀ ನರೇಂದ್ರ ಮೋದಿಜೀಯವರ ತಂದೆಯ ಕುರಿತು ನೀಡಿರುವ ಆಕ್ಷೇಪಾರ್ಹ ಹೇಳಿಕೆಯನ್ನು ಕೇಂದ್ರದ ಮಾಜಿ ಸಚಿವ ಭಗವಂತ ಖೂಬಾ ಖಂಡಿಸಿದ್ದಾರೆ ಮತ್ತು ಮಲ್ಲಿಕಾರ್ಜುನ ಖರ್ಗೆ ಅವರು ದೇಶದ ಪ್ರಧಾನಿಗಳಿಗೆ ನಿಂದಿಸಿರುವುದು, ದೇಶದ ಜನತೆಗೆ ಮಾಡಿರುವ ಅವಮಾನವಾಗಿದೆ, ಕೂಡಲೆ ಅವರು ದೇಶದ ಜನತೆಗೆ ಮತ್ತು ಪ್ರಧಾನಿಗಳಿಗೆ ಕ್ಷಮೆಯಾಚಿಸಬೇಕೆಂದು ಆಗ್ರಹಿಸಿದ್ದಾರೆ.

ಮಲ್ಲಿಕಾರ್ಜುನ ಖರ್ಗೆಯವರು ಹಿರಿಯರಾಗಿ, ಹತಾಷಾ ಭಾವನೆಯಿಂದ ಇಂತಹ ನೀಚ ಹೇಳಿಕೆಗಳು ನೀಡುವುದರ ಮೂಲಕ ದೇಶದಲ್ಲಿ ಅರಾಜಕತೆ ಸೃಷ್ಟಿಸುವ ಪ್ರಯತ್ನ ಮಾಡುತ್ತಿದ್ದಾರೆ ಇದು ಸರಿಯಲ್ಲಾ, ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಮೇಲಿಂದ ಮೇಲೆ ಹೊರದೇಶಕ್ಕೆ ಪ್ರಯಾಣಿಸುತಾ, ಒಬ್ಬ ಗಂಭೀರತೆ ಇಲ್ಲದ ನಾಯಕ ಆಗಿದ್ದಾರೆ ಮತ್ತು ಮುಂದೆಯೂ ಪ್ರಧಾನಿಯಾಗಿ ನರೇಂದ್ರ ಮೋದಿಯವರೆ ಮುಂದುವರೆಯಲಿದ್ದಾರೆ ಎಂದು ಕಾಂಗ್ರೆಸ್ ಪಕ್ಷದ ಸಭೆಯಲ್ಲಿಯೆ ಕಾಂಗ್ರೆಸ್ ಕಾರ್ಯಕರ್ತ ತನ್ನ ಮನದಾಳದ ಮಾತು ಹೇಳಿದ್ದಾರೆ, ಇದರಿಂದ ಅವಮಾನಿತರಾದ ಖರ್ಗೆಯವರು ಅಸಹನೆಯಿಂದ ಇಂತಹ ನೀಚ ಹೇಳಿಕೆ ನೀಡಿರುವುದು ಶೋಭೆ ತರುವುದಿಲ್ಲಾ ಎಂದು ಖೂಬಾ ಆಕ್ರೋಷ ಹೊರಹಾಕಿದ್ದಾರೆ.

ರಾಷ್ಟ್ರೀಯ ಅಧ್ಯಕ್ಷ ಸ್ಥಾನದಲ್ಲಿದ್ದು, ಇಂತಹ ನಿಂದನೆಗಳ ಮೂಲಕ, ಅವರ ಪಕ್ಷದವರಿಗೆ ಮತ್ತು ದೇಶದ್ರೊಹಿಗಳ ಜೊತೆ ನಿಲ್ಲುತ್ತಿರುವ ಕೆಲವು ಸಂಘಟನೆಗಳಿಗೆ ಪ್ರಚೋದನೆ ನೀಡುವ ಕೆಲಸ ಮಾಡುತ್ತಿರುವಂತಿದೆ ಎಂದಿದ್ದಾರೆ, ಆದರೆ ಇಂತಹ ಹೇಳಿಕೆಗಳಿಂದ ಖರ್ಗೆಯವರು ಏನು ಸಾಧಿಸುವುದಿಲ್ಲಾ, ಹೊರತಾಗಿ ಸಮಾಜದ ಕಣ್ಣಲ್ಲಿ ಇನ್ನಷ್ಟು ಕೆಳಗೆ ಬೀಳಲಿದ್ದಾರೆ, ಖರ್ಗೆಯವರು ತನ್ನ ಇದೆ ಚಾಳಿ ಮುಂದುವರೆಸಿದರೆ ಭವಿಷ್ಯದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರದು ಎಂದು ತಿಳಿಸಿದ್ದಾರೆ.

ರಾಮಾಯಣದ ಮೂಲಕ ಬದುಕಿನ ಆದರ್ಶಗಳನ್ನು ಸಾರಿದ ಮಹರ್ಷಿ ವಾಲ್ಮೀಕಿ ಸದಾ ಸ್ಮರಣೀಯರು : ಸುನೀಲ್ ಮದ್ದಿನ

• **ಉದಯವಾಹಿನಿ, ಕೊಲ್ಹಾರ:**

ರಾಮಾಯಣ ಮಹಾಕಾವ್ಯದ ಮೂಲಕ ಬದುಕಿನ ಆದರ್ಶಗಳನ್ನು ಕಟ್ಟಿಕೊಟ್ಟ ಮಹರ್ಷಿ ವಾಲ್ಮೀಕಿಯವರು ಸದಾ ಕಾಲ ಸ್ಮರಣೀಯರಾಗಿದ್ದಾರೆ ಎಂದು ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿ ಸುನೀಲ್ ಮದ್ದಿನ ಹೇಳಿದರು. ಪಟ್ಟಣದ ತಹಶೀಲ್ದಾರ್ ಕಚೇರಿಯಲ್ಲಿ ತಾಲ್ಲೂಕು ಆಡಳಿತದ ವತಿಯಿಂದ ಹಮ್ಮಿಕೊಂಡಿದ್ದ ಶ್ರೀ ಮಹರ್ಷಿ ವಾಲ್ಮೀಕಿ ಜಯಂತ್ಯುತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಬೇಟೆಗಾರನಾಗಿ ಜೀವನ ಸಾಗಿಸುತ್ತಿದ್ದ ರತ್ನಾಕರರು ತಮ್ಮ ತಪಸ್ಸು ಹಾಗೂ ಆಧ್ಯಾತ್ಮಿಕ ಸಾಧನೆಯ ಫಲವಾಗಿ ಮಹರ್ಷಿ ವಾಲ್ಮೀಕಿಯಾಗಿ ರೂಪಾಂತರಗೊಂಡು, ಜಗತ್ತಿಗೆ ರಾಮಾಯಣ ಎಂಬ ವಿಶ್ವಮಾನ್ಯ ಮಹಾಕಾವ್ಯವನ್ನು ನೀಡಿದ್ದಾರೆ. ಈ ಮಹಾಕಾವ್ಯದ ಮೂಲಕ ಮಾನವ ಜೀವನದ ಸೌಂದರ್ಯ, ಸತ್ಯ, ಧರ್ಮ, ನ್ಯಾಯ ಹಾಗೂ ಮಾನವೀಯ ಮೌಲ್ಯಗಳನ್ನು ಸಾರಿದ್ದಾರೆ. ಆದ್ದರಿಂದ ಪ್ರತಿಯೊಬ್ಬರೂ ಮಹರ್ಷಿ ವಾಲ್ಮೀಕಿಯವರ ತತ್ವಾದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ತಿಳಿಸಿದ್ದರು ಈ ವೇಳೆಯಲ್ಲಿ ದಯಾನಂದ ಹಿರೇಮಠ, ಅಖಿಲ್ ಗೌಡ ಪಾಟೀಲ, ಅಧಿಕಾರಿಗಳಾದ ಎಂ. ವೆಂಕಟೇಶ, ವಿ.ಎಂ. ಪುರೋಹಿತ, ಕೆ.ಎನ್. ನದಾಫ್, ಹುಡೇದ, ಸೈಫಾನ್ ಕೊರ್ತಿ ಹಾಗೂ ವಾಲ್ಮೀಕಿ ಸಮಾಜದ ಮುಖಂಡರಾದ ಭೀಮಣ್ಣ ದಳವಾಯಿ, ಶಿವಾನಂದ ಇರಗಾರ,

ಉದಯವಾಹಿನಿ ಚಿತ್ರ

ಗೂಳಪ್ಪ ವಾಲಿಕಾರ, ಜಗದೀಶ ದಳವಾಯಿ, ವಿಠ್ಠಲ ಬೇವೂರ, ಲಕ್ಕಪ್ಪ ದಳವಾಯಿ, ಮಲ್ಲಿಕಾರ್ಜುನ ನಾಯ್ಕೋಡಿ, ಈರಣ್ಣ ತಳವಾರ, ಚನ್ನಬಸಪ್ಪ ತೆಗ್ಗಿ, ಧರ್ಮದರ್ಶಿ ಹಾಗೂ ಸಂಗಪ್ಪ ಚಿತ್ತಾಪೂರ ಸೇರಿದಂತೆ ಹಲವರು ಉಪಸ್ಥಿತರಿದ್ದರು. ಸಮಾಜ ಕಲ್ಯಾಣ ಇಲಾಖೆಯ ಮನು ಪತ್ತಾರ ಕಲಕೇರಿ ಕಾರ್ಯಕ್ರಮ ನಿರೂಪಿಸಿದರು.

ಮಹರ್ಷಿ ವಾಲ್ಮೀಕಿ ಭಾವಚಿತ್ರದ ಮೆರವಣಿಗೆ

ಜಯಂತ್ಯುತ್ಸವದ ಅಂಗವಾಗಿ ಮಹರ್ಷಿ ವಾಲ್ಮೀಕಿಯವರ ಭಾವಚಿತ್ರದ ಮೆರವಣಿಗೆಯನ್ನು ಪಟ್ಟಣದ ದಿಗಂಬರೇಶ್ವರ ಮಠದಿಂದ ಆರಂಭಿಸಲಾಯಿತು. ಮೆರವಣಿಗೆಯು ಪಟ್ಟಣದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ, ಬಳಿಕ ದಿಗಂಬರೇಶ್ವರ ಮಠದ ಆವರಣದಲ್ಲಿ ಮುಕ್ತಾಯಗೊಂಡಿತು. ಮೆರವಣಿಗೆಯಲ್ಲಿ ಸಮಾಜದ ಮುಖಂಡರು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು.

ಕಾಳಸಂತೆಗೆ ಸಾಗುತ್ತಿದ್ದ 140 ಕ್ವಿಂಟಲ್ ಪಡಿತರ ಅಕ್ಕಿ ಜಪ್ತಿ

• **ಉದಯವಾಹಿನಿ, ಅಫಜಲಪುರ:**

ಬಡವರ ಹಸಿವು ನೀಗಿಸಲು ಸರ್ಕಾರದಿಂದ ಹಂಚಿಕೆ ಮಾಡಲಾಗುವ ಪಡಿತರ ಅಕ್ಕಿಯನ್ನು ಕಡಿಮೆ ಬೆಲೆಗೆ ಖರೀದಿಸಿ, ಸಂಗ್ರಹಿಸಿ ಹೆಚ್ಚಿನ ಬೆಲೆಗೆ ಮಾರಾಟ ಮಾಡುವ ಉದ್ದೇಶದಿಂದ ಮಹಾರಾಷ್ಟ್ರದ ಧುದನಿ ಕಡೆಗೆ ಸಾಗಿಸಲಾಗುತ್ತಿದೆ ಎಂಬ ಖಚಿತ ಮಾಹಿತಿ ಮೇರೆಗೆ ಆಹಾರ ನಿರೀಕ್ಷಕ ಹರಿದಾಸ ಚೋಪಡೆ ಹಾಗೂ ಅಫಜಲಪುರ ಪೊಲೀಸರು ಜಂಟಿ ದಾಳಿ ನಡೆಸಿ ಅಕ್ರಮವಾಗಿ ಸಾಗಿಸಲಾಗುತ್ತಿದ್ದ ಅಕ್ಕಿಯನ್ನು ವಶಪಡಿಸಿಕೊಂಡಿದ್ದಾರೆ. ಸರ್ಕಾರ ಬಡ ಮತ್ತು ಅರ್ಹ ಕುಟುಂಬಗಳಿಗೆ ಆಹಾರ ಭದ್ರತೆ ಒದಗಿಸುವ ಉದ್ದೇಶದಿಂದ ಪಡಿತರ ಅಕ್ಕಿಯನ್ನು ವಿತರಿಸುತ್ತಿದೆ. ಆದರೆ, ಬಡವರ ಪಾಲಾಗಬೇಕಾದ ಅಕ್ಕಿಯನ್ನು ಕಡಿಮೆ ಬೆಲೆಗೆ ಖರೀದಿಸಿ, ಲಾಭದ ಉದ್ದೇಶದಿಂದ ಸಂಗ್ರಹಿಸಿ ಬೇರೆಡೆ ಹೆಚ್ಚಿನ ಬೆಲೆಗೆ ಮಾರಾಟ ಮಾಡಲು ಅಕ್ಕಿ ವಾಹನ ಸಾಗಿಸಲಾಗುತ್ತಿದೆ ಎಂಬ ಮಾಹಿತಿ ಅಧಿಕಾರಿಗಳಿಗೆ ಲಭಿಸಿತ್ತು ಎನ್ನಲಾಗಿದೆ. ಈ ಹಿನ್ನೆಲೆಯಲ್ಲಿ ಕಾರ್ಯಾಚರಣೆ ನಡೆಸಿದ ಆಹಾರ ನಿರೀಕ್ಷಕ ಹರಿದಾಸ ಚೋಪಡೆ ಹಾಗೂ ಅಫಜಲಪುರ ಪೊಲೀಸರು ಅಕ್ಕಿಯನ್ನು ವಶಕ್ಕೆ ಪಡೆದು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಬಡವರ ಹೊಟ್ಟೆ ತುಂಬಿಸಬೇಕಾದ ಪಡಿತರ ಅಕ್ಕಿ ಅಕ್ರಮ ಲಾಭದ ಸರಕಾಗುತ್ತಿದೆಯೇ? ಎಂಬ ಪ್ರಶ್ನೆ ಇದೀಗ ಸಾರ್ವಜನಿಕ ವಲಯದಲ್ಲಿ ಚರ್ಚೆಗೆ ಗ್ರಾಸವಾಗಿದೆ. ಬಡವರ ಹಕ್ಕಿನ ಅಕ್ಕಿ ದುರುಪಯೋಗವಾಗದಂತೆ ಸಂಬಂಧಪಟ್ಟ ಆಹಾರ ಇಲಾಖೆ ಹಾಗೂ ಪೊಲೀಸ್ ಅಧಿಕಾರಿಗಳು ಕಟ್ಟುನಿಟ್ಟಿನ ನಿಗಾ ವಹಿಸಬೇಕಿದೆ.

ಜೇವರ್ಗಿ ತಾಲ್ಲೂಕಿನಿಂದ ಘತ್ತರಗಾ, ಅಫಜಲಪುರ ಮಾರ್ಗವಾಗಿ ಮಹಾರಾಷ್ಟ್ರ ರಾಜ್ಯಕ್ಕೆ ಅಕ್ರಮ ಅಕ್ಕಿ ಸಾಗಿಸುತ್ತಿರುವ ಕುರಿತು ಮಾಹಿತಿ ಮೇರೆಗೆ ಅಫಜಲಪುರ ತಹಶೀಲ್ದಾರ್ ಸಂಜೀವಕುಮಾರ ದಾಸರ ಆದೇಶದ ಮೇರೆಗೆ ಆಹಾರ ನಿರೀಕ್ಷಕರು ಹಾಗೂ ಪೊಲೀಸ್ ಇಲಾಖೆಯ ಸಿಬ್ಬಂದಿಗಳು ಜಂಟಿ ಕಾರ್ಯಾಚರಣೆ ನಡೆಸಿ ಮಾದಬಾಳ ತಾಂಡಾ ಹತ್ತಿರ ಟಾಟಾ ಐಚೇರ್ ವಾಹನ ತಡೆದು ಪರಿಶೀಲನೆ ನಡೆಸಿದಾಗ ವಾಹನದಲ್ಲಿ 140 ಕ್ವಿಂಟಲ್ ಅಕ್ಕಿ ಅಂದಾಜು 4.77 ಲಕ್ಷ ರೂ.ಮೌಲ್ಯದ್ದಾಗಿದೆ.

ಉದಯವಾಹಿನಿ ಚಿತ್ರ

> ಅಕ್ಕಿಯನ್ನು ಕಾಳಸಂತೆಯಲ್ಲಿ ಮಾರಾಟ ಮಾಡಲು ಮಹಾರಾಷ್ಟ್ರಕ್ಕೆ ಸಾಗಣೆ ಮಾಡಲಾಗುತ್ತಿತ್ತು ಎಂದು ತಿಳಿದು ಬಂದಿದೆ.

ಸಾಹಿತ್ಯ ಕ್ಷೇತ್ರಕ್ಕೆ ಒತ್ತು ನೀಡುವ ಕೆಲಸ ಅಗತ್ಯ - ಅಶೋಕ್ ರೈ

• **ಉದಯವಾಹಿನಿ, ಪುತ್ತೂರು;**

ಉದಯವಾಹಿನಿ ಚಿತ್ರ

ಪ್ರತಿಭೆಗಳನ್ನು ಗುರುತಿಸಿ ಅವರಿಗೆ ಪ್ರೇರಣೆ ನೀಡುವುದು ಅತ್ಯಂತ ಅರ್ಥಪೂರ್ಣ ಮತ್ತು ಶ್ರೇಷ್ಠವಾದ ಕಾಂ. ಅದರಲ್ಲಿಯೂ ಗ್ರಾಮೀಣ ಮಟ್ಟದ ಪ್ರತಿಭೆಗಳನ್ನು ಬೆಳಕಿಗೆ ತರುವ ಮೂಲಕ ಪುತ್ತೂರು ಕನ್ನಡ ಸಾಹಿತ್ಯ ಪರಿಷತ್ ಕೆಲಸ ಅತ್ಯುತ್ತಮವಾಗಿದೆ. ಸಾಹಿತ್ಯ ಕ್ಷೇತ್ರದತ್ತ ಆಕರ್ಷಿತರಾಗುವವರ ಸಂಖ್ಯೆ ಇಂದು ಬಹಳ ಕಡಿಮೆಯಾಗುತ್ತಿದೆ. ಅಂತಹ ಸಂದರ್ಭದಲ್ಲಿ ಸಾಹಿತ್ಯಕ್ಷೇತ್ರಕ್ಕೆ ಒತ್ತುಕೊಡುವ ಕೆಲಸ ನಡೆಯುತ್ತಿರುವುದು ಶ್ಲಾಘನೀಯ ವಿಚಾರ ಎಂದು ಶಾಸಕ ಅಶೋಕ್ ರೈ ಅಭಿಪ್ರಾಯಪಟ್ಟರು.

ಅವರು ತೆಂಕಿಲದ ವಿವೇಕಾನಂದ ಕನ್ನಡ ಮಾಧ್ಯಮ ಶಾಲೆಯಲ್ಲಿ ಪುತ್ತೂರು ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ, ಚಿಗುರೆಲೆ ಬಳಗ ಹಾಗೂ ಮಹಾಪೋಷಕ ಹೊರನಾಡ ಕನ್ನಡಿಗ ಮಿತ್ರಂಪಾಡಿ ಜಯರಾಮ ರೈ ಅಬುಧಾಬಿ ಅವರ ಜಂಟಿ ಸಂಯೋಜನೆಯಲ್ಲಿ 'ಪುತ್ತೂರು ಸಾಹಿತ್ಯೋತ್ಸವ' ಸ್ಮರಣ ಸಂಚಿಕೆ ಬಿಡುಗಡೆ ಮಾಡಿ ಮಾತನಾಡಿದರು. ಸಾಹಿತ್ಯಕ್ಷೇತ್ರಕ್ಕೆ ಅನುಕೂಲವಾಗುವಂತೆ ಪುತ್ತೂರಿನ ಬಾಲವನದಲ್ಲಿ 2 ಕೋಟಿ ವೆಚ್ಚದಲ್ಲಿ ಧ್ಯಾನಮಂದಿರ ನಿರ್ಮಾಣಕ್ಕೆ ಯೋಜನೆ ರೂಪಿಸಲಾಗಿದೆ. ಬರಹಗಾರರಿಗೆ ಮತ್ತು ಸಾಹಿತಿಗಳಿಗೆ ಉತ್ತೇಜನ ತರುವ ರೀತಿಯಲ್ಲಿ ಇದನ್ನು ನಿರ್ಮಾಣ ಮಾಡಲಾಗುವುದು ಎಂದ ಅವರು ಸಾಹಿತ್ಯ ಕ್ಷೇತ್ರದ ಜತೆಗೆ ಇತರ ಕ್ಷೇತ್ರದ ಸಾಧಕರನ್ನು ಗುರುತಿಸುವ ಕೆಲಸ ನಡೆಯಬೇಕಾಗಿದೆ. ನಾನು 10 ವಿದ್ಯಾರ್ಥಿಗಳಿಗೆ ನನ್ನ ಸ್ವಂತ ಖರ್ಚಿನಲ್ಲಿ ಐಎಎಸ್ ಕೋಚಿಂಗ್ ನೀಡುವ ವ್ಯವಸ್ಥೆ ಮಾಡಿದ್ದೇನೆ. ನಮ್ಮ ಮಕ್ಕಳು ಐಎಎಸ್-ಐಪಿಎಸ್ ನಂತಹ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಹಾಜರಾಗುವ ಮೂಲಕ ಉತ್ತಮ ಸಮಾಜವೊಂದರ ನಿರ್ಮಾಣಕ್ಕೆ ಮುಂದಾಗಬೇಕು. ಸಾಹಿತ್ಯಕ್ಷೇತ್ರವೂ ಇದಕ್ಕೆ ಪೂರಕ ಎಂದು ಅವರು ಹೇಳಿದರು.

ಶಾಲೆಗೆ ದಿಢೀರ್ ಭೇಟಿ ನೀಡಿದ ಶಾಸಕ ಭೀಮಣ್ಣ: ಕಾಮಗಾರಿ ಪರಿಶೀಲನೆ

• **ಉದಯವಾಹಿನಿ, ಶಿರಸಿ:**

ಸ್ಥಳೀಯ ಶಾಸಕ ಭೀಮಣ್ಣ ನಾಯ್ಕ ನಗರದ ವಿವಿಧ ಶಾಲೆಗಳಿಗೆ ದಿಢೀರ್ ಭೇಟಿ ನೀಡಿ, ಶಾಲಾ ಅವರಣದಲ್ಲಿ ನಡೆಯುತ್ತಿರುವ ವಿವಿಧ ಅಭಿವೃದ್ಧಿ ಹಾಗೂ ನಿರ್ಮಾಣ ಕಾಮಗಾರಿಗಳ ಪ್ರಗತಿ ಪರಿಶೀಲನೆ ನಡೆಸಿದರು.

ಮೊದಲಿಗೆ ನಗರದ ಶಾಸಕರ ಮಾದರಿ ಶಾಲೆ ನಂ. 2ಕ್ಕೆ ಭೇಟಿ ನೀಡಿದ ಶಾಸಕರು, ಶಾಲಾ ಆವರಣದಲ್ಲಿ ನೂತನವಾಗಿ ನಿರ್ಮಾಣಗೊಳ್ಳುತ್ತಿರುವ ಹೆಚ್ಚುವರಿ ತರಗತಿ ಕೊಠಡಿಗಳ ಕಾಮಗಾರಿಯನ್ನು ವೀಕ್ಷಿಸಿದರು.

ಈ ವೇಳೆ ಕಟ್ಟಡ ನಿರ್ಮಾಣಕ್ಕೆ ಬಳಸಲಾಗುತ್ತಿರುವ ಸಾಮಗ್ರಿಗಳ ಗುಣಮಟ್ಟವನ್ನು ಸೂಕ್ಷ್ಮವಾಗಿ ಪರಿಶೀಲಿಸಿದ ಅವರು, ಶೈಕ್ಷಣಿಕ ವಾತಾವರಣಕ್ಕೆ ಯಾವುದೇ ರೀತಿಯ ಅಡಚಣೆಯಾಗದಂತೆ ಹಾಗೂ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ನಿಗದಿತ ಅವಧಿಯೊಳಗೆ ಕಾಮಗಾರಿಯನ್ನು ಅತ್ಯಂತ ಗುಣಮಟ್ಟದಿಂದ ಪೂರ್ಣಗೊಳಿಸಬೇಕು ಎಂದು ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ಮತ್ತು ಗುತ್ತಿಗೆದಾರರಿಗೆ ಸೂಚನೆ ನೀಡಿದರು. ಬಳಿಕ ನಗರದ ಮಾರಿಕಾಂಬಾ ಪ್ರೌಢಶಾಲೆಗೆ ಭೇಟಿ ನೀಡಿದ ಶಾಸಕರು, ಶಾಲೆಯ ಸುರಕ್ಷತೆಗಾಗಿ ನಿರ್ಮಿಸಲಾಗುತ್ತಿರುವ ಸುಸಜ್ಜಿತ ಕಾಂಪೌಂಡ್ ಗೋಡೆ ಹಾಗೂ ಶಾಲಾ ಆವರಣದಲ್ಲಿ ಕೈಗೊಳ್ಳಲಾಗಿರುವ ಇನ್ನಿತರ ಮೂಲಸೌಕರ್ಯ ಅಭಿವೃದ್ಧಿ ಕಾಮಗಾರಿಗಳ ಪ್ರಗತಿಯನ್ನು ಪರಿಶೀಲಿಸಿದರು.

ಶಾಲೆಯ ಆವರಣವನ್ನು ಸ್ವಚ್ಛವಾಗಿಟ್ಟುಕೊಳ್ಳಲು ಮತ್ತು ಮೂಲಸೌಕರ್ಯ ಗಳನ್ನು ಇನ್ನಷ್ಟು ಮೇಲ್ದರ್ಜೆಗೇರಿಸಲು ಅಗತ್ಯ ಕ್ರಮ ವಹಿಸುವಂತೆ ಸೂಚಿಸಿದರು.


ಉದಯವಾಹಿನಿ ಚಿತ್ರ

ಜಿಲ್ಲೆಯಾದ್ಯಂತ ವಾಲ್ಮೀಕಿ ಜಯಂತಿಯ ಸಂಭ್ರಮ

• **ಉದಯವಾಹಿನಿ, ಬಳ್ಳಾರಿ, :**

ಕರ್ನಾಟಕ ಈಶಾನ್ಯ ಶಿಕ್ಷಕರ ಕ್ಷೇತ್ರದ ಚುನಾವಣೆಯ ನೀತಿ ಸಂಹಿತೆ ಜಾರಿಯಲ್ಲಿರುವ ಹಿನ್ನೆಲೆಯಲ್ಲಿ, ಜಿಲ್ಲಾಡಳಿತದಿಂದ ಮಹರ್ಷಿ ವಾಲ್ಮೀಕಿ ಜಯಂತಿಯನ್ನು ಸರಳವಾಗಿ ಆಚರಿಸಿದರೆ. ವಾಲ್ಮೀಕಿ ಸೇರಿದಂತೆ ಇತರೇ ಸಮುದಾಯದ ಜನತೆ ವಾಲ್ಮೀಕಿ, ಸರ್ಕಲ್, ವಾಲ್ಮೀಕಿ ಭವನದಲ್ಲಿನ ವಾಲ್ಮೀಕಿ ಪುತ್ಥಳಿಗೆ ಹೂ ಮಾಲೆ ಅರ್ಪಿಸಿ, ಪೂಜೆ ಸಲ್ಲಿಸಿದರೆ. ಇನ್ನು ಕೆಲವಡೆ ವಾಲ್ಮೀಕಿ ಭಾವಚಿತ್ರದ ಮೆರವಣಿಗೆ, ಬೈಕ್ ರ್‍ಯಾಲಿ ನಡೆಸಲಾಯ್ತು. ಬಳ್ಳಾರಿ ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್.ಕೆ ಅವರು ನಗರದ ವಾಲ್ಮೀಕಿ ವೃತ್ತ ಹಾಗೂ ವಾಲ್ಮೀಕಿ ಭವನದ ಮುಂಭಾಗದಲ್ಲಿರುವ ಶ್ರೀ ಮಹರ್ಷಿ ವಾಲ್ಮೀಕಿಯವರ ಪುತ್ಥಳಿಗೆ ಮಾಲಾರ್ಪಣೆ ಮಾಡಿ ಪುಷ್ಪನಮನ ಸಲ್ಲಿಸದರು.ಬಳಿಕ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ವಾಲ್ಮೀಕಿಯವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ಪುಷ್ಪಾರ್ಚನೆ ಮಾಡಲಾಯಿತು.

ಈ ವೇಳೆ 2025-26ನೇ ಶೈಕ್ಷಣಿಕ ಸಾಲಿನ ಎಸ್.ಎಸ್.ಎಲ್.ಸಿ ಮತ್ತು ಪಿ.ಯು.ಸಿ ಪರೀಕ್ಷೆಗಳಲ್ಲಿ ಜಿಲ್ಲೆಗೆ ಅತೀ ಹೆಚ್ಚು ಅಂಕ ಗಳಿಸಿ ಸಾಧನೆ ತೋರಿದ ಪರಿಶಿಷ್ಟ ಪಂಗಡದ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಸನ್ಮಾನಿಸಿ, ಅಭಿನಂದನಾ ಪತ್ರ ವಿತರಿಸಲಾಯಿತು.

ಭಾರತೀಯ ಸಂಸ್ಕೃತಿಗೆ ಶ್ರೀ ಮಹರ್ಷಿ ವಾಲ್ಮೀಕಿ ಕೊಡುಗೆ ಅಪಾರ

• **ಉದಯವಾಹಿನಿ, ಹುಮನಾಬಾದ್:**

ಭಾರತೀಯ ಸಂಸ್ಕೃತಿ ಮತ್ತು ಸಾಹಿತ್ಯಕ್ಕೆ ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ಅವರು ನೀಡಿದ ಕೊಡುಗೆ ಅನನ್ಯವಾಗಿದೆ ಎಂದು ಮಾಜಿ ಸಚಿವರಾದ ಶ್ರೀ ರಾಜಶೇಖರ ಪಾಟೀಲ್ ಹೇಳಿದರು. ಪಟ್ಟಣದ ಕೋಳಿವಾಡ ಬಡಾವಣೆಯಲ ವಾಲ್ಮೀಕಿ ದೇವಸ್ಥಾನದ ಆವರಣದಲ್ಲಿ ಟೋಕರಿ ಕೋಳಿ ಸಮಾಜದ ವತಿಯಿಂದ ಸೋಮವಾರ ಆಯೋಜಿಸಿದ್ದ ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿ ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದರು. ಶ್ರೀ ಮಹರ್ಷಿ ವಾಲ್ಮೀಕಿ ಅವರು ಸಂಸ್ಕೃತದಲ್ಲಿ ಬರೆದ ರಾಮಾಯಣವು ಜಗತ್ತಿನ ಪ್ರಮುಖ ಮತ್ತು ಆದಿಕಾವ್ಯಗಳಲ್ಲಿ ಒಂದಾಗಿದೆ. ಸತ್ಯ, ಧರ್ಮ, ಕರುಣೆ ಹಾಗೂ ಸಾಮಾಜಿಕ ಮೌಲ್ಯಗಳನ್ನು ತಮ್ಮ ಕಾವ್ಯದ ಮೂಲಕ ಜಗತ್ತಿಗೆ ಸಾರಿದ್ದಾರೆ ಎಂದು ತಿಳಿಸಿದರು. ಈ ಹಿಂದೆ ನನ್ನ ಆಡಳಿತ ಅವಧಿಯಲ್ಲಿ ಕೋಳಿವಾಡ ಬಡವಣೆಯ ಸಮಗ್ರ ಅಭಿವೃದ್ಧಿಗೆ ಹಾಗೂ ಶ್ರೀ ಮಹರ್ಷಿ ವಾಲ್ಮೀಕಿ ದೇವಸ್ಥಾನದ ಬೆಳವಣಿಗೆಗೆ ಪೂರಕವಾಗಿ ಅನೇಕ ಯೋಜನೆಗಳನ್ನು ನೀಡಿದ್ದೇನೆ. ದೇವಸ್ಥಾನದ ಆವರಣದಲ್ಲಿನ ಕಲ್ಯಾಣ ಮಂಟಪದ ನಿರ್ಮಾಣಕ್ಕೆ ನಮ್ಮ ಅವಧಿಯಲ್ಲಿ ಚಾಲನೆ ನೀಡಲಾಗಿತ್ತು. ಆದರೆ ಕಲ್ಯಾಣ ಮಂಟಪ ಕಾಮಗಾರಿ ಮಾತ್ರ ಅಪೂರ್ಣವಾಗಿ ಉಳಿದುಕೊಂಡಿರುವುದು ವಿಪರ್ಯಾಸದ ಸಂಗತಿಯಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ರಾಜ್ಯದಲ್ಲಿ ನಮ್ಮ ಕಾಂಗ್ರೆಸ್ ಅಧಿಕಾರಕ್ಕೆ ಬಂದ ನಂತರ ಕಲ್ಯಾಣ ಕರ್ನಾಟಕಕ್ಕೆ ಹಾಗೂ ಶಾಸಕರಿಗೆ ಹೆಚ್ಚಿನ ಅನುದಾನ ಬರುತ್ತಿದೆ. ಹಾಗಾಗಿ ಕಲ್ಯಾಣ ಮಂಟಪದ ಅಭಿವೃದ್ಧಿ ಕಾಮಗಾರಿ ವೇಗ ಹೆಚ್ಚಿಸಲಿ ಎಂದು ತಿಳಿಸಿದರು.

ಉದಯವಾಹಿನಿ ಚಿತ್ರ

ಪಡಿತರ ಅಕ್ಕಿ ಅಕ್ರಮ ಸಾಗಣೆ ಶಂಕೆ: 84,500 ಮೌಲ್ಯದ ಅಕ್ಕಿ, ಟಂಟಂ ಜಪ್ತಿ

• **ಉದಯವಾಹಿನಿ, ಆಳಂದ:**

ಪಟ್ಟಣದಲ್ಲಿ ಪಡಿತರ ಅಕ್ಕಿ ಅಕ್ರಮ ಸಾಗಣೆ ಪ್ರಕರಣ ಮತ್ತೆ ಮುನ್ನೆಲೆಗೆ ಬಂದಿದ್ದು, 84,500 ಮೌಲ್ಯದ ಟಂಟಂ ವಾಹನ ಮತ್ತು ಅಕ್ಕಿಯನ್ನು ಪೊಲೀಸರು ಜಪ್ತಿ ಮಾಡಿದ್ದಾರೆ. ಹಿಂದಿನ ಅಕ್ಕಿ ಕಳ್ಳತನ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸ್ ಅಧಿಕಾರಿ ಸೇರಿದಂತೆ ಮೂವರು ಅಮಾನತುಗೊಂಡ ಘಟನೆ ಬೆನ್ನಲ್ಲೇ ಮತ್ತೊಂದು ಪ್ರಕರಣ ಬೆಳಕಿಗೆ ಬಂದಿರುವುದು ಸಾರ್ವಜನಿಕ ವಲಯದಲ್ಲಿ ಚರ್ಚೆಗೆ ಕಾರಣವಾಗಿದೆ. ಪಟ್ಟಣದ ಉಮರ್ಗಾ ರಸ್ತೆಯ ಕುಮಾರ ಹೋಟೆಲ್ ಸಮೀಪ ಅ.24ರಂದು ಸಂಜೆ 7.30ರ ವೇಳೆಗೆ ಕೆಎ-32-7333 ಸಂಖ್ಯೆಯ ಟಂಟಂ ವಾಹನ ನಿಂತಿರುವುದನ್ನು ಗಮನಿಸಿದ ಆಳಂದ ಪೊಲೀಸ್ ಠಾಣೆಯ ಸಿಬ್ಬಂದಿ ಚಂದ್ರಶೇಖರ (ಹೆಡ್ ಕಾನ್ಸ್‌ಟೆಬಲ್-277) ಅವರು ವಾಹನವನ್ನು ಪರಿಶೀಲಿಸಿದಾಗ ಅದರಲ್ಲಿ 15 ಚೀಲ ಅಕ್ಕಿ ಪತ್ತೆಯಾಗಿದೆ.

ಈ ಅಕ್ಕಿ ಸಾರ್ವಜನಿಕರಿಗೆ ಪಡಿತರ ಚೀಟಿಗಳ ಮೂಲಕ ವಿತರಿಸುವ ಸರ್ಕಾರಿ ಅಕ್ಕಿಯಾಗಿರಬಹುದು ಎಂಬ ಶಂಕೆ ವ್ಯಕ್ತವಾದ ಹಿನ್ನೆಲೆಯಲ್ಲಿ ವಾಹನವನ್ನು ಠಾಣೆಗೆ ತರಿಸಿ, ಆಹಾರ ಇಲಾಖೆಯ ಅಧಿಕಾರಿಗಳ ಪರಿಶೀಲನೆಗೆ ಕ್ರಮ ಕೈಗೊಳ್ಳಲಾಗಿತ್ತು.

ಬಿಸಿಯೂಟ: ಅಡುಗೆ ಕೊಠಡಿ ವಿಸ್ತರಣೆಗೆ ಸವಾಲು

ಆರಂಭವಾದಾಗ ಸಣ್ಣ ಮಟ್ಟದಲ್ಲಿ ಇದ್ದ ಯೋಜನೆ ಈಗ ವಿಸ್ತಾರ ಪಡೆದುಕೊಂಡಿದೆ. ವಿದ್ಯಾರ್ಥಿಗಳ ಸಂಖ್ಯೆಯೂ ಹೆಚ್ಚಾಗಿದೆ

• **ಉದಯವಾಹಿನಿ ಮಂಗಳೂರು:**

ಹಳೆಯ ಕಟ್ಟಡಗಳು, ದುರಸ್ತಿಗಾಗಿ ಕಾಯುತ್ತಿರುವ ಚಾವಣಿ ಮತ್ತು ಗೋಡೆಗಳು, ಕಿಷ್ಕಂದೆಯಂಥ ಕೊಠಡಿಗಳಲ್ಲಿ ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಬಿಸಿಯೂಟ ಸಿದ್ಧಪಡಿಸುವ ಕಾರ್ಯ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸವಾಲಾಗಿ ಪರಿಣಮಿಸಿದೆ.

1 : 1,038 ಸರ್ಕಾರಿ ಶಾಲೆಗಳು
2 : 261 ಅನುದಾನಿತ ಶಾಲೆಗಳು
3 : 172 ಶಾಲೆಗಳಿಗೆ ಬಿಸಿಯೂಟ

ಶಾಲೆಗಳಲ್ಲಿ ಮಕ್ಕಳು ಪೌಷ್ಟಿಕಾಂಶ ಕೊರತೆಯಿಂದ ಬಳಲಬಾರದು ಎಂದು ರಾಜ್ಯದಾದ್ಯಂತ ಕರ್ನಾಟಕ ಸರ್ಕಾರ 2002ರಲ್ಲಿ ಆರಂಭಿಸಿದ ಅಕ್ಷರ ದಾಸೋಹ ಯೋಜನೆ ಈಗ ಕೇಂದ್ರ ಸರ್ಕಾರದ ಪೋಷಣ್ ಅಭಿಯಾನದಲ್ಲಿ ಪಿ.ಎಂ ಪೋಷಣ್ ಎಂಬ ಹೆಸರಿನಲ್ಲಿ ಜಾರಿಯಲ್ಲಿದೆ.

ಎರಡು ದಶಕಗಳಲ್ಲಿ ಹಲವು ಮಜಲುಗಳನ್ನು ದಾಟಿರುವ ಯೋಜನೆಯಲ್ಲಿ ಮಧ್ಯಾಹ್ನ ಬಿಸಿ ಅನ್ನ, ಬಗೆಬಗೆಯ ತರಕಾರಿ ಸಾಂಬಾರ್, ಪಲಾವ್, ಉಪ್ಪಿಟ್ಟು, ಖಿಚಡಿ ಇತ್ಯಾದಿ ಸೇರಿಕೊಂಡಿತು.

ಉದಯವಾಹಿನಿ ಚಿತ್ರ

ಕ್ಷೀರಭಾಗ್ಯ, ಹೆಚ್ಚುವರಿ ಪೋಷಕಾಂಶಗಳಿಗಾಗಿ ಮೊಟ್ಟೆ, ಚಿಕ್ಕಿ ಮುಂತಾದವು ಕೂಡ ಸೇರಿಕೊಂಡವು. ಚರ್ಚೆ, ವಿವಾದಗಳ ನಡುವೆ ಅಡುಗೆ ಮನೆಯಲ್ಲಿ ಸೌಲಭ್ಯಗಳ ಕೊರತೆಯೂ ಕಾಡಿತು.

ಜಿಲ್ಲೆಯ 1,312 ಶಾಲೆಗಳಲ್ಲಿ 1,37,850 ಮಕ್ಕಳಿಗೆ ಮಧ್ಯಾಹ್ನದ ಬಿಸಿಯೂಟ ನೀಡಲಾಗುತ್ತಿದೆ. ಇದರಲ್ಲಿ 1,038 ಸರ್ಕಾರಿ ಶಾಲೆಗಳು, 261 ಅನುದಾನಿತ ಶಾಲೆಗಳು, 13 ಮೌಲಾನಾ ಆಜಾದ್ ಮಾದರಿ ಶಾಲೆಗಳೂ ಇವೆ. ಅಕ್ಷಯ ಫೌಂಡೇಷನ್‌ನವರು 172 ಶಾಲೆಗಳಿಗೆ ಬಿಸಿಯೂಟ ತಯಾರಿಸಿ ಕೊಡುತ್ತಾರೆ. ಉಳಿದ ಶಾಲೆಗಳ ಮಕ್ಕಳಿಗೆ ಅಲ್ಲಲ್ಲೇ ಅಡುಗೆ ಸಿದ್ಧಪಡಿಸಲಾಗುತ್ತದೆ.

'ಆರಂಭವಾದಾಗ ಸಣ್ಣ ಮಟ್ಟದಲ್ಲಿ ಇದ್ದ ಯೋಜನೆ ಈಗ ವಿಸ್ತಾರ ಪಡೆದುಕೊಂಡಿದೆ. ವಿದ್ಯಾರ್ಥಿಗಳ ಸಂಖ್ಯೆಯೂ ಹೆಚ್ಚಾಗಿದೆ. ಆದ್ದರಿಂದ ಸೌಲಭ್ಯಗಳ ಕೊರತೆ ಕಾಣುತ್ತಿರಬಹುದು. ಆದರೆ ಯೋಜನೆಗೆ ತೊಂದರೆ ಆಗಲಿಲ್ಲ' ಎಂಬುದು ಅಧಿಕಾರಿಗಳ ಸಮಜಾಯಿಷಿ. ಕೆಲವು ವರ್ಷಗಳಿಂದ ಕೆಲವು ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗಿದೆ. ಆರಂಭದಲ್ಲಿ ನಿರ್ಮಿಸಿದ ಅಡುಗೆ ಮನೆಗಳು ಚಿಕ್ಕದಾಗಿದ್ದು ಈಗಿನ ಪರಿಸ್ಥಿತಿಗೆ ತಕ್ಕಂತೆ ಬಳಸಿಕೊಳ್ಳಲು ಆಗುತ್ತಿಲ್ಲ. ಸ್ಥಳದ ಅಭಾವ ಇರುವುದರಿಂದ ಊಟ ಸಿದ್ಧಪಡಿಸಲು ಕಷ್ಟ ಆಗುತ್ತಿದೆ ಎನ್ನುತ್ತಾರೆ ಕೆಲವು ಶಾಲೆಯ ಅಡುಗೆ ತಯಾರಕರು. ?20 ಸಾವಿರದಿಂದ ?40 ಸಾವಿರ ವ್ಯಯಿಸಿ ನಿರ್ಮಿಸಿದ ಕೊಠಡಿಗಳನ್ನು ದುರಸ್ತಿ ಮಾಡಬೇಕಾದರೆ ಅಥವಾ ಮರುನಿರ್ಮಾಣ ಮಾಡಬೇಕಾದರೆ ಎಷ್ಟೋ ಪಟ್ಟು ಹೆಚ್ಚು ಹಣ ಬೇಕಾಗಬಹುದು ಎಂದು ಅಂದಾಜಿಸಲಾಗಿದೆ. ಹೀಗಾಗಿ ತಕ್ಷಣಕ್ಕೆ 'ರಿಸ್ಕ್' ತೆಗೆದುಕೊಳ್ಳಲು ಯಾರೂ ತಯಾರಿಲ್ಲ.

> ಪ್ರತಿವರ್ಷವೂ ಮನವಿ ಕಳುಹಿಸಲಾಗುತ್ತಿದೆ. ಅನುದಾನ ಸಿಕ್ಕಿದರೆ ಕಾಮಗಾರಿ ಆರಂಭಿಸಬಹುದು. ನರೇಗಾ ಬದಲಾದ ಕಾರಣ ಸಮಸ್ಯೆ ಆಗಿದ್ದು ನರೇಗಾ ವಿಬಿ-ಜಿ ರಾಮ್ ಜಿಯಲ್ಲಿ ಸೇರಿಸಲು ಕೋರಲಾಗಿದೆ. ಅದನ್ನು ಸೇರಿಸಿದರೆ ಸಮಸ್ಯೆಗೆ ಪರಿಹಾರ ಸಿಗಲಿದೆ ಎಂದು ಅವರು ಹೇಳಿದರು. -ಅಧಿಕಾರಿ ಜ್ಞಾನೇಶ್

> ಅಡುಗೆ ತಯಾರಕರ ತಿಂಗಳ ಗೌರವ ಧನ ಸಮರ್ಪಕವಾಗಿ ಬಿಡುಗಡೆ ಆಗುತ್ತಿಲ್ಲ ಎಂಬ ದೂರುಗಳೂ ಇವೆ. ಕೆಲವು ತಿಂಗಳಿಂದ ಗೌರವ ಧನ ಸಿಗುತ್ತಿಲ್ಲ ಎಂದು ಭವ್ಯಾ ದೂರಿದರೆ, ಹಣ ಬಿಡುಗಡೆ ಆಗಿದೆ ಎಂದು ತಿಳಿಸಿದರು. -ಅಧಿಕಾರಿ ಜ್ಞಾನೇಶ್

'ಅನೇಕ ಶಾಲೆಗಳ ಕೊಠಡಿಗಳು ತೀರಾ ಸಣ್ಣವು. ಈಗಿನ ಪರಿಸ್ಥಿತಿಗೆ ತಕ್ಕಂತೆ ಅಲ್ಲಿ ಅಡುಗೆ ತಯಾರಿಸಲು ಆಗುತ್ತಿಲ್ಲ' ಎಂದು ತಿಳಿಸಿದ ಜಿಲ್ಲಾ ಅಕ್ಷರ ದಾಸೋಹ ಕಾರ್ಯಕರ್ತರ ಸಂಘದ ಅಧ್ಯಕ್ಷೆ ಭವ್ಯಾ, 'ಆರಂಭದಲ್ಲಿ ಅಂದಿನ ಅಗತ್ಯಕ್ಕೆ ತಕ್ಕಂತೆ ಸಣ್ಣ ಕೊಠಡಿಗಳನ್ನು ಒದಗಿಸಲಾಗಿತ್ತು. ಈಚೆಗೆ ನಿರ್ಮಿಸಿದ ಕಟ್ಟಡಗಳಲ್ಲಿ ವಿಶಾಲ ಜಾಗ ಇರುವ ಅಡುಗೆ ಮನೆಗಳು ಇವೆ. ಅಲ್ಲಿ ಯಾವ ಸಮಸ್ಯೆಯೂ ಇಲ್ಲ' ಎಂದರು. 'ಸ್ಥಳಾವಕಾಶ ಇರುವ, ಒಳ್ಳೆಯ ಸೌಲಭ್ಯ ಹೊಂದಿರುವ ಅಡುಗೆ ಮನೆಗಳನ್ನು ನಿರ್ಮಿಸಿ ಕೊಡುವಂತೆ, ದಾಸ್ತಾನು ಕೊಠಡಿ ಮತ್ತು ಹೊಸ ಪಾತ್ರೆಗಳನ್ನು ಒದಗಿಸುವಂತೆಯೂ ಕುಂದುಕೊರತೆ ಸಭೆಗಳಲ್ಲಿ ಹಲವು ಬಾರಿ ಕೋರಲಾಗಿದೆ. ಬಹುತೇಕ ಶಾಲೆಗಳಲ್ಲಿ ಈಗ ದಾಸ್ತಾನು ಕೊಠಡಿ ಮತ್ತು ಸಾಕಷ್ಟು ಪಾತ್ರೆಗಳು ಇವೆ. ಪಾತ್ರೆಗಳ ಖರೀದಿಗೆ ಹಣವೂ ಬಿಡುಗಡೆ ಆಗಿದೆ' ಎಂದು ಭವ್ಯಾ ವಿವರಿಸಿದರು.

ದಿನ ಭವಿಷ್ಯ

ರಾಹುಕಾಲ	ಮಧ್ಯಾಹ್ನ	03:00 ರಿಂದ 04:30
ಗುಳಿಕ ಕಾಲ	ಮಧ್ಯಾಹ್ನ	12:00 ರಿಂದ 01:30
ಯಮಗಂಡ ಕಾಲ	ಬೆಳಿಗ್ಗೆ	09:00 ರಿಂದ 10:30

ಮೇಷ ಮಾತನಾಡುವ ಮುನ್ನ ಯೋಚಿಸಿ. ತಿಳಿಯದೆ ನಿಮ್ಮ ಅಭಿಪ್ರಾಯಗಳು ಬೇರೊಬ್ಬರ ಭಾವನೆಗಳಿಗೆ ಧಕ್ಕೆಯುಂಟು ಮಾಡಬಹುದು. ಆಪ್ತ ಸ್ನೇಹಿತನ ಸಹಾಯದಿಂದ ಇಂದು ಕೆಲವು ವ್ಯಾಪಾರಿಗಳಿಗೆ ಹಣದ ಲಾಭವಾಗುವ ಸಾಧ್ಯತೆ ಇದೆ. ಈ ಹಣ ನಿಮ್ಮ ಅನೇಕ ಸಮಸೆಗಳನ್ನು ದೂರ ಮಾಡಬಹುದು.

ವೃಷಭ ನಿಮ್ಮ ಸಂಗಾತಿಯೊಡನೆ ಒಂದು ಉತ್ತಮ ತಿಳುವಳಿಕೆ ಮನೆಯಲ್ಲಿ ಸಂತೋಷ–ಶಾಂತಿ ಮತ್ತು ಸಮೃದ್ಧಿಯನ್ನು ತರುತ್ತದೆ. ಸಮಯ, ಕೆಲಸ, ಹಣ, ಸ್ನೇಹಿತರು, ಕುಟುಂಬ, ಬಂಧುಗಳು; ಎಲ್ಲವೂ ಒಂದು ಕಡೆ ಮತ್ತು ನಿಮ್ಮ ಸಂಗಾತಿಯ ಜೊತೆ ನೀವು ಇನ್ನೊಂದು ಕಡೆಗಿರುತ್ತೀರಿ.

ಮಿಥುನ ನೀವು ದೈಹಿಕ ಅನಾರೋಗ್ಯದಿಂದ ಚೇತರಿಸಿಕೊಳ್ಳುವ ಸಾಧ್ಯತೆಗಳು ಹೆಚ್ಚಿದ್ದು ಇದು ನಿಮ್ಮನ್ನು ಕ್ರೀಡಾ ಸ್ಪರ್ಧೆಗಳಲ್ಲಿ ಭಾಗವಹಿಸಲು ಸಕ್ರಿಯಗೊಳಿಸುತ್ತದೆ. ಬಾಕಿಯಿರುವ ವಿಷಯಗಳು ರಹಸ್ಯಮಯವಾಗುತ್ತವೆ ವೆಚ್ಚಗಳು ನಿಮ್ಮ ಮನಸ್ಸನ್ನು ಆವರಿಸಿಕೊಳ್ಳುತ್ತವೆ.

ಕಟಕ ನೀವು ಜೀವನವನ್ನು ಸಂತೋಷದಿಂದ ಅನುಭವಿಸಲು ಸಿದ್ಧವಾಗುತ್ತಿದ್ದ ಹಾಗೆ ನಿಮಗೆ ಸಂತೋಷ ಹಾಗೂ ಆನಂದ. ವ್ಯಾಪರದಲ್ಲಿ ಪ್ರಯೋಜನ ಇಂದು ಅನೇಕ ವ್ಯಾಪಾರಿಗಳ ಮುಖದ ಮೇಲೆ ಸಂತೋಷವನ್ನು ತರಬಹುದು. ಕೌಟುಂಬಿಕ ಸಮಸ್ಯೆಗೆ ಮೊದಲ ಆದ್ಯತೆ ನೀಡಬೇಕು.

ಸಿಂಹ ಸಂತೃಪ್ತಿಯ ಜೀವನಕ್ಕಾಗಿ ನಿಮ್ಮ ಮಾನಸಿಕ ದೃಢತೆಯನ್ನು ಸುಧಾರಿಸಿ. ನೀವು ಭೂಮಿ, ವಸತಿ, ಸಾಂಸ್ಕೃತಿಕ ಯೋಜನೆಗಳಿಗೆ ಸಂಬಂಧಿಸಿದ ಸಮಸ್ಯೆಗಳಿಗೆ ಗಮನ ನೀಡಬೇಕು. ಗೃಹಪ್ರವೇಶಕ್ಕೆ ಮಂಗಳಕರ ದಿನ. ಪ್ರಣಯ ನಿಮ್ಮ ಪ್ರೀತಿಪಾತ್ರರು ಇಂದು ಅತಿಯಾದ ಬೇಡಿಕೆಗಳನ್ನಿಡುವುದರಿಂದ ಪ್ರಣಯದಲ್ಲಿ ಹಿನ್ನಡೆಯಿರುತ್ತದೆ.

ಕನ್ಯಾ ಒತ್ತಡದ ದಿನದ ಹೊರತಾಗಿಯೂ ಆರೋಗ್ಯ ಪರಿಪೂರ್ಣವಾಗಿರುತ್ತದೆ. ನಿಕಟ ಸಂಬಂಧಿಗಳ ಮನೆಗೆ ಹೋಗುವುದರಿಂದ ಇಂದು ನಿಮ್ಮ ಆರ್ಥಿಕ ಪರಿಸ್ಥಿತಿ ಹಾಳಾಗಬಹುದು. ಭೇಟಿ ನೀಡುವ ಸಂಬಂಧಿಗಳು ನೀವು ಅಂದುಕೊಂಡಿದ್ದಕ್ಕಿಂತ ಚೆನ್ನಾಗಿರಬಹುದು.

ತುಲಾ ನೀವು ಇದು ಒಳ್ಳೆಯ ಆರೋಗ್ಯ ಹೊಂದಿರುವುದರಿಂದ ಅದು ನಿಮಗೆ ಯಶಸ್ಸು ನೀಡುವ ಸಾಧ್ಯತೆಯಿದೆ. ಆದರೆ ನಿಮ್ಮ ಶಕ್ತಿಯನ್ನು ನಾಶಪಡಿಸುವ ಎಲ್ಲವನ್ನೂ ನೀವಿಂದು ತಪ್ಪಿಸಬೇಕು. ನೀವು ಪ್ರಯಾಣ ಮಾಡುವ ಮತ್ತು ಹಣ ಖರ್ಚು ಮಾಡುವ ಮನಸ್ಥಿತಿಯಲ್ಲಿರುತ್ತೀರಿ.

ವೃಶ್ಚಿಕ ನಿಮ್ಮ ಶಾಂತತೆಯನ್ನು ಕಾಪಾಡಿಕೊಳ್ಳಲು ಸಹಾಯ ಮಾಡುವ ಚಟುವಟಿಕೆಗಳಲ್ಲಿ ನಿಮ್ಮನ್ನು ತೊಡಗಿಸಿಕೊಂಡಿರಿ. ನೀವು ನಿಮ್ಮನ್ನು ಒಂದು ರೋಮಾಂಚಕಾರಿ ಪರಿಸ್ಥಿತಿಯಲ್ಲಿ ಕಂಡುಕೊಳ್ಳಬಹುದು–ಇದು ನಿಮಗೆ ಆರ್ಥಿಕ ಲಾಭವನ್ನೂ ತರುತ್ತದೆ. ನಿಮ್ಮ ನಿರೀಕ್ಷೆಗಳಿಗೆ ತಕ್ಕಂತೆ ಬದುಕಲು ನಿಮ್ಮ ಮಗುವನ್ನು ಪ್ರೇರೇಪಿಸಿ.

ಧನಸ್ಸು ಇಂದು ನಿಮ್ಮ ವ್ಯಕ್ತಿತ್ವ ಒಂದು ಸುಗಂಧದಂತೆ ಕೆಲಸ ಮಾಡುತ್ತದೆ. ದುಂದುಗಾರಿಕೆ ಮತ್ತು ಸಂಶಯಾಸ್ಪದವಾದ ಹಣಕಾಸು ಯೋಜನೆಗಳನ್ನು ತಪ್ಪಿಸಿ. ನಿಮ್ಮನ್ನು ಸಂತೋಷವಾಗಿಡುವುದನ್ನೇನಾದರೂ ಮಾಡಿ, ಆದರೆ ಇತರರ ವ್ಯವಹಾರಗಳಿಂದ ದೂರವಿರಿ. ನಿಮ್ಮ ಶಕ್ತಿಯ ಮಟ್ಟ ಹೆಚ್ಚಿರುತ್ತದೆ

ಮಕರ ಮುಂದೆ ಒಳ್ಳೆಯ ಸಮಯವಿರುವುದರಿಂದ ಸಂತೋಷದಿಂದಿರಿ. ಜೀವನದ ಕೆಟ್ಟ ಕಾಲದಲ್ಲಿ ಹಣ ನಿಮ್ಮ ಕೆಲಸಕ್ಕೆ ಬರುತ್ತದೆ ಆದ್ದರಿಂದ ಇಂದಿನಿಂದಲೇ ನಿಮ್ಮ ಹಣವನ್ನು ಸಂಗ್ರಹಿಸುವ ಬಗ್ಗೆ ಯೋಚಿಸಿ ಇಲ್ಲದಿದ್ದರೆ ನೀವು ತೊಂದರೆಗೊಳಗಾಗಬಹುದು. ಕುಟುಂಬದ ಸದಸ್ಯರ ಅಗತ್ಯಗಳಿಗೆ ಆದ್ಯತೆ ನೀಡಿ.

ಕುಂಭ ದೈಹಿಕ ಅನಾರೋಗ್ಯದಿಂದ ಚೇತರಿಸಿಕೊಳ್ಳುವ ಸಾಧ್ಯತೆಗಳಿವೆ. ಯೋಜಿತವಲ್ಲದ ಮೂಲಗಳಿಂದ ಹಣದ ಲಾಭ ನಿಮ್ಮ ದಿನವನ್ನು ಬೆಳಗಿಸುತ್ತದೆ. ಮಕ್ಕಳ ಮೇಲೆ ನಿಮ್ಮ ಅಭಿಪ್ರಾಯ ಹೇರುವುದು ಅವರಿಗೆ ಕೋಪ ತರಿಸಬಹುದು. ಅವರು ಅದನ್ನು ಸ್ವೀಕರಿಸಬೇಕೆಂದಲ್ಲಿ ಅವರಿಗೆ ಅದನ್ನು ಅರ್ಥ ಮಾಡಿಸುವುದು ಒಳ್ಳೆಯದು.

ಮೀನ ಕೆಲಸದ ಒತ್ತಡ ಇಂದು ಸ್ವಲ್ಪ ಒತ್ತಡ ತರಬಹುದು. ನಿಮ್ಮ ಪೋಷಕರು ನೀಡಿದ ಬೆಂಬಲದಿಂದ ಹಣಕಾಸು ಸಮಸ್ಯೆಗಳು ನಿವಾರಣೆಯಾದಂತೆನಿಸುತ್ತವೆ. ಥಿಯೇಟರ್ ಅಥವಾ ನಿಮ್ಮ ಸಂಗಾತಿಯ ಜೊತೆಗಿನ ಊಟ ನಿಮ್ಮನ್ನು ಒಂದು ಶಾಂತವಾದ ಮತ್ತು ಅದ್ಭುತ ಲಹರಿಯಲ್ಲಿರಿಸುವಂತೆ ತೋರುತ್ತದೆ.

ಬೆಳಗಾವಿಯಲ್ಲಿ ಬರಗಾಲದಿಂದ ಭತ್ತದ ಬೆಳೆ ಹಾನಿ

• **ಉದಯವಾಹಿನಿ, ಬೆಳಗಾವಿ:**

ಉದಯವಾಹಿನಿ ಚಿತ್ರ

ರಾಮ ಕುಂದೇಕರ್ ಅವರಿಗೆ ಕೃಷಿ ಹೊರತುಪಡಿಸಿ ಬೇರೆ ಯಾವುದೇ ಜೀವನೋಪಾಯ ತಿಳಿದಿಲ್ಲ. ಸ್ವಂತ ಕೃಷಿ ಭೂಮಿ ಇಲ್ಲದ ಕಾರಣ, ಬೆಳಗಾವಿ ತಾಲ್ಲೂಕಿನ ಯಲ್ಲೂರು ಗ್ರಾಮದ ನಿವಾಸಿಯಾದ ಇವರು, ಭತ್ತ ಬೆಳೆಯಲು 1.5 ಎಕರೆ ಜಮೀನನ್ನು ಗುತ್ತಿಗೆಗೆ ಪಡೆದಿದ್ದರು. ಆದರೆ, ಪ್ರಸ್ತುತ ಎದುರಾಗಿರುವ ಬರಗಾಲ ಅವರ ಆಶಯಗಳನ್ನು ನುಚ್ಚುನೂರು ಮಾಡಿದೆ; ಬೆಳೆ ಹಾನಿಗೀಡಾಗಿದ್ದು, ಅವರು ತೀವ್ರ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದಾರೆ.

ತಮ್ಮ ಕೃಷಿ ಕೌಶಲ್ಯದ ಮೇಲೆ ನಂಬಿಕೆ ಇಟ್ಟಿದ್ದ ಕುಂದೇಕರ್, ಉತ್ತಮ ಭತ್ತದ ಬೆಳೆ ಪಡೆಯುವ ಉದ್ದೇಶದಿಂದ ಬೀಜ, ರಸಗೊಬ್ಬರಗಳು ಮತ್ತು ಇತರ ಅಗತ್ಯ ಸಾಮಗ್ರಿಗಳಿಗೆ ಬಂಡವಾಳ ಹೂಡಿದ್ದರು. ಉತ್ತಮ ಇಳುವರಿ ಬಂದರೆ ಕುಟುಂಬವನ್ನು ನಿರ್ವಹಿಸಬಹುದು ಎಂಬ ಭರವಸೆಯೊಂದಿಗೆ ಅವರು ಕೃಷಿಗೆ ಬೇಕಾದ ಹಣವನ್ನು ಹೊಂದಿಸಿದ್ದರು. ಆದರೆ, ದೀರ್ಘಕಾಲದ ಮಳೆಯ ಅಭಾವ ಮತ್ತು ನೀರಿನ ಕೊರತೆಯಿಂದಾಗಿ, ಕೇವಲ ಮೊಳಕೆಯೊಡೆದು ಬೆಳೆಯುತ್ತಿದ್ದ ಬೆಳೆ ನಾಶವಾಯಿತು. ಇದರಿಂದ ಅವರಿಗೆ ಭಾರಿ ನಷ್ಟ ಉಂಟಾಗಿದೆ. ಖಾರಿಫ್ ಮತ್ತು ರಬಿ ಬೆಳೆಗಳನ್ನು ಬೆಳೆಯಲು ಪ್ರತಿ ಎಕರೆಗೆ 15,000 ರೂಪಾಯಿ ಗುತ್ತಿಗೆ (ಬಾಡಿಗೆ) ನೀಡಬೇಕಾಗುತ್ತದೆ. ಖಾರಿಫ್ ಬೆಳೆ ಕೈಕೊಟ್ಟಿದ್ದರೂ, ಭೂಮಾಲೀಕರಿಗೆ ಗುತ್ತಿಗೆ ಹಣವನ್ನು ಪಾವತಿಸಬೇಕಾದ ಅನಿವಾರ್ಯತೆ ಕುಂದೇಕರ್ ಅವರ ಮೇಲಿದೆ. ಲಾಭವಾಗಲಿ ಅಥವಾ ನಷ್ಟವಾಗಲಿ, ಗುತ್ತಿಗೆ ಪಡೆದ ಜಮೀನಿಗಾಗಿ ತಾವು 22,500 ರೂಪಾಯಿಗಳನ್ನು ಪಾವತಿಸಲೇಬೇಕಾಗುತ್ತದೆ ಎಂದು ಅವರು ತಿಳಿಸಿದರು. ಈ ಬಾರಿ ನಾನು ಅತ್ಯಂತ ಎಚ್ಚರಿಕೆಯಿಂದ ಇರಬೇಕು ಮತ್ತು ನಷ್ಟವನ್ನು ಕಡಿಮೆ ಮಾಡಲು ಸಾಧ್ಯವಿರುವ ಎಲ್ಲಾ ಕ್ರಮಗಳನ್ನು ಕೈಗೊಳ್ಳಬೇಕು, ಎಂದು ಹೇಳಿದ ಕುಂದೇಕರ್, ಮುಂದಿನ ಕೃಷಿ ಹಂಗಾಮಿನ ಬಗ್ಗೆ ಇರುವ ಅನಿಶ್ಚಿತತೆಯ ಕುರಿತು ಕಳವಳ ವ್ಯಕ್ತಪಡಿಸಿದರು.

ಮುಲ್ಲಾಮಾರಿ ನದಿಗೆ ನೀರು ಹರಿಸಲು ಕುರಿಗಾಹಿಗಳ ಅಳಲು

• **ಉದಯವಾಹಿನಿ,ಚಿಂಚೋಳಿ:**

ಉದಯವಾಹಿನಿ ಚಿತ್ರ

ತಾಲ್ಲೂಕಿನ ಕೆಳದಂಡೆ ಮುಲ್ಲಾಮಾರಿ ನಾಗರಾಳ ಜಲಾಶಯದ ನೀರು ನದಿಗೆ ಹರಿಸುವಂತೆ ಕುರಿಗಾಹಿಗಳಾದ ಶಿವಲಿಂಗ ಪೂಜಾರಿ ಉಮರ್ ಪಟೇಲ್ ಮನವಿ ಮಾಡಿದ್ದಾರೆ.ನಾಗರಾಳ ಜಲಾಶಯ ಸಮೀಪ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕುರಿ ಮೇಕೆಗಳಿಗೆ ಧನಕರುಗಳಿಗೆ ಸಾರ್ವಜನಿಕರಿಗೆ ಕುಡಿಯಲು ನೀರಿಲ್ಲದೆ ಬಹಳಷ್ಟು ತೊಂದರೆ ಅನುಭವಿಸುತ್ತಿದ್ದಾರೆ ಹಾಗಾಗಿ ನಾಗರಾಳ ಜಲಾಶಯ ನೀರು ಮುಲ್ಲಾಮಾರಿ ನದಿಗೆ ನೀರು ಹರಿಸಿದರೆ ಬಹಳಷ್ಟು ಅನುಕೂಲವಾಗುತ್ತದೆ ಎಂದರು. ಮುಲ್ಲಾಮಾರಿ ನದಿಯಲ್ಲಿ ಕುಡಿಯಲು ನೀರಿಲ್ಲ ಹಾಗಾಗಿ ಕುರಿ,ಮೇಕೆ,ಧನಕರುಗಳಿಗೆ ನೀರು ಕುಡಿಸಲು ನಾಗರಾಳ ಜಲಾಶಯಕ್ಕೆ ಬರುತ್ತೇವೆ,ನದಿಗೆ ನೀರು ಹರಿಸಿದರೆ ಅಲ್ಪಸ್ವಲ್ಪ ಉಳಿದ ಬೆಳೆಗಳಿಗೆ ಧನಕರುಗಳಿಗೆ,ಮೇಕೆ,ಕುರಿಗಳಿಗೆ ಸಾರ್ವಜನಿಕರಿಗೆ ಕುಡಿಯಲು ನೀರು ದೊರಕುತ್ತವೆ ಕಬ್ಬು,ಅರಶೀಣ,ತೊಗರಿಬೇಳೆ, ಬಾಳೆಹಣ್ಣು,ಜೋಳ,ಕಡ್ಲೆಬೇಳೆ,ಬೆಳೆಗಳಿಗೆ ಅನುಕೂಲವಾಗುತ್ತದೆ ಎಂದು ಸರ್ಕಾರಕ್ಕೆ ಮತ್ತು ಜಿಲ್ಲಾಧಿಕಾರಿಗಳಿಗೆ ಮನವಿ ಮಾಡಿದರು.

ಕರ್ತವ್ಯ ಪ್ರಜ್ಞೆ, ಶಿಸ್ತು ಬೆಳೆಸುವುದು ಮುಖ್ಯ –ಸಿ.ಆರ್.ಮುಕುಂದ್

ಸಮಾಜದ ಎಲ್ಲಾ ವರ್ಗಗಳನ್ನೂ ಒಳಗೊಳ್ಳುವ ಮೂಲಕ ಸಂಘಟನೆಯ ಕಾರ್ಯವ್ಯಾಪ್ತಿಯನ್ನು ವಿಸ್ತರಿಸಬೇಕು. ಸಜ್ಜನ ಶಕ್ತಿಯನ್ನು ಒಗ್ಗೂಡಿಸಿ

• **ಉದಯವಾಹಿನಿ, ಶಿವಮೊಗ್ಗ:**

'ಸಮಾಜದಲ್ಲಿ ಶಾಶ್ವತ ಪರಿವರ್ತನೆ ತರಬೇಕಾದರೆ ವ್ಯಕ್ತಿಗಳಲ್ಲಿ ಕರ್ತವ್ಯ ಪ್ರಜ್ಞೆ, ಶಿಸ್ತು ಮತ್ತು ಸಾಮಾಜಿಕ ಹೊಣೆಗಾರಿಕೆ ಬೆಳೆಸುವುದು ಮುಖ್ಯ' ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಸಹ ಸರಕಾರ್ಯವಾಹ ಸಿ.ಆರ್.ಮುಕುಂದ್ ಹೇಳಿದರು.

'ರಾಷ್ಟ್ರೀಯ ಸ್ವಯಂಸೇವಕ ಸಂಘವು ನೂರು ವರ್ಷಗಳಿಂದ ಸ್ವಯಂಸೇವಕರು ಹಾಗೂ ಅವರ ಕುಟುಂಬಗಳ ಸಹಭಾಗಿತ್ವದಲ್ಲಿ

1 : ಸ್ವಯಂಸೇವಕರ ಸೇವೆ ಗಮನಾರ್ಹ
2 : ಸದ್ಭಾವನೆ ಮತ್ತು ಸಮಾಜಮುಖಿ
3 : ಕಾರ್ಯವ್ಯಾಪ್ತಿಯನ್ನು ವಿಸ್ತರಿಸಬೇಕು

ವಿವಿಧ ಚಟುವಟಿಕೆಗಳನ್ನು ನಡೆಸಿಕೊಂಡು ಬಂದಿದೆ. ಶತಮಾನ ಕಾಲದ ಪಯಣವನ್ನು ಅವಲೋಕಿಸುವುದರ ಜತೆಗೆ ಮುಂದಿನ ದಿನಗಳಲ್ಲಿ ಸಮಾಜಕ್ಕಾಗಿ ಮಾಡಬೇಕಾದ ಕಾರ್ಯಗಳ ಕುರಿತು ಪ್ರತಿಯೊಬ್ಬರೂ ಆತ್ಮವಿಮರ್ಶೆ ಮಾಡಿಕೊಳ್ಳಬೇಕು' ಎಂದು ನಡೆದ ವಿಜಯದಶಮಿ ಕಾರ್ಯಕ್ರಮದಲ್ಲಿ ತಿಳಿಸಿದರು.

'ಸಂಘದ ಶತಾಬ್ದ ವರ್ಷದ ಅಂಗವಾಗಿ ಆರಂಭದಲ್ಲಿ ಹಮ್ಮಿಕೊಂಡ ಪಥಸಂಚಲನ ಹಾಗೂ ವರ್ಷದ ಕೊನೆಯಲ್ಲಿ ನಡೆಸಿದ ಶಾಖೆಗಳ ಚಟುವಟಿಕೆಗಳು ಸಂಘಟನೆಯನ್ನು ಬಲಪಡಿಸಲು ಸಹಕಾರಿಯಾಗಿವೆ. ಸದ್ಭಾವನೆ ಸಮಾಜಮುಖಿ ಕಾರ್ಯ

ಉದಯವಾಹಿನಿ ಚಿತ್ರ

ಕ್ರಮಗಳ ಮೂಲಕ ಜನರೊಂದಿಗೆ ಸಂಪರ್ಕ ಬೆಳೆಸಲು ಹಾಗೂ ಸಾಮಾಜಿಕ ಬದಲಾವಣೆಗೆ ಪೂರಕ ವಾತಾವರಣ ನಿರ್ಮಿಸಲು ಪ್ರಯತ್ನಿಸಲಾಗಿದೆ. ಈ ಅನುಭವ ಮುಂದಿನ ಕಾರ್ಯಗಳಿಗೆ ಹೊಸ ಹುರುಪು ನೀಡಿದೆ' ಎಂದರು

'ಸಮಾಜದ ಎಲ್ಲಾ ವರ್ಗಗಳನ್ನೂ ಒಳಗೊಳ್ಳುವ ಮೂಲಕ ಸಂಘಟನೆಯ ಕಾರ್ಯವ್ಯಾಪ್ತಿಯನ್ನು ವಿಸ್ತರಿಸಬೇಕು. ಸಜ್ಜನ ಶಕ್ತಿಯನ್ನು ಒಗ್ಗೂಡಿಸಿ, ಪರಸ್ಪರ ಸಹಕಾರದೊಂದಿಗೆ ಮುನ್ನಡೆಯುವ ಮನೋಭಾವ ಬೆಳೆಸಿಕೊಳ್ಳಬೇಕು. ಸಮಾಜದ ಹಿತದೃಷ್ಟಿಯಿಂದ ಎಲ್ಲರೂ ಒಟ್ಟಾಗಿ ಕಾರ್ಯನಿರ್ವಹಿಸುವುದು ಅಗತ್ಯವಾಗಿದೆ' ಎಂದರು. 'ಬೆಂಗಳೂರಿನಲ್ಲಿ ನಡೆದ ಗೋಷ್ಠಿಗಳಲ್ಲಿ ಸುಮಾರು 22 ದೇಶಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

ಸಮಾಜದ ಸ್ವರೂಪ ಬದಲಿಸುವ ನಿಟ್ಟಿನಲ್ಲಿ ವ್ಯಕ್ತಿತ್ವ ರೂಪಿಸುವ ಕಾರ್ಯಕ್ಕೆ ಹೆಚ್ಚಿನ ಮಹತ್ವ ನೀಡಬೇಕಿದೆ. ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನವು ಅನೇಕ ಕೆಲಸಗಳನ್ನು ನಿರ್ವಹಿಸಬಹುದಾದರೂ ಮನುಷ್ಯನ ಅರಿವು, ವಿವೇಚನೆ ಮತ್ತು ಪ್ರಜ್ಞೆಗೆ ಪರ್ಯಾಯವಾಗಲಾರದು. ಮಾನವೀಯ ಮೌಲ್ಯಗಳನ್ನು ಆಧರಿಸಿದ ಚಿಂತನೆಯಿಂದಲೇ ಸಮಾಜದಲ್ಲಿ ಅರ್ಥಪೂರ್ಣ ಬದಲಾವಣೆ ತರಲು ಸಾಧ್ಯ' ಎಂದು ಅಭಿಪ್ರಾಯಪಟ್ಟರು.

'ಯಾವುದೇ ವ್ಯವಸ್ಥೆ ದುರ್ಬಲಗೊಂಡು ಕುಸಿಯದಂತೆ ಎಚ್ಚರಿಕೆ ವಹಿಸುವುದರ ಜತೆಗೆ ಕಾಲಕ್ಕೆ ತಕ್ಕ ಸುಧಾರಣೆಗಳನ್ನು ಕೈಗೊಳ್ಳಬೇಕು. ವ್ಯವಸ್ಥೆಯ ಅವನತಿಯಿಂದ ರೋಮ್, ಗ್ರೀಸ್ ಮೆಸಪಟೋಮಿಯಾದಂತಹ ಪ್ರಾಚೀನ ನಾಗರಿಕತೆಗಳು ಅಳಿವಿನಂಚಿಗೆ ತಲುಪಿದವು. ಭಾರತದಲ್ಲಿ ಅಂತಹ ಸ್ಥಿತಿ ಎದುರಾಗದಂತೆ ಸಾಮಾಜಿಕ ವ್ಯವಸ್ಥೆಯನ್ನು ಸದೃಢಗೊಳಿಸುವುದು ಅಗತ್ಯವಾಗಿದೆ' ಎಂದರು.

'ಸಮಾಜದ ಮನೋಭಾವದಲ್ಲಿ ಬದಲಾವಣೆಯಾಗದೆ ಕೇವಲ ಕಾನೂನು ಅಥವಾ ಆಡಳಿತಾತ್ಮಕ ವ್ಯವಸ್ಥೆಯಲ್ಲಿ ಸುಧಾರಣೆ ತಂದರೆ ಅದು ಹೆಚ್ಚು ಕಾಲ ಉಳಿಯುವುದಿಲ್ಲ. ಕಾನೂನಿಗೆ ಗೌರವ ನೀಡುವುದು, ಸರತಿ ಸಾಲಿನಲ್ಲಿ ನಿಲ್ಲುವುದು ಹಾಗೂ ನಿಯಮಗಳನ್ನು ಪಾಲಿಸುವಂತಹ ಶಿಸ್ತು ಪ್ರತಿಯೊಬ್ಬರಲ್ಲೂ ಬೆಳೆದಾಗ ಮಾತ್ರ ಬದಲಾವಣೆ ಪರಿಣಾಮಕಾರಿಯಾಗಲಿದೆ' ಎಂದು ಹೇಳಿದರು. 'ಮುಂದಿನ 10ರಿಂದ 15 ವರ್ಷಗಳಲ್ಲಿ ಸಮಾಜ ಪರಿವರ್ತನೆಗೆ ಆದ್ಯತೆ ನೀಡುವುದು ಸಂಘದ ಪ್ರಮುಖ ಗುರಿಯಾಗಿದೆ. ಮಾದಕ ವಸ್ತುಗಳ ವ್ಯಸನದಂತಹ ಸಾಮಾಜಿಕ ಪಿಡುಗುಗಳನ್ನು ತೊಡೆದುಹಾಕುವ ಜತೆಗೆ ಅದಕ್ಕೆ ಒಳಗಾದವರನ್ನು ಮುಖ್ಯವಾಹಿನಿಗೆ ಕರೆತಂದು, ಅವರ ಬದುಕಿನಲ್ಲಿ ಸಕಾರಾತ್ಮಕ ಬದಲಾವಣೆ ತರಲು ಪ್ರಯತ್ನಿಸಬೇಕು' ಎಂದರು. 'ಹಿಂದೂ ಕುಟುಂಬಗಳಲ್ಲಿ ಮಕ್ಕಳ ಸಂಖ್ಯೆ ಕಡಿಮೆಯಾಗುತ್ತಿರುವುದು ಹಾಗೂ ಫಲವತ್ತತೆ ದರ ಇಳಿಕೆಯಾಗುತ್ತಿರುವ ಕುರಿತು ಜಾಗೃತಿ ಮೂಡಿಸುವ ಅಗತ್ಯವಿದೆ.

> ಮಕ್ಕಳು ಒಡಹುಟ್ಟಿದವರೊಂದಿಗೆ ಬೆಳೆಯುವುದರಿಂದ ಪರಸ್ಪರ ಹೊಂದಾಣಿಕೆ ಮತ್ತು ಸಾಮಾಜಿಕ ಸಂಬಂಧಗಳನ್ನು ಬೆಳೆಸಿಕೊಳ್ಳಲು ಅನುಕೂಲವಾಗುತ್ತದೆ. ಈ ನಿಟ್ಟಿನಲ್ಲಿ ಕುಟುಂಬ ವ್ಯವಸ್ಥೆ ಹಾಗೂ ಸಂತಾನ ಪ್ರಮಾಣದ ಕುರಿತು ಜನಜಾಗೃತಿ ಮೂಡಿಸುವ ಕೆಲಸಕ್ಕೆ ಸಂಘ ಮುಂದಾಗಲಿದೆ' ಎಂದು ತಿಳಿಸಿದರು. –ಸಿ.ಆರ್.ಮುಕುಂದ್

> ಅರಬ್ ರಾಷ್ಟ್ರವೊಂದರಿಂದ ಆಗಮಿಸಿದ್ದ ಉದ್ಯಮಿಯೊಬ್ಬರು ತಮ್ಮ ಮಕ್ಕಳು ಆರ್‌ಎಸ್‌ಎಸ್‌ನ ಸ್ವಯಂಸೇವಕರಾಗಬೇಕೆಂಬ ಬಯಕೆ ವ್ಯಕ್ತಪಡಿಸಿದ್ದರು. ಸಂಘದ ಚಟುವಟಿಕೆಗಳ ಕುರಿತು ದೇಶದ ಹೊರಗೂ ಆಸಕ್ತಿ ವ್ಯಕ್ತವಾಗುತ್ತಿರುವುದಕ್ಕೆ ಇದು ಉದಾಹರಣೆಯಾಗಿದೆ' ಎಂದು ಹೇಳಿದರು. –ಸಿ.ಆರ್.ಮುಕುಂದ್

ಹಗಲು ಕಾಂಗ್ರೆಸ್ ರಾತ್ರಿ ಬಿಜೆಪಿ ಮಾಡುವರಿಗೆ ಅಧ್ಯಕ್ಷ ಸ್ಥಾನ ಬೇಡ:ನಿಷ್ಠಾವಂತರಿಗೆ ಜವಾಬ್ದಾರಿ ನೀಡಿ

• **ಉದಯವಾಹಿನಿ,ಚಿಂಚೋಳಿ**

ಉದಯವಾಹಿನಿ ಚಿತ್ರ

ತಾಲ್ಲೂಕಾ ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಸ್ಥಾನಕ್ಕೆ ನೇಮಕ ಮಾಡುವಾಗ ಹಗಲು ಕಾಂಗ್ರೆಸ್ ರಾತ್ರಿ ಬಿಜೆಪಿ ಮಾಡುವವರಿಗೆ ಅಧ್ಯಕ್ಷ ಸ್ಥಾನದ ಜವಾಬ್ದಾರಿ ನೀಡಬಾರದು ಕಾಂಗ್ರೆಸ್ ಪಕ್ಷದ ಕಟ್ಟಾಳು ನಿಷ್ಠಾವಂತ ಕಾರ್ಯಕರ್ತರಿಗೆ ಮಾಡಬೇಕೆಂದು ನಾನೊಬ್ಬ ಕೂಡ ಅಧ್ಯಕ್ಷ ಸ್ಥಾನದ ಆಕಾಂಕ್ಷಿಯಿದ್ದೇನೆ ಎಂದು ಮಹ್ಮದ್ ಮಸೂದ್ ಸೌದಾಗಾರ ಹೇಳಿದರು. ಪಟ್ಟಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು,ಈಗಾಗಲೇ ಕಾಂಗ್ರೆಸ್ ಹೈಕಮಾಂಡ್ ಅವರು ಮಂಗಳವಾರ ಪಟ್ಟಣಕ್ಕೆ ಆಗಮಿಸಿ ಅಧ್ಯಕ್ಷ ನೇಮಕ ಪ್ರಕ್ರಿಯೆ ಮಾಡಲಾಗುತ್ತಿದೆ ಅದರಂತೆ ಅರ್ಹತೆವುಳ್ಳರಿಗೆ ಅಧ್ಯಕ್ಷ ನೇಮಕ ಮಾಡಬೇಕು.

ಈಗಾಗಲೇ ನಾನು ಕಳೆದ ಮೂರು ದಶಕಗಳಿಂದ ಸತತವಾಗಿ ಕಾಂಗ್ರೆಸ್ ಪಕ್ಷದಲ್ಲಿ ನಿಷ್ಠಾವಂತ ಕಾರ್ಯಕರ್ತನಾಗಿ ಕಾಂಗ್ರೆಸ್ ಪಕ್ಷ ನೀಡಿದ ಪ್ರತಿಯೊಂದು ಜವಾಬ್ದಾರಿಯನ್ನು ನಿಭಾಯಿಸಿದ್ದೇನೆ ಹಾಗೂ 2004ರಲ್ಲಿ ಕಾಂಗ್ರೆಸ್ ಪಕ್ಷದಿಂದ ಪುರಸಭೆಯಲ್ಲಿ ಉಪಾಧ್ಯಕ್ಷನಾಗಿ ಹಾಗೂ 2016ರಲ್ಲಿ ಕೂಡ ಉಪಾಧ್ಯಕ್ಷನಾಗಿ ಕೆಲಸ ಮಾಡಿದ ಅನುಭವವಿದೆ. 1995ರಿಂದ ಸತತವಾಗಿ ಕಾಂಗ್ರೆಸ್ ಪಕ್ಷದ ಪರವಾಗಿ ಕೆಲಸ ಮಾಡುತ್ತಾ ಬಂದಿರುವೆ ಜೋತೆಯಲ್ಲಿ ಗ್ರಾಮ ಪಂಚಾಯಿತಿ,ತಾಲ್ಲೂಕಾ ಪಂಚಾಯತ್,ಜಿಲ್ಲಾ ಪಂಚಾಯತ್,ವಿಧಾನಸಭಾ ಚುನಾವಣೆ,ಲೋಕಸಭಾ ಚುನಾವಣೆ,ವಿಧಾನ ಪರಿಷತ್ ಚುನಾವಣೆಯಲ್ಲಿ ಬಹಳಷ್ಟು ಕೆಲಸ ಕಾಂಗ್ರೆಸ್ ಅಭ್ಯರ್ಥಿ ಪರವಾಗಿ ಕೆಲಸ ಮಾಡಿ ಅಭ್ಯರ್ಥಿಗಳ ಗೆಲುವಿಗಾಗಿ ಶ್ರಮಿಸಿದ್ದೇನೆ.ಹಾಗೂ ತಾಲ್ಲೂಕಿನಲ್ಲಿ ಮುಸ್ಲಿಂ ಸಮೂದಾಯದ ಮತದಾರರು ಕೂಡ ಕನಿಷ್ಠ 30ಸಾವಿರಕ್ಕಿಂತ ಹೆಚ್ಚು ಮತದಾರರಿದ್ದು ಮುಸ್ಲಿಂ ಸಮಾಜಕ್ಕೆ ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ನೇಮಿಸಿದರೆ ಮುಂದೆ ಪಕ್ಷಕ್ಕೆ ಅನುಕೂಲವಾಗುತ್ತದೆ. ಆದರೆ ಕಾಂಗ್ರೆಸ್ ಪಕ್ಷದಲ್ಲಿದ್ದು ಪಕ್ಷ ವಿರೋಧಿ ಚಟುವಟಿಕೆ ಮಾಡುವವರಿಗೆ ಮಣೆ ಹಾಕಬಾರದೆಂದು ಒತ್ತಾಯಿಸುತ್ತೇನೆ,ಈಗಾಗಲೇ ನಾನು ಕಾಂಗ್ರೆಸ್ ಪಕ್ಷದ ಕಟ್ಟಾಳುವಾಗಿದ್ದು ನಿಷ್ಠೆಯಿಂದ ಕೆಲಸ ಮಾಡಿದ್ದೇನೆ ಹಾಗಾಗಿ ಕಾಂಗ್ರೆಸ್ ಪಕ್ಷದ ಹೈಕಮಾಂಡ್ ನನ್ನನ್ನು ಪರಿಗಣಿಸಿ ತಾಲ್ಲೂಕಾ ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಸ್ಥಾನದ ಜವಾಬ್ದಾರಿ ನೀಡಬೇಕು ಎಂದು ಮಹ್ಮದ್ ಮಸೂದ್ ಸೌದಾಗಾರ ಮನವಿ ಮಾಡಿದರು.

ವಾಯುವ್ಯ ಸಾರಿಗೆ ಸಂಸ್ಥೆಗೆ ರಾಣಿ ಚೆನ್ನಮ್ಮನ ಹೆಸರು ಮರು ನಾಮಕರಣ

• **ಉದಯವಾಹಿನಿ, ಬೆಳಗಾವಿ:**

ವಾಯುವ್ಯ ರಸ್ತೆ ಸಾರಿಗೆ ಸಂಸ್ಥೆಯನ್ನು ಕಿತ್ತೂರು ರಾಣಿ ಚೆನ್ನಮ್ಮ ಸಾರಿಗೆ ಸಂಸ್ಥೆ ಎಂದು ಮರುನಾಮಕರಣ ಮಾಡಲಾಗುವುದು ಎಂದು ಮುಖ್ಯಮಂತ್ರಿ ಡಿಕೆ ಶಿವಕುಮಾರ್ ತಿಳಿಸಿದ್ದಾರೆ. ಕಿತ್ತೂರು ಉತ್ಸವದಲ್ಲಿ ಪಾಲ್ಗೊಂಡು ಮಾತನಾಡಿದ ಮುಖ್ಯಮಂತ್ರಿ, ಚೆನ್ನಮ್ಮ ಫ್ರೀಡಂ ಪಾರ್ಕ್ ನಿರ್ಮಾಣಕ್ಕೆ ತಕ್ಷಣವೇ ಆದೇಶ ನೀಡಲಾಗುವುದು. ಶಾಸಕರ ಬೇಡಿಕೆ ಮೇರೆಗೆ ಮುಂದಿನ ಬಜೆಟ್‌ನಲ್ಲಿ 40 ಕೋಟಿ ಅನುದಾನ ನೀಡಲಾಗುವುದು ಎಂದರು.

ನಾನು ನೀರಾವರಿ ಸಚಿವನಾಗಿದ್ದಾಗ ಈ ಭಾಗದ ರೈತರ ಬದುಕಿಗೆ ಶ್ರೀ ಚನ್ನವೃಷಭೇಂದ್ರ ಅವರ ಹೆಸರಲ್ಲಿ ಏತ ನೀರಾವರಿ ಯೋಜನೆ ಮಾಡಬೇಕು ಎಂದು ಮನವಿ ಮಾಡಿದ್ದಾರೆ. 520 ಕೋಟಿ ರೂ. ಮೊತ್ತದ ಯೋಜನೆಗೆ ಸರ್ಕಾರ ಚಿಂತನೆ ನಡೆಸಿದೆ. ಈ ಕ್ಷೇತ್ರದಲ್ಲಿ 100 ಹಾಸಿಗೆಗಳ ಆಸ್ಪತ್ರೆ, 300 ಕೋಟಿ ರೂಪಾಯಿ ಮೊತ್ತದ ಲೋಕೋಪಯೋಗಿ ಇಲಾಖೆ ಕಾಮಗಾರಿ ಸೇರಿದಂತೆ ಸುಮಾರು 1000 ಕೋಟಿ ವೆಚ್ಚದ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು. ಕಿತ್ತೂರಿಗೆ ತನ್ನದೇ ಆದ ಇತಿಹಾಸವಿದೆ. ಚೆನ್ನಮ್ಮ ಕನ್ನಡದ ಮಣ್ಣಿಗಾಗಿ ಮಡಿದ ದಿಟ್ಟ ಹೋರಾಟಗಾರ್ತಿ. ಕಿತ್ತೂರಿನ ಕಥೆ ಚೆನ್ನಮ್ಮ ಅವರ ಇತಿಹಾಸ ಸಾರುತ್ತದೆ, ಸ್ವಾಭಿಮಾನದ ಮಹಿಮೆ. ರಾಣಿ ಚೆನ್ನಮ್ಮನ ಧೈರ್ಯ ಪ್ರತಿ ಪೀಳಿಗೆಗೆ ಸ್ವಾಭಿಮಾನದ ಪಾಠ. ಕಿತ್ತೂರು ಎಂದರೆ ವೀರರ ಸಂಕೇತ. ಕಿತ್ತೂರು ಉತ್ಸವ ನಾಡಿನ ಹೆಮ್ಮೆಯ ಸಂಕೇತ. ಚೆನ್ನಮ್ಮನ ಸಾಹಸ ನಮ್ಮೆಲ್ಲರ ಸ್ಫೂರ್ತಿ, ಅವರ ತ್ಯಾಗದ ನೆನಪು ಅಜರಾಮರ. ಚೆನ್ನಮ್ಮ ಎಂಬುದು ಕೇವಲ ಹೆಸರಲ್ಲ ಸ್ವಾಭಿಮಾನ, ಶೌರ್ಯ, ಸ್ವಾತಂತ್ರ್ಯದ ಸಂಕೇತ ಎಂದು ಹೇಳಿದರು.

ಕನ್ನಡ ರಾಜ್ಯೋತ್ಸವವನ್ನು ಸಡಗರ, ಸಂಭ್ರಮದಿಂದ ಆಚರಿಸಲು ನಿರ್ಧಾರ.

• **ಉದಯವಾಹಿನಿ, ಕೊಲ್ಹಾರ:**

ಪ್ರತಿ ವರ್ಷದಂತೆ ಈ ವರ್ಷವೂ ಕನ್ನಡ ರಾಜ್ಯೋತ್ಸವವನ್ನು ಸಡಗರ, ಸಂಭ್ರಮದಿಂದ ಹಾಗೂ ಯಾವುದೇ ತಾರತಮ್ಯವಿಲ್ಲದೆ ಎಲ್ಲರ ಸಹಭಾಗಿತ್ವದಲ್ಲಿ ಹಬ್ಬದಂತೆ ಅಚ್ಚುಕಟ್ಟಾಗಿ ಆಚರಿಸೋಣ ಎಂದು ತಹಶೀಲ್ದಾರ್ ಎಸ್.ಎಮ್. ಮ್ಯಾಗೇರಿ ಹೇಳಿದರು.

ಪಟ್ಟಣ ಪಂಚಾಯಿತಿ ಕಾರ್ಯಾಲಯದಲ್ಲಿ ನಡೆದ ಕನ್ನಡ ರಾಜ್ಯೋತ್ಸವದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.ನವೆಂಬರ್ 1ರಂದು ಬೆಳಿಗ್ಗೆ 8 ಗಂಟೆಗೆ ಪಟ್ಟಣದ ಕಲ್ಲಿನಾಥ ಶ್ರೀಗಳ ಮಠದಿಂದ ಮುಖ್ಯ ರಸ್ತೆಗಳಲ್ಲಿ ಸಕಲ ವಾದ್ಯ ವೈಭವಗಳೊಂದಿಗೆ ಪ್ರಭಾತಫೇರಿ ನಡೆಸಲಾಗುವುದು. ಬಳಿಕ ಪಟ್ಟಣದ ಮಧ್ಯಭಾಗದಲ್ಲಿರುವ ಎಂಪಿಎಸ್ ಶಾಲೆಯ ಆವರಣದಲ್ಲಿ ಕಾರ್ಯಕ್ರಮ ಜರುಗಲಿದ್ದು, ತಾಯಿ ಭುವನೇಶ್ವರಿ ಭಾವಚಿತ್ರಕ್ಕೆಪೂಜೆ ಸಲ್ಲಿಸಿ ಧ್ವಜಾರೋಹಣ ನೆರವೇರಿಸಲಾಗುವುದು.

ನಂತರ ಮಕ್ಕಳ ಸಾಂಸ್ಕೃತಿಕ ಕಾರ್ಯಕ್ರಮಗಳು ಹಾಗೂ ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿ ಪರೀಕ್ಷೆಗಳಲ್ಲಿ ಕನ್ನಡ ವಿಷಯದಲ್ಲಿ ಹೆಚ್ಚು ಅಂಕ ಗಳಿಸಿದ

ಉದಯವಾಹಿನಿ ಚಿತ್ರ

ವಿದ್ಯಾರ್ಥಿಗಳಿಗೆ ಸನ್ಮಾನ ಸಮಾರಂಭ ಸೇರಿದಂತೆ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಎಲ್ಲಾ ಇಲಾಖೆಗಳ ಅಧಿಕಾರಿಗಳು ಕಡ್ಡಾಯವಾಗಿ ಭಾಗವಹಿಸಬೇಕು. ಗೈರುಹಾಜರಾಗುವ ಅಧಿಕಾರಿಗಳಿಗೆ ನೋಟಿಸ್ ನೀಡಲಾಗುವುದು ಎಂದು ಎಚ್ಚರಿಕೆ ನೀಡಿದರು.

ಮುಖ್ಯವಾಗಿ ಶಿಕ್ಷಕರು ಹಾಗೂ ಶಿಕ್ಷಕಿಯರು ತಮ್ಮ ಶಾಲೆಯ ಮಕ್ಕಳೊಂದಿಗೆ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಬೇಕು. ಕನ್ನಡ ನಾಡು, ನುಡಿ ಹಾಗೂ ಸಂಸ್ಕೃತಿಯನ್ನು ಬಿಂಬಿಸುವ ಸಾಂಸ್ಕೃತಿಕ ಹಾಡುಗಳು, ವೇಷಭೂಷಣಗಳ ಪ್ರದರ್ಶನಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು. ಎಲ್ಲರೂ ಒಗ್ಗಟ್ಟಿನಿಂದ ಭಾಗವಹಿಸಿ ಕನ್ನಡ ರಾಜ್ಯೋತ್ಸವವನ್ನು ಅರ್ಥಪೂರ್ಣವಾಗಿ ಆಚರಿಸಬೇಕು ಎಂದು ಹೇಳಿದರು.

ಸಭೆಯಲ್ಲಿ ಅಧಿಕಾರಿಗಳ ಗೈರುಹಾಜರಿಗೆ ಸಂಘಟನೆಗಳ ಪದಾಧಿಕಾರಿಗಳ ಅಸಮಾಧಾನ ಸಭೆಗೆ ವಿವಿಧ ಇಲಾಖೆಗಳ ಅಧಿಕಾರಿಗಳು ಗೈರುಹಾಜರಾಗಿದ್ದರಿಂದ ಅಸಮಾಧಾನ ವ್ಯಕ್ತಪಡಿಸಿದ ವಿವಿಧ ಸಂಘಟನೆಗಳ ಪದಾಧಿಕಾರಿಗಳು, ಸಾರ್ವಜನಿಕ ಸಮಸ್ಯೆಗಳ ಕುರಿತು ಚರ್ಚಿಸುವ ಇಂತಹ ಮಹತ್ವದ ಸಭೆಗಳಿಗೆ ಸಂಬಂಧಪಟ್ಟ ಇಲಾಖೆಗಳ ಅಧಿಕಾರಿಗಳು ಕಡ್ಡಾಯವಾಗಿ ಹಾಜರಾಗಬೇಕು, ಜನರ ಸಮಸ್ಯೆಗಳಿಗೆ ಸ್ಪಂದಿಸಬೇಕು ಎಂದು ಅಭಿಪ್ರಾಯಪಟ್ಟರು.

ಈ ಸಂದರ್ಭದಲ್ಲಿ ಪಟ್ಟಣ ಪಂಚಾಯಿತಿ ಅಧ್ಯಕ್ಷ ದಸ್ತಗೀರ್ ಕಲಾದಗಿ, ಉಪಾಧ್ಯಕ್ಷೆ ರಾಜಮಾ ನದಾಫ್, ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಸುನಿಲ್ ಮುದ್ದಿನ್, ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ವಿರೇಶ್ ಹಟ್ಟಿ, ಪಿಎಸ್‌ಐ ಅಶೋಕ್ ನಾಯಕ್, ಕರ್ನಾಟಕ ರಕ್ಷಣಾ ವೇದಿಕೆಯ ತಾಲೂಕು ಅಧ್ಯಕ್ಷ ಮಾಂತೇಶ್ ಗಿಡ್ಡಪ್ಪಗೋಳ, ಅನ್ವರ್ ಕಂಕರಪೀರ, ದಶರಥ ಈಟಿ,ಚಂದ್ರಶೇಖರ ಈಟಿ,ಅಪ್ಪಾಸಿ ಮಟ್ಯಾಳ, ವಿವಿಧ ಶಾಲೆಯ ಶಿಕ್ಷಕರು ಹಾಗೂ ಇತರರು ಉಪಸ್ಥಿತರಿದ್ದರು.

ಜಾತಿ, ಧರ್ಮಕ್ಕಿಂತ ಗುಣ ಮುಖ್ಯ: ಪ್ರಲ್ಹಾದ ಜೋಶಿ

• **ಉದಯವಾಹಿನಿ, ಹುಬ್ಬಳ್ಳಿ:**

'ಮಹರ್ಷಿ ವಾಲ್ಮೀಕಿಯವರ ಆದರ್ಶಗಳು ಕೇವಲ ಒಂದು ಸಮುದಾಯಕ್ಕೆ ಸೀಮಿತವಲ್ಲ, ಎಲ್ಲಾ ಸಮುದಾಯದವರೂ ಅವರ ಚಿಂತನೆ ಹಾಗೂ ಆದರ್ಶಗಳನ್ನು ಪಾಲಿಸಬೇಕು' ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಹೇಳಿದರು.

ನಗರದ ಬಮ್ಮಾಪುರ ಓಣಿಯ ಗುರುಸಿದ್ದೇಶ್ವರ ಕಲ್ಯಾಣ ಮಂಟಪದಲ್ಲಿ ಹುಬ್ಬಳ್ಳಿ– ಧಾರವಾಡ ಪೂರ್ವ ವಿಧಾನಸಭಾ ಕ್ಷೇತ್ರದ ಎಸ್‌ಟಿ ಮೋರ್ಚಾ ವತಿಯಿಂದ ಹಮ್ಮಿಕೊಂಡಿದ್ದ ಮಹರ್ಷಿ ವಾಲ್ಮೀಕಿ ಜಯಂತಿ ಮತ್ತು ವೀರ ಮದಕರಿ ನಾಯಕ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ, ಮಾತನಾಡಿದರು.

'ಸಮಾಜಕ್ಕೆ ಮೌಲ್ಯಯುತವಾದ 'ರಾಮಾಯಣ' ಮಹಾಕಾವ್ಯವನ್ನು ಕೊಡುಗೆಯಾಗಿ ನೀಡಿ, ಧರ್ಮದ ಹಾದಿಯನ್ನು ತೋರಿಸಿದ ಮಹರ್ಷಿ ವಾಲ್ಮೀಕಿ ಅವರ ಚಿಂತನೆಗಳನ್ನು ಎಲ್ಲರೂ ಪಾಲಿಸಬೇಕು. ಜಾತಿ, ಧರ್ಮಕ್ಕೆ

ಉದಯವಾಹಿನಿ ಚಿತ್ರ

> ಪಕ್ಷದ ಕಾರ್ಯಕರ್ತರು ಮಹನೀಯರ ಜಯಂತಿ ಕಾರ್ಯಕ್ರಮದ ವೇಳೆ ಅವರಿಗೆ ಸಂಬಂಧಿಸಿದ ಚಿತ್ರಕಲೆ ಬಿಡಿಸುವ ಸ್ಪರ್ಧೆ ಸೇರಿದಂತೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಬೇಕು. –ಪ್ರಲಾದ ಜೋಶಿ, ಕೇಂದ್ರ ಸಚಿವ

ಮಹತ್ವ ಕೊಡದೆ, ವ್ಯಕ್ತಿಯ ವ್ಯಕ್ತಿತ್ವಕ್ಕೆ ಹಾಗೂ ಗುಣಕ್ಕೆ ಮಹತ್ವ ನೀಡಬೇಕು. ಜಾತಿಗಿಂತ ವ್ಯಕ್ತಿಯ ಗುಣಮುಖ್ಯ' ಎಂದರು. 'ವಾಲ್ಮೀಕಿ ಅವರು ರಚಿಸಿದ ಮೂಲ ರಾಮಾಯಣದ ನಂತರ ಭಾರತೀಯ ಸಾಹಿತ್ಯ ಮತ್ತು ವಿವಿಧ ಪ್ರಾದೇಶಿಕ ಭಾಷೆಗಳಲ್ಲಿ ಹಲವು ಸ್ವತಂತ್ರ ರಾಮಾಯಣ ಕೃತಿಗಳು ರಚನೆಯಾದವು. ಆದರೂ ವಾಲ್ಮೀಕಿ ರಾಮಾಯಣಕ್ಕೆ ಮಹತ್ವದ ಸ್ಥಾನವಿದೆ.

ವೀರ ಮದಕರಿ ನಾಯಕ ಅವರು ಚಿತ್ರದುರ್ಗದ ಕೋಟೆಯ ರಕ್ಷಣೆಗಾಗಿ ಹಾಗೂ ನಾಡಿನ ಗೌರವಕ್ಕಾಗಿ ಎಂದಿಗೂ ಶತ್ರುಗಳಿಗೆ ತಲೆಬಾಗಲಿಲ್ಲ. ಅವರ ಸಾಹಸ, ಧೈರ್ಯ ಕನ್ನಡಿಗರ ಸ್ವಾಭಿಮಾನದ ಪ್ರತೀಕವಾಗಿದೆ' ಎಂದರು. ಬಿಜೆಪಿ ಎಸ್‌ಟಿ ಮೋರ್ಚಾ ರಾಜ್ಯ ಘಟಕದ ಅಧ್ಯಕ್ಷ ಬಂಗಾರು ಹನುಮಂತ ಮಾತನಾಡಿದರು. ಪ್ರಧಾನಿ ನರೇಂದ್ರ ಮೋದಿ ಅವರ ಮಾಸಿಕ ರೇಡಿಯೊ ಕಾರ್ಯಕ್ರಮ 'ಮನ್ ಕಿ ಬಾತ್' ಅನ್ನು ಪಕ್ಷದ ಮುಖಂಡರು, ಕಾರ್ಯಕರ್ತರು ಆಲಿಸಿದರು.

ಜ್ಞಾನೇಶ್ ಕುಮಾರ್ ರಾಜೀನಾಮೆಗೆ ಒತ್ತಾಯಿಸಿ ಪ್ರತಿಭಟನೆ

• **ಉದಯವಾಹಿನಿ, ಶಿರಾಳಕೊಪ್ಪ:**

'ಕೇಂದ್ರ ಚುನಾವಣಾ ಆಯೋಗದ ಮುಖ್ಯ ಆಯುಕ್ತ ಜ್ಞಾನೇಶ್ ಕುಮಾರ್ ರಾಜೀನಾಮೆ ನೀಡಬೇಕು. ಎಸ್‌ಐಆರ್ ಪ್ರಕ್ರಿಯೆ ಸ್ಥಗಿತಗೊಳಿಸಬೇಕು' ಎಂದು ಆಗ್ರಹಿಸಿ ಸಾಲಿಡಾರಿಟಿ ಯೂತ್ ಮೂವ್‌ಮೆಂಟ್ ಎಸ್‌ಐಒ ವತಿಯಿಂದ ಪಟ್ಟಣದಲ್ಲಿ ಈಚೆಗೆ ಪ್ರತಿಭಟನೆ ನಡೆಸಿ ಉಪತಹಶೀಲ್ದಾರ್‌ಗೆ ಮನವಿ ಸಲ್ಲಿಸಲಾಯಿತು.

'ಎಸ್‌ಐಆರ್ ಮೂಲಕ ಅಕ್ರಮ ಎಸಗಿ ಮತದಾರರ ಮತ ಕಳ್ಳತನ ಮಾಡಲಾಗಿದೆ ಎಂಬುದನ್ನು ಪತ್ರಿಕಾ ವರದಿಗಳು ಬಹಿರಂಗಪಡಿಸಿವೆ. ಪಶ್ಚಿಮ ಬಂಗಾಳದಲ್ಲಿಮತದಾನದ ಹಕ್ಕು ಕಳೆದುಕೊಂಡವರಿಗೆ ಪುನಃ ಮತ ಹಕ್ಕನ್ನು ನ್ಯಾಯಾಲಯ ನೀಡಿದೆ. ಈ ಕಾರಣದಿಂದ ಜ್ಞಾನೇಶ್ ಕುಮಾರ್ ಅವರನ್ನು ರಾಷ್ಟ್ರಪತಿ ಕೂಡಲೇ ವಜಾಗೊಳಿಸಬೇಕು' ಎಂದು ರಾಜ್ಯ ಘಟಕದ ಮಾಧ್ಯಮ ಕಾರ್ಯದರ್ಶಿ ಇರ್ಷಾದ್ ವೇಣೂರು ಆಗ್ರಹಿಸಿದರು.

ಉದ್ಯೋಗಕ್ಕಾಗಿ ಇಸ್ರೇಲ್‌ಗೆ ತೆರಳಿದ್ದ ಮಂಗಳೂರಿನ ವ್ಯಕ್ತಿ ನಿಗೂಢ ನಾಪತ್ತೆ

• **ಉದಯವಾಹಿನಿ, ಮಂಗಳೂರು:**

ಉತ್ತಮ ಭವಿಷ್ಯ ಹಾಗೂ ಜೀವನೋಪಾಯಕ್ಕಾಗಿ ಉದ್ಯೋಗ ವೀಸಾದಡಿ ವಿದೇಶವಾದ ಇಸ್ರೇಲ್‌ಗೆ ತೆರಳಿದ್ದ ಮಂಗಳೂರು ಮೂಲದ ವ್ಯಕ್ತಿಯೊಬ್ಬರು ಕಳೆದ ಹಲವು ದಿನಗಳಿಂದ ನಿಗೂಢವಾಗಿ ನಾಪತ್ತೆಯಾಗಿದ್ದಾರೆ. ಇದರಿಂದ ಆತಂಕಗೊಂಡಿರುವ ಕುಟುಂಬಸ್ಥರು ಮಂಗಳೂರು ನಗರ ಪೊಲೀಸ್ ಆಯುಕ್ತರ ಜೊತೆಗೆ ಇಸ್ರೇಲ್‌ನ ಟೆಲ್ ಅವೀವ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿಗೂ ಅಧಿಕೃತ ಇಮೇಲ್ ದೂರು ಸಲ್ಲಿಸಿ ತುರ್ತು ರಕ್ಷಣೆಗೆ ಮನವಿ ಮಾಡಿದ್ದಾರೆ. ಮಂಗಳೂರಿನ ಪಡೀಲ್ ಸಮೀಪದ ಕಣ್ಣೂರು ಕೊಡೆಕ್ಕಲ್ ನಿವಾಸಿ ಶಡ್ರಕ್ ಇಮ್ಯಾನುವಲ್ (41) ನಾಪತ್ತೆಯಾದ ವ್ಯಕ್ತಿ. ಶಡ್ರಕ್ ಇಮ್ಯಾನುವಲ್ ಅವರು ಮಂಗಳೂರಿನ ನೇಮಕಾತಿ ಸಂಸ್ಥೆಯೊಂದರ ಮೂಲಕ ಅಧಿಕೃತ ಉದ್ಯೋಗ ವೀಸಾ ಪಡೆದುಕೊಂಡು ದಿನಾಂಕ 2025ರ ಮೇ 16ರಂದು ಇಸ್ರೇಲ್‌ಗೆ ಪ್ರಯಾಣ ಬೆಳೆಸಿದ್ದರು. ಅವರು ಇಸ್ರೇಲ್‌ನ ನಜರೆತ್ ಸಮೀಪದ ನೊಫ್ ಹಗಲಿಲ್ ಎಂಬಲ್ಲಿರುವ ಯುಸಿಟಿ ಲಿಕ್ವಿಡ್ ಸೊಲ್ಯೂಷನ್ಸ್ ಕಂಪನಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದರು ಎಂದು ಕುಟುಂಬಸ್ಥರು ತಿಳಿಸಿದ್ದಾರೆ.

ಅಕ್ಟೋಬರ್ 16ರಂದು ಮೊಬೈಲ್ ಸಂಪರ್ಕ ಸ್ಥಗಿತ: ಪತ್ನಿ ಡೇಸಿ ಇಮ್ಯಾನುವಲ್ ಅವರು ನೀಡಿರುವ ಮಾಹಿತಿಯ ಪ್ರಕಾರ, ಶಡ್ರಕ್ ಅವರು ನಿತ್ಯವೂ ಕುಟುಂಬದೊಂದಿಗೆ ವಾಟ್ಸ್‌ಆ್ಯಪ್ ಮೂಲಕ ಸಂಪರ್ಕದಲ್ಲಿದ್ದರು. ಆದರೆ, ಅಕ್ಟೋಬರ್ 16, 2026ರ ಶುಕ್ರವಾರ ರಾತ್ರಿ 8:05ರ ಸುಮಾರಿಗೆ ವಾಟ್ಸ್‌ಆಯಪ್ ವಿಡಿಯೋ ಕಾಲ್ ಮೂಲಕ ಸುಮಾರು 22 ನಿಮಿಷಗಳ ಕಾಲ ಕುಟುಂಬದೊಂದಿಗೆ ಮಾತನಾಡಿದ್ದರು. ಅದಾದ ನಂತರ ಅವರ ಮೊಬೈಲ್ ಸಂಪರ್ಕ ಸಂಪೂರ್ಣವಾಗಿ ಕಡಿದುಹೋಗಿದೆ.

ವಿಶ್ವ ಪಾರಂಪರಿಕ ತಾಣಗಳ ಪಟ್ಟಿಗೆ ಸೇರ್ಪಡೆಗೊಂಡ ಹಳೇಬೀಡು

ದ್ವಾರಸಮುದ್ರ ಕೆರೆಯ ಏರಿ, ಜಾವಗಲ್ ರಸ್ತೆ ಹಾಗೂ ಬೇಲೂರು ರಸ್ತೆಯ ಅಕ್ಕಪಕ್ಕದಲ್ಲಿ ಕಸದ ರಾಶಿ ಕಾಣಿಸಿಕೊಳ್ಳುತ್ತಿದ್ದು, ಪ್ರವಾಸಿಗರನ್ನು ಸ್ವಾಗತಿಸುತ್ತಿದೆ

• **ಉದಯವಾಹಿನಿ, ಹಳೇಬೀಡು:**

ಹೊಯ್ಸಳರ ರಾಜಧಾನಿ ದೋರಸಮುದ್ರ (ದ್ವಾರಸಮುದ್ರ) ಇಂದಿನ ಹಳೇಬೀಡು ಯುನೆಸ್ಕೊ ವಿಶ್ವ ಪಾರಂಪರಿಕ ತಾಣಗಳ ಪಟ್ಟಿಗೆ ಸೇರ್ಪಡೆಗೊಂಡು ಮೂರು ವರ್ಷ ಕಳೆದರೂ ಪ್ರವಾಸೋದ್ಯಮಕ್ಕೆ ಅಗತ್ಯ ಮೂಲಸೌಕರ್ಯಗಳ ಅಭಿವೃದ್ಧಿ ನಿರೀಕ್ಷಿತ ಮಟ್ಟದಲ್ಲಿ ಕಾಣಿಸುತ್ತಿಲ್ಲ. ವಿಶ್ವದ ಗಮನ ಸೆಳೆದಿರುವ ಹೊಯ್ಸಳೇಶ್ವರ ದೇವಾಲಯಕ್ಕೆ

1 : ವಸತಿ ಸೌಲಭ್ಯಗಳ ಕೊರತೆ ಎದುರಾಗಿದೆ
2 : ಪುರಾತತ್ವ ಅಧಿನಿಯಮ ಅಡ್ಡಿಯಾಗಿದೆ
3 : ಬೀದಿ ನಾಯಿಗಳ ಹಾವಳಿ ಹೆಚ್ಚಾಗಿರುವುದು

ಭೇಟಿ ನೀಡುವ ಪ್ರವಾಸಿಗರಿಗೆ ವಸತಿ, ಶೌಚಾಲಯ, ಸ್ವಚ್ಛತೆ ಹಾಗೂ ಶುದ್ಧ ಕುಡಿಯುವ ನೀರಿನ ಕೊರತೆ ಕಾಡುತ್ತಿದೆ.

ಜೈನ ಬಸದಿ, ಕೇದಾರೇಶ್ವರ ದೇವಾಲಯ ಬಳಿ ಶೌಚಾಲಯ ಇಲ್ಲದೇ ದೂರದ ಪ್ರವಾಸಿಗರು ಕಷ್ಟ ಅನುಭವಿಸುವಂತಾಗಿದೆ. ಹೊಯ್ಸಳೇಶ್ವರ ದೇವಾಲಯ ವೀಕ್ಷಣೆಗೆ ಬರುವ ಪ್ರವಾಸಿಗರಿಗೆ ವಸತಿ ಸೌಲಭ್ಯಗಳ ಕೊರತೆ ಎದುರಾಗಿದೆ. ಕರ್ನಾಟಕ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ಹೋಟೆಲ್ ಮಯೂರದಲ್ಲಿ ನಾಲ್ಕು ಕೊಠಡಿ ಮಾತ್ರ ಲಭ್ಯವಿದೆ. ಹೆಚ್ಚುವರಿ ಕಟ್ಟಡ ನಿರ್ಮಿಸಲು ಪುರಾತತ್ವ

ಉದಯವಾಹಿನಿ ಚಿತ್ರ

> ಹೊಯ್ಸಳರ ರಾಜಧಾನಿಯಾಗಿದ್ದ ಹಳೇಬೀಡು ಈಗ ಹೋಬಳಿ ಕೇಂದ್ರವಾಗಿದೆ. ಊರು ನೋಡಿದಾಕ್ಷಣ ಪರಂಪರೆಯ ದರ್ಶನ ಆಗಬೇಕು. ರಾಜ ವೈಭವ ಮರುಕಳಿಸುವಂತಾಗಬೇಕು. –ಮುಳ್ಳಯ್ಯ,

ಅಧಿನಿಯಮ ಅಡ್ಡಿಯಾಗಿದೆ. ಖಾಸಗಿ ಅತಿಥಿಗೃಹಗಳು ಸಹ ಸಮರ್ಪಕವಾಗಿಲ್ಲ. ಹೋಂಸ್ಟೇ ಆರಂಭಿಸಲು ಸ್ಥಳೀಯರಲ್ಲಿ ನಿರಾಸಕ್ತಿ ಕಂಡು ಬಂದಿದೆ. ಹಳೆಯ ಕಾಲದ ಮನೆಗಳಲ್ಲಿ ಹೋಂಸ್ಟೇ ಮಾಡಲು ಪ್ರವಾಸೋದ್ಯಮ ಇಲಾಖೆ ಸಹಾಯಧನ ಕೊಡುತ್ತದೆ ಎಂದರೂ ಮನೆ ಮಾಲೀಕರು ಮುಂದಾಗುತ್ತಿಲ್ಲ.

ಹೊಯ್ಸಳೇಶ್ವರ ದೇವಾಲಯದ ಪ್ರವೇಶದ್ವಾರದ ಸಮೀಪ ಬೀದಿ ನಾಯಿಗಳ ಹಾವಳಿ ಹೆಚ್ಚಾಗಿರುವುದರಿಂದ ಪ್ರವಾಸಿಗರಿಗೆ ಕಿರಿಕಿರಿ ಆಗುತ್ತಿದೆ. ಬೀದಿ ನಾಯಿ ಸ್ಥಳಾಂತರ ಮಾಡುವ ಕೆಲಸ

> ಪ್ರವಾಸಿ ತಾಣಗಳ ಪ್ರಚಾರ ಕೈಗೊಳ್ಳಲಾಗಿದೆ. ತಾಣಗಳಿಗೆ ದಾರಿ ತೋರಿಸುವ ಫಲಕ ಹಾಕಲಾಗಿದೆ. ಜಿಲ್ಲಾಧಿಕಾರಿ ನಿರ್ದೇಶನದಂತೆ ಹೆಚ್ಚುವರಿ ಫಲಕ ಹಾಕಲು ಕ್ರಮ ತೆಗೆದುಕೊಳ್ಳುತ್ತೇವೆ. –ಉಪ ನಿರ್ದೇಶಕಿ ರೂಪಾ.

ತುರ್ತಾಗಿ ಆಗಬೇಕಾಗಿದೆ. ಈ ನಿಟ್ಟಿನಲ್ಲಿ ಜಿಲ್ಲಾಡಳಿತ ಕ್ರಮ ಕೈಗೊಳ್ಳಬೇಕು ಎಂಬುದು ಸ್ಥಳೀಯರ ಒತ್ತಾಯವಾಗಿದೆ.

ದ್ವಾರಸಮುದ್ರ ಕೆರೆಯ ಏರಿ, ಜಾವಗಲ್ ರಸ್ತೆ ಬೇಲೂರು ರಸ್ತೆಯ ಅಕ್ಕಪಕ್ಕದಲ್ಲಿ ಕಸದ ರಾಶಿ ಕಾಣಿಸಿಕೊಳ್ಳುತ್ತಿದ್ದು, ಪ್ರವಾಸಿಗರನ್ನು ಸ್ವಾಗತಿಸುತ್ತಿದೆ. ಐತಿಹಾಸಿಕ ಸ್ಮಾರಕಗಳ ಸೌಂದರ್ಯವನ್ನು ಕಣ್ತುಂಬಿಕೊಳ್ಳಲು ಬರುವವರಿಗೆ ಹಳೇಬೀಡು ಪ್ರವೇಶಿಸಿದಾಕ್ಷಣ ಕಸದ ರಾಶಿ ಕಾಣುತ್ತಿರುವುದಕ್ಕೆ ಪ್ರವಾಸಿಗರಿಂದ ಅಸಮಾಧಾನದ ಮಾತು ಕೇಳಿ ಬರುತ್ತಿದೆ.

ಹಳೇಬೀಡು ಗ್ರಾಮದಲ್ಲಿಯೇ ಇರುವ ಮುತ್ತಿನ ವೀರಭದ್ರೇಶ್ವರ ಹಾಗೂ ಕಸ್ತೂರಿ ರಂಗನಾಥ ಸ್ವಾಮಿ ದೇವಾಲಯಗಳಿಗೆ ಪ್ರಚಾರವಿಲ್ಲದೇ ಪ್ರವಾಸಿಗರು ಸುಳಿಯುತ್ತಿಲ್ಲ. ಈ ದೇಗುಲಗಳಿಗೆ ತಲುಪಲು ವಿಶಾಲವಾದ ರಸ್ತೆ ಹಾಗೂ ಮಾಹಿತಿ ನೀಡುವ ಫಲಕಗಳಿಲ್ಲದೇ ರಾಜರ ಕಾಲದ ದೇಗುಲಗಳು ಪ್ರವಾಸಿಗರಿಂದ ದೂರ ಉಳಿದಿವೆ.

ಪ್ರಚಾರದ ಕೊರತೆಯಿಂದ ಚಟಚಟ್ಟಿಹಳ್ಳಿಯ ಚಟ್ಟೇಶ್ವರ ದೇವಾಲಯ, ಅಡಗೂರಿನ ಲಕ್ಷ್ಮಿನಾರಾಯಣ ದೇಗುಲಗಳಿಗೆ ಪ್ರವಾಸಿಗರು ಸುಳಿಯುತ್ತಿಲ್ಲ. ಹುಲಿಕೆರೆ ಪುಷ್ಕರಣಿಗೆ ದೊಡ್ಡವಾಹನ ತೆರಳಿದರೆ ಪುನಃ ಹಿಂದಿರುಗಿ ಬರಲು ರಸ್ತೆ ವಿಶಾಲವಾಗಿಲ್ಲ. ವಿಶ್ವಪರಂಪರೆ ಎಂದರೆ ಪ್ರವಾಸಿತಾಣದ ಆಕರ್ಷಣೆ ಜೊತೆಗೆ ಊರು ಕಳೆಕಟ್ಟುವಂತಿರಬೇಕು. ಹೊಯ್ಸಳೇಶ್ವರ ದೇವಾಲಯಕ್ಕೆ ದಕ್ಷಿಣ ದಿಕ್ಕಿನಲ್ಲಿ ಪ್ರವೇಶ ದ್ವಾರ ಇದೆ. ದ್ವಾರಸಮುದ್ರ ಕೆರೆ ಹಾಗೂ ಹಳೇಬೀಡು ಪೇಟೆ ಬೀದಿಗೆ ಸಂಪರ್ಕ ಕಲ್ಪಿಸುವ ಉತ್ತರ ದಿಕ್ಕಿನ ಪ್ರವೇಶ ದ್ವಾರ ತೆರೆಯಬೇಕು. ಎರಡೂ ದ್ವಾರದಲ್ಲಿಯೂ ಪ್ರವಾಸಿಗರು ಓಡಾಡುವಂತಾಗಬೇಕು.

ಜಿಲ್ಲಾಡಳಿತ, ಪ್ರವಾಸೋದ್ಯಮ, ಕೇಂದ್ರ ಪುರಾತತ್ವ ಇಲಾಖೆ, ಸ್ಥಳೀಯ ಆಡಳಿತ ಹಾಗೂ ಸಂಬಂಧಪಟ್ಟ ಇಲಾಖೆಗಳು ಸಮನ್ವಯದಿಂದ ಹಳೇಬೀಡು ಅಭಿವೃದ್ಧಿಗೆ ಕೈ ಜೋಡಿಸಬೇಕು. ಕೇಂದ್ರ ಹಾಗೂ ರಾಜ್ಯ ಸರ್ಕಾರ ಅನುದಾನದಿಂದ ಹಳೇಬೀಡು ಅಭಿವೃದ್ಧಿಗೆ ಪ್ರಾಧಿಕಾರ ರಚಿಸಬೇಕು ಎಂಬುದು ಸ್ಥಳೀಯರ ಮನವಿಯಾಗಿದೆ.

> ಹಳೇಬೀಡಿಗೆ ಬರುವ ಪ್ರವಾಸಿಗರು ಇಲ್ಲಿನ ಕಲಾ ವೈಭವದ ಜೊತೆಗೆ ಉತ್ತಮ ಮೂಲಸೌಕರ್ಯ ಹಾಗೂ ಸ್ವಚ್ಛ ಪರಿಸರದ ಅನುಭವ ಪಡೆದು ಮರಳುವಂತಾಗಬೇಕು. –ಎಚ್.ಎಲ್. ಮೋಹನ್